ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 5 ಸಂಚಿಕೆ 37 ಸೆಪ್ಟೆಂಬರ್ 11, 2011 ರೂ. 5/- ಪುಟ 16

Blog :janashakthi.wordpress.com e-mail : js_weekly@yahoo.com





ಪ.ಬಂಗಾಳದಲ್ಲಿನ ಹಲ್ಲೆಗಳು ಭಾರತೀಯ ಜನತೆಗೆ ಮುನ್ನೆಚ್ಚರಿಕೆ



ಕಾಲದೆದೆಯಲ್ಲಿ ಸೇರಿಹೋದ ದುಡಿವ ವರ್ಗದ ಅಸಮಾನ್ಯ ನಾಯಕ ಕಾಮ್ರೇಡ್ ಎಂ.ಕೆ. ಪಂಧೆ

ಅಧಿವೇಶನ ಕರೆಯಲು ಹಿಂದೇಟೇಕೆ?

ಬಿಜೆಪಿ ಆಡಳಿತ: ಗಣಿ ಲೂಟಿಯ 'ಸುವರ್ಣ ಯುಗ'



ನೇಪಾಳದಲ್ಲೀಗ ಹೊಸ ಸರ್ಕಾರ

ಹಸಿವು – ಅವಮಾನ ಎರಡರ ವಿರುದ್ಧವೂ ಚಳುವಳಿಗೆ ನಿರ್ಧಾರ

ತುಮಕೂರಿನಲ್ಲಿ ಉದ್ಘಾಟನೆಗೊಂಡು ಅದೇ ಜಿಲ್ಲೆಯ ಕೊರಟಗೆರೆಯಲ್ಲಿ ಆಗಸ್ಟ್ 13 ರಿಂದ 15, 2011ರವರೆಗೆ ನಡೆದ ರಾಜ್ಯಮಟ್ಟದ ದಲಿತ ಹಕ್ಕುಗಳ ದಲಿತ ಪ್ರಶ್ನೆಗಳ ಕುರಿತ ಶಿಬಿರದ ಬಹಿರಂಗ ಕಲಾಪಗಳ ಬಗೆಗೆ ಓದಿದ್ದೀರಿ. ಮೂರು ದಿನಗಳ ಶಿಬಿರದಲ್ಲಿ ನಡೆದದ್ದೇನು. ತೀರ್ಮಾನವೇನು? ಓದಿ...

ಸುತ್ತಲೂ ಕಲ್ಲು ಬಂಡೆಗಳಿಂದ ಕೂಡಿದ ಗುಡ್ಡಗಳು. ಮಧ್ಯದಲ್ಲಿ ಪ್ರಶಾಂತವಾದ ಪ್ರದೇಶ. ಇಲ್ಲಿ ರಾಜ್ಯದ ದಲಿತರ ಸ್ಥಿತಿಗತಿಗಳ ಕುರಿತು ಗಂಭೀರ ಚರ್ಚೆ, ಚಿಂತನ – ಮಂಥನ ನಡೆಯುತ್ತಿತ್ತು, ಇದು ತುಮಕೂರು ಜಿಲ್ಲೆಯ ಕೊರಟಗೆರೆಯ ಹೊರ 'ವಲಯದಲ್ಲಿ ಸಿ.ಪಿ.ಐ.(ಎಂ) ಆಯೋಜಿಸಿದ್ದ ದಲಿತರ ಹಕ್ಕುಗಳಿಗಾಗಿ ನಡೆದ ರಾಜ್ಯ ಮಟ್ಟದ ಅಧ್ಯಯನ ಶಿಬಿರ ದಲ್ಲಿನ ವಾತಾವರಣ.

20 ಜಿಲ್ಲೆಗಳು, 53 ತಾಲ್ಲೂಕುಗಳನ್ನು ಪ್ರತಿನಿಧಿಸಿ 233 ಪ್ರತಿನಿಧಿಗಳು ಭಾಗವಹಿಸಿದ್ದರು. ಇದು ಬೇರೆ ಅಧ್ಯಯನ ಶಿಬಿರಗಳಿಗಿಂತ ವಿಭಿನ್ನವಾಗಿತ್ತು, ಏಕೆಂದರೆ ಇಲ್ಲಿ ನಡೆದ ಪಾಠಗಳು ವಿಭಿನ್ನವಾಗಿದ್ದವು. ಮತ್ತು ಇಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ವಿಶೇಷವಾಗಿದ್ದರು. ಹಲವಾರು ಜನ ಸಂಗಾತಿಗಳು ಅಸ್ಪೃಶ್ಯತೆ ವಿರುದ್ಧದ ಹೊಸ ಹೋರಾಟದ ಅನುಭವ ಹುರುಪಿನಿಂದ ಬಂದವರಾಗಿದ್ದರು. ಈ ಶಿಬಿರದಲ್ಲಿ ಜಾತಿಯ ಹುಟ್ಟು ಮತ್ತು ಅದರ ಬೆಳವಣಿಗೆ, ದಲಿತರ ವಿಮೋಚನೆಯ ದಾರಿ, ದಲಿತರ ಐಕ್ಯತೆಯ ಸವಾಲುಗಳು, ಕರ್ನಾಟಕದ ದಲಿತರ ಸ್ಥಿತಿಗತಿ ಮತ್ತು ದೇಶದಲ್ಲಿ ಜಾತಿ ಅಸ್ಪೃಶ್ಯತೆ ವಿರುದ್ಧದ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರ ಎಂಬ ವಿವಿದ ಪಾಠಗಳು ನಡೆದವು ಈ ಶಿಬಿರಕ್ಕೆ ಭಾಗವಹಿಸಿದ್ದ ಬಹುತೇಕ ಪ್ರತಿನಿಧಿಗಳು ತಾಲ್ಲೂಕು ಮಟ್ಟಗಳಲ್ಲಿ ದಲಿತ ಹಕ್ಕುಗಳ ಸಮಾವೇಶಗಳನ್ನು ನಡೆಸಿ ದಲಿತರ ನಡುವೆ ಕೆಲಸ ಪ್ರಾರಂಭಿಸಿದ್ದವರು. ಆದ್ದರಿಂದ ಇಲ್ಲಿ ನಡೆದ ಚರ್ಚೆಗಳು ಹೆಚ್ಚು



ಶಿಬಿರದಲ್ಲಿ ಕಾಂ: ಗೋಪಾಲಕೃಷ್ಣ ಅರಳಹಳ್ಳಿ,, ಕಾಂ: ಜಿ.ವಿ.ಶ್ರೀರಾಮರೆಡ್ಡಿ

ಅರ್ಥಗರ್ಭಿತವಾಗಿದ್ದವು.

ಇಡೀ ಶಿಬಿರದಲ್ಲಿ ಚರ್ಚೆಯಾದ ಪ್ರಮುಖವಾದ ಕೆಲವು ಅಂಶಗಳನ್ನು ಗಮನಿಸಿದರೆ ಶಿಬಿರದ ಮಹತ್ವ ತಿಳಿಯುತ್ತದೆ. ಅದರಲ್ಲಿ ಪ್ರಮುಖವಾದದ್ದು ಇದುವರೆಗು ಹಲವರು ಜಾತಿ ಎಂಬುದು ದೇವರ ಸೃಷ್ಠಿ ಅದನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ, ಅದನ್ನು ಹಾಗೇ ಒಪ್ಪಿಕೊಂಡು ಪಾಲಿಸಬೇಕೆಂದುಕೊಂಡಿದ್ದವರು. ಅದು ಶುದ್ದ ಸುಳ್ಳು ಜಾತಿಯು ಪುರೋಹಿತಶಾಹಿಯು ಶೋಷಕ ವರ್ಗಗಳ ಶೋಷಣೆಗೆ ರೂಪಿಸಿ ಕೊಟ್ಟಿರುವ ವಂಚನೆಯ ಸಾಧನ, ವ್ಯವಸ್ಥಿತ ಸಂಚು ಎಂದು ಚರ್ಚೆ ಯಲ್ಲಿ ಹೊಸಬರಿಗೆ ಸ್ಪಷ್ಟವಾಯಿತು. ಜೊತೆಗೆ ಭಾರತ ಉಪಖಂಡವನ್ನು ಬಿಟ್ಟು ಜಗತ್ತಿನ ಬೇರೆಲ್ಲೂ ಕಾಣಸಿಗದ ಅತ್ಯಂತ ಅಮಾನುಷ ಜಾತಿ ಅಸ್ಪೃಶ್ಯತೆಯನ್ನು ಮನುಷ್ಯರನ್ನು ಪ್ರೀತಿಸುವ ಯಾರೂ ಆಚರಿಸುವುದಿಲ್ಲ. ನಮ್ಮ ಸಮಾಜದಲ್ಲಿರುವ ಜಾತಿ ತಾರತಮ್ಯ ಅಸ್ಪೃಶ್ಯತೆಗಳನ್ನು ಗುರುತಿಸಿ ಅದರ ವಿರುದ್ಧ ನಿರ್ಣಾಯಕ ಹೋರಾಟಗಳನ್ನು ರೂಪಿಸಬೇಕೆಂದು ಶಿಭಿರಾರ್ಥಿಗಳು ದೃಢ ಸಂಕಲ್ಪ ಮಾಡಿದರು. ಶಿಬಿರದಲ್ಲಿ ಚರ್ಚೆಗೊಳಪಟ್ಟ ಮತ್ತೊಂದು ಗಂಬೀರ ವಿಷಯವೆಂದರೆ ಜಾತಿ ಅಸ್ಪೃಶ್ಯತೆ ನಾಶವಾಗಿ ದಲಿತರು ಸ್ವಾವಲಂಬಿಗಳಾಗಿ ಬದುಕಬೇಕಾದರೆ ಹಸಿವು–ಅವಮಾನದ ಪ್ರಶ್ನೆಗಳನ್ನ, ಸಾಮಾಜಿಕ ಮತ್ತು ಆರ್ಥಿಕ ಪ್ರಶ್ನೆಗಳನ್ನು ಸಮಾನವಾಗಿ ಕೈಗೆತ್ತಿ ಕೊಂಡು ಚಳುವಳಿಗಳನ್ನು ರೂಪಿಸಬೇಕೆಂಬುದು ಶಿಬಿರದ ಒಟ್ಟು ಸಾರಾಂಶವಾಗಿತ್ತು. ಕಮ್ಯುನಿಸ್ಟರು. ದಲಿತರಿಗಾಗುವ ಅಪಮಾನ ಇತ್ಯಾದಿ. ಸಾಮಾಜಿಕ ಪ್ರಶ್ನೆಗಳನ್ನು ಕಡೆಗಣಿಸಿದ್ದಾರೆ ಎಂಬ ಆಳುವ ವರ್ಗಗಳ, ಮತ್ತವರ ಮಾಧ್ಯಮ ಗಳ ಅಪಪ್ರಚಾರದ ಹಿಂದಿನ ಮರ್ಮವನ್ನು ಅರ್ಥಮಾಡಿಕೊಂಡ ಪ್ರತಿನಿಧಿಗಳು ಕಮ್ಯುನಿಸ್ಟ್ ಪಕ್ಷ ಹುಟ್ಟಿದಾಗಿನಿಂದ ಇಲ್ಲಿಯವರೆಗು ದೇಶಾದ್ಯಂತ ನಡೆಸಿರುವ ಜಾತಿ ಅಸ್ಪೃಶ್ಯತೆ ವಿರುದ್ಧದ ಹೋರಾಟಗಳು ಮತ್ತು ದಲಿತರ ಆರ್ಥಿಕ ಬೇಡಿಕೆಗಳಿಗಾಗಿ ನಡೆಸಲಾದ ಹೋರಾಟಗಳು ಮತ್ತು ಎಡಪಕ್ಷಗಳು ಅಧಿಕಾರ ನಡೆಸಿರುವ ರಾಜ್ಯಗಳಲ್ಲಿ ಜಾರಿಗೆತಂದ ಭೂಸುಧಾರಣೆ (ದಲಿತರ ಕೈಗಳಿಗೆ ಭೂಮಿ) ಮತ್ತು ದಲಿತರಿಗಾಗಿ ತಂದ ಕಾರ್ಯಕ್ರಮಗಳು ಅಕ್ಷರಶಹಃ ಅಲ್ಲಿ ದಲಿತರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಮಾಜದ ಮುಖ್ಯವಾಹಿನಿಗೆ ತರುವ ಪ್ರಾಮಾಣಿಕ ಪ್ರಯತ್ನ ಎಂದು ಅರ್ಥಮಾಡಿಕೊಂಡರು.

ಈ ಶಿಬಿರ ಕಾರ್ಯಕರ್ತರಿಗೆ ಕೆಳಹಂತದಲ್ಲಿ ಕೆಲಸ ನಿರ್ವಹಿಸಲು ಸ್ಪಷ್ಟ ಸೈದ್ಧಾಂತಿಕ ಅಸ್ತ್ರವನ್ನು ನೀಡಿದೆ ಎಂಬುದರಲ್ಲಿ ಅನುಮಾನವೇ ಇಲ್ಲ.

– ಹೆಚ್.ಆರ್.ನವೀನ್ ಕುಮಾರ್

ಭರವಸೆ

ರಾಜಕಾರಣಿಯಂತೆ ಮಠಗುಡಿಯ ಜನರು
ಭರವಸೆಯ ಕೊಡುವುದನು ಎಂದಿಗೂ ಬಿಡರು
ಎಲ್ಲಿಹನು ಆ ನಿಮ್ಮ ಅವತಾರಿ ಪುರುಷ
ಸಜ್ಜನರ ನೋವುಗಳು ಇನ್ನೆಷ್ಟು ವರುಷ?

- ವಿಡಂಬಾರಿ

ಅಕ್ಷರ ದಾಸೋಹ ನೌಕರರಿಂದ ಬೆಳಗಾವಿ ಜಿಲ್ಲಾ ಪಂಚಾಯತ ಮುತ್ತಿಗೆ

ವರದಿ ಗೈಬು ಜೈನೆಖಾನ

2003–04 ರಲ್ಲಿ ಸರ್ವ ಶಿಕ್ಷಣ ಅಭಿಯಾನದ ಯೋಜನೆಯಡಿಯಲ್ಲಿ ಬಿಸಿ ಅಡುಗೆ ಪ್ರಾರಂಭ ಮಾಡಿದ ಸರಕಾರ ಅವತ್ತು ನೂರು ಜನ ವಿದ್ಯಾರ್ಥಿಗಳ ಸಂಖ್ಯೆ ಇದ್ದರೆ ಮೂರು ಜನ ಅಡುಗೆ ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕೆಂದು ಆದೇಶ ಹೊರಡಿಸಿ, ಇವತ್ತು ಅದೇ ಕೇಂದ್ರ ರಾಜ್ಯ ಸರಕಾರಗಳು ಬಿಸಿ ಊಟದ ಯೋಜನೆಯನ್ನು ಮಠ ಮಾನ್ಯಗಳಿಗೆ ಕೊಟ್ಟು ಯೋಜನೆಯಲ್ಲಿ ದುಡಿಯುತ್ತಿರುವ ಬಡ, ನಿರ್ಗತಿಕ, ವಿಧವಾ ಹೆಣ್ಣು ಮಕ್ಕಳನ್ನು ಕೆಲಸದಿಂದ ವಜಾ ಮಾಡುವ ನೀಚ ಕೆಲಸಕ್ಕೆ ಇಳಿದಿದೆ. ಕೇವಲ 3–4 ಜನ ವಿದ್ಯಾರ್ತಿಗಳು ಕಡಿಮೆ ಇದ್ದರೆ ಕೆಲಸದಿಂದ ವಜಾ ಮಾಡುವ ಕೇಂದ್ರ ರಾಜ್ಯ ಸರಕಾರದ ನೀತಿ ಖಂಡನೀಯ ಎಂದು ಜಿಲ್ಲಾ ಪಂಚಾಯ್ತಿ ಎದುರು ನಡೆದ ಸಭೆಯನ್ನುದ್ದೇಶಿಸಿ ಜಿಲ್ಲಾ ಕಾರ್ಯದರ್ಶಿಯಾದ ಗೈಬು ಜೈನೆಖಾನ ಮಾತನಾಡಿದರು.

ಬಿಸಿ ಅಡುಗೆ ಯೋಜನೆಯಲ್ಲಿ ಸಾವಿರಾರು ಹೆಣ್ಣು ಮಕ್ಕಳಿಗೆ ನಾವು ಕೆಲಸ ಕೊಟ್ಟಿದ್ದೇವೆ ಎಂದು ಜಂಭ ಕೊಚ್ಚಿಕೊಳ್ಳುತ್ತಿರುವ ಸರಕಾರ ಇವತ್ತು ಬಿಸಿ ಊಟದ ಯೋಜನೆಯನ್ನು ಖಾಸಗಿಕರಣ ಮಾಡಿ, ಮಕ್ಕಳ ಸಂಖ್ಯೆ ಆಧಾರದಲ್ಲಿ ಬಡ ಹೆಣ್ಣು ಮಕ್ಕಳನ್ನು ಕೆಲಸದಿಂದ ವಜಾ ಮಾಡುವ ನೀತಿಯನ್ನು ಅನುಸರಿಸುತ್ತಿದೆ. ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ವೇತನ ಕೊಡಬೇಕೆಂದು, ಕೆಲಸದ ಭದ್ರತೆ ಕೊಡಬೇಕೆಂದು ಅನೇಕ ಹೋರಾಟ ನಡೆಸಿದರು ಸರಕಾರ ಮಾತುಕತೆ ನಡೆಸಿ ಸುಳ್ಳು ಭರವಸೆಗಳನ್ನು ಕೊಟ್ಟು ಕಾರ್ಮಿಕ ವಿರೋಧ ನೀತಿಯನ್ನು ಅನುಸರಿಸುತ್ತಿದೆ. ಬಿಸಿ ಊಟದ ಖಾಸಗಿಕರಣದ ನೀತಿ ಕೈ ಬಿಡುವವರೆಗೆ ನಮ್ಮ ಹೋರಾಟ ನಿಲ್ಲುವದಿಲ್ಲವೆಂದು ಹಿರಿಯ ಕಾರ್ಮಿಕ ಮುಖಂಡರಾದ ವ್ಹಿ.ಪಿ.ಕುಲಕರ್ಣಿರವರು ಮಾತನಾಡಿದರು.



ಮಧ್ಯಾಹ್ನ 12–00 ಘಂಟೆಗೆ ಸುಮಾರು 500 ಜನ ಬಿಸಿ ಊಟದ ನೌಕರರು ಬೆಳಗಾವಿಯ ಅಂಬೇಡ್ಕರ ಗಾರ್ಡನ ದಲ್ಲಿ ಸೇರಿ ಬೃಹತ್ ಮೆರವಣಿಗೆಯ ಮೂಲಕ ಜಿಲ್ಲಾ ಪಂಚಾಯ್ತಿ ಕಛೇರಿ ಮುತ್ತಿಗೆ ಹಾಕಿ ಮಕ್ಕಳ ಸಂಖ್ಯೆಯ ಆಧಾರದಲ್ಲಿ ನಮಗೆ ಕೆಲಸದಿಂದ ವಜಾ ಮಾಡಬಾರದು. ಪ್ರತಿ ತಿಂಗಳು ಮೊದಲವಾರದಲ್ಲಿ ವೇತನ ಕೊಡಬೇಕು. ಕೆಲಸದ ಭದ್ರತೆ ಕೊಡಬೇಕೆಂದು ಒತ್ತಾಯಿಸಿ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಮೂಲಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಮನವಿ ಅರ್ಪಿಸಿದರು.

ಅಕ್ಷರ ದಾಸೋಹ ಯೋಜನೆಯ ಜಿಲ್ಲಾ ಸಮನ್ವಯ ಅಧಿಕಾರಿ ಶಿವಣ್ಣ ಹಾಗೂ ಜಿಲ್ಲಾ ಪಂಚಾಯತ ಸಹ ಕಾರ್ಯದರ್ಶಿ ಬಸರಿಹಳ್ಳಿರವರು `ಪ್ರತಿಭಟನಾ ನಿರತ ನೌಕರರನ್ನು ಉದ್ದೇಶಿಸಿ ಮಾತನಾಡಿ ಕೆಲಸದಿಂದ ವಜಾ ಆದ ಮಹಿಳೆಯರಿಗೆ ಎಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದೆ ಅಲ್ಲಿ ಅವರಿಗೆ ಕೆಲಸ ಕೊಡುತ್ತೇವೆ. ತಿಂಗಳವರೆಗೆ ನೋಡಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಲ್ಲಿ ಯಾರಿಗೂ ಕೆಲಸದಿಂದ ತೆಗೆಯುವದಿಲ್ಲಾ ಹಾಗೂ ಪ್ರತಿ ತಿಂಗಳ ಸರಿಯಾದ ಸಮಯಕ್ಕೆ ವೇತನ ನೀಡುವೆವು ಎಂದು ಭರವಸೆ ಕೊಟ್ಟರು.

ಸಂಪಾದಕೀಯ

ಅಧಿವೇಶನ ಕರೆಯಲು ಹಿಂದೇಟು?

ಕರ್ನಾಟಕದ ವಿಧಾನಸಭೆಯ ಅಧಿವೇಶನವನ್ನು ಕರೆಯಲು ನಿರಾಕರಿಸಿರುವ ಮುಖ್ಯಮಂತ್ರಿ ಸದಾನಂದಗೌಡರು ನೀಡುತ್ತಿರುವ ಕಾರಣಗಳು ಅರ್ಥಹೀನವಾಗಿವೆ. ಅಧಿವೇಶನ ಸೇರಬೇಕೆಂದ ವಿರೋಧಪಕ್ಷಗಳ ಮಾತನ್ನು ತಿರಸ್ಕರಿಸುತ್ತಾ, 'ಅವರು ಹೇಳಿದರೆಂದು ಕರೆಯಬೇಕಿಲ್ಲ' ಎನ್ನುವ ಅವರ ಉತ್ತರ ಬಾರಿ ಅಹಂಕಾರ ಮಾತ್ರವಲ್ಲ, ಅತ್ಯಂತ ಪ್ರಜಾಪ್ರಭುತ್ವ ವಿರೋಧಿ ನೀತಿಯಾಗಿದೆ. ಸಂಸದೀಯ ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷ ಹೇಗೋ ಹಾಗೆಯೇ ವಿರೋಧಪಕ್ಷಗಳಿಗೂ ಅಷ್ಟೇ ಮಹತ್ವದ ಸ್ಥಾನವಿದೆಯೆಂಬುದನ್ನು ಮುಖ್ಯಮಂತ್ರಿಗಳು ಅರಿಯಬೇಕು. ಆದರೆ ಬಿಜೆಪಿಯು ವಿರೋಧಪಕ್ಷಗಳನ್ನು, ಅವುಗಳ ಪಾತ್ರವನ್ನು ನಿರಂತರವಾಗಿ ಧಿಕ್ಕರಿಸುತ್ತಲೇ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಸದಾನಂದಗೌಡರ ನಿರಾಕರಣೆ ಖಂಡನೀಯವೂ ಆಗಿದೆ.


ವಿಧಾನಸಭೆಯ ಕಲಾಪಗಳು ವರ್ಷದಲ್ಲಿ ಕನಿಷ್ಠ ನೂರು ದಿನಗಳಾದರೂ ನಡೆಯಬೇಕು ಎಂಬ ನಿರ್ದೇಶನವನ್ನು ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಂದಿನಿಂದಲೂ ಧಿಕ್ಕರಿಸುತ್ತಲೇ ಬಂದಿರುವುದು, ಶಾಸಕಾಂಗಕ್ಕೂ, ಪ್ರಜಾಪ್ರಭುತ್ವಕ್ಕೂ ಆ ಮೂಲಕ ಜನತೆಗೆ ಎಸಗಿದ ಅಪಚಾರವಾಗಿದೆ. ಅದೇ ಹಿಂದಿನ ಜಾಡನ್ನೇ ಸದಾನಂದಗೌಡರೂ ಹಿಡಿದಿರುವುದು ತಾವು 'ಭಿನ್ನ' ಎಂಬ ಘೋಷಣೆಯನ್ನು ಬಯಲುಗೊಳಿಸಿದೆ.

ರಾಜ್ಯದ ಜನತೆ ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಒಂದೆಡೆ ವಿಪರೀತ ಮಳೆಯಿಂದಾದ ... ಅದೇ ಹೊತ್ತಿನಲ್ಲಿ ಸುಮಾರು 50 ತಾಲ್ಲೂಕುಗಳಲ್ಲಿ ಬರಗಾಲ, ಬಿತ್ತನೆ ಬೀಜ, ಗೊಬ್ಬರ ಸಿಗದೇ ಕಂಗಾಲಾದ ಕೃಷಿಕರು, ಬೆಳೆ ಸಿಗದೇ ಪರದಾಡುವ, ಫಸಲು ಬೀದಿಗೆ ಸುರಿದು ರೋಧಿಸುತ್ತಿರುವ ಬೆಳೆಗಾರರು, ಗ್ರಾಮೀಣ ಕೃಷಿ ಕೂಲಿಕಾರರ ವಲಸೆ, ನಿರುದ್ಯೋಗ–ನಿಂತೇಹೋಗಿರುವ ಉದ್ಯೋಗ ಖಾತ್ರಿ ಯೋಜನೆ ಜಾರಿ, ಬಗೆಹರಿಯದ ಕಾರ್ಮಿಕವರ್ಗದ ಸಮಸ್ಯೆಗಳು, ಸಾಮಾಜಿಕ–ಶೈಕ್ಷಣಿಕವಾದ ಹತ್ತಾರು ಪ್ರಶ್ನೆಗಳು ಹೆಚ್ಚುತ್ತಲೇ ಇವೆ. ಜನರ ಕೂಗಿಗೆ ಸರ್ಕಾರದ್ದು ಅದೇ ನಿರ್ಲಕ್ಷ್ಯತನ.

ಇದರೊಂದಿಗೆ ಅತ್ಯಂತ ಪ್ರಮುಖವಾಗಿ ಲೋಕಾಯುಕ್ತರ ವರದಿಯಿದೆ. ಅಕ್ರಮ–ಹಗರಣಗಳು ಬಯಲುಗೊಂಡಿವೆ. ಗಣಿ ಭೂ ಮಾಫಿಯಾಗಳ ಕುಕೃತ್ಯಗಳು ಕ್ರಮಗಳು ಚರ್ಚೆಯಾಗಬೇಡವೇ?

ಅಧಿವೇಶನವನ್ನು ಕರೆಯದೇ ಇರುವುದಕ್ಕೆ ಹಲವು ಕುತಂತ್ರಗಳೂ ಇವೆ. ಇಡೀ ಸರ್ಕಾರವೇ ಭ್ರಷ್ಟಾಚಾರದಲ್ಲಿ ಮುಳುಗೆದ್ದಿರುವ ವಿವರಗಳು ಲೋಕಾ ಯುಕ್ತರ ವರದಿಯಲ್ಲಿದೆ. ಮುಖ್ಯಮಂತ್ರಿ, ಮಂತ್ರಿಗಳು ಅಧಿಕಾರಿಗಳ ಪ್ರಧಾನ ಪಾಲಿದೆ. ಅಧಿವೇಶನ ಕರೆದರೆ ಇವೆಲ್ಲಕ್ಕೂ ಉತ್ತರ ಹೇಳ ಬೇಕಾಗುತ್ತದೆ. ಈಗಾಗಲೇ ಉನ್ನತ ಅಧ್ಯಯನ ಸಮಿತಿ ರಚಿಸಿ ಕಾಲಹರಣ ದಿಂದ ವರದಿಯನ್ನೇ ಕೊಲ್ಲುವ ಸಂಚಿನಲ್ಲಿ ಸಾಗಿರುವ ಸರ್ಕಾರ ಅಧಿವೇಶನದಲ್ಲಿ ಆ ವಿಷಯವೇ ಗಂಭೀರ ಚರ್ಚೆಯಾಗಿ ಕ್ರಮವಹಿಸು ವಂತಾಗುವುದನ್ನು ಈ ಮೂಲಕ ತಪ್ಪಿಸುತ್ತಿದೆ. ಮೇಲಾಗಿ ಸದಾನಂದ ಗೌಡರ ಸರ್ಕಾರ ಗುಂಪುಗಾರಿಕೆ ಬ್ಲಾಕ್‌ಮೇಲ್ ಒತ್ತಡಗಳಿಂದ ಬಿರಿಯುತ್ತಿದ್ದು, ಮಂತ್ರಿಗಿರಿಯ ಲಾಲಸೆಗಳು ಇನ್ನಷ್ಟು ಅದನ್ನು ಅತಂತ್ರ ಗೊಳಿಸಲಿವೆ. ಅಂತಹ ಅಭದ್ರತೆಯು ಸರ್ಕಾರದ ಆಡಳಿತ. ಕಾರ್ಯನಿರ್ವಹಣೆಯನ್ನು ಹಾಳುಗೆಡವಿದೆ. ಮಂತ್ರಿಗಳನ್ನಾಗಿಸಲೇಬೇಕೆಂದು ಗಣಿ ಅಕ್ರಮಗಳ ಕಳಂಕಿತ ಆರೋಪಿಗಳಾದ ರೆಡ್ಡಿ ಕಂಪನಿ ಪಟ್ಟು ಹಿಡಿದು 15 ಶಾಸಕರೊಂದಿಗೆ ವಿದೇಶಿ ಪ್ರವಾಸ ನಡೆಸುತ್ತಾ, ಇಲ್ಲವಾದರೆ ಸರ್ಕಾರವನ್ನೇ ಬೀಳಿಸುವ ಬೆದರಿಕೆಯೊಡ್ಡುತ್ತಿರುವುದು, ಸ್ವತಃ ಬಿಜೆಪಿಯೇ ಬಹುಮತದ ಬೆದರಿಕೆ ಎದುರಿಸುವಂತಾಗಬಹುದಾಗಿದೆ. ಈಜಗಳ ದಿಂದಾಗಿ ಸಂಪುಟದ ಮೂರನೇಯ ವಿಸ್ತರಣೆಯೂ ಅಸಾಧ್ಯವಾಗಿದೆ. ಇಷ್ಟೆಲ್ಲಾ ಹಗರಣ–ತನಿಖೆ–ಒತ್ತಡಗಳಿರುವಾಗಲೂ ಸದಾನಂದಗೌಡರ ಸರ್ಕಾರ ಅನೈತಿಕವಾಗಿ ಹಣ ದೋಚಲು ಭ್ರಷ್ಟ ಮಾರ್ಗಗಳನ್ನು ಬಿಟ್ಟಿಲ್ಲ. ಈಗಲೂ ಅದೇ ಭ್ರಷ್ಟಾಚಾರದ ವಿಧಾನಗಳನ್ನು ಮುಂದುವರಿಸಿದೆ. ಮುಖ್ಯಮಂತ್ರಿಯ ಮೇಲೆಯೇ ಭೂ ಹಗರಣದ ಆರೋಪವಿದೆ. ಅಧಿವೇಶನದಲ್ಲಿ ಇಂತಹ ಪ್ರಶ್ನೆಗಳು ಬರುವುದನ್ನು ನಿರೀಕ್ಷಿಸಿರುವ ಬಿಜೆಪಿಯು ಶಾಸಕಾಂಗವನ್ನು ಎದುರಿಸದೇ ಪಲಾಯನ ಮಾರ್ಗವನ್ನು ಹಿಡಿದಿದೆ. ತನ್ನ ಸ್ವಾರ್ಥ, ಅಧಿಕಾರ ದಾಹಕ್ಕೆ ಇಡೀ ಪ್ರಜಾಪ್ರಭುತ್ವ ವ್ಯವಸ್ಥೆ, ಮೌಲ್ಯಗಳನ್ನೇ ನಾಶಗೊಳಿಸಲು ಬಿಜೆಪಿ ಹೊರಟಿದೆ. ಇದಕ್ಕೆ ಅವಕಾಶ ನೀಡಲೇಬಾರದು. ಕೂಡಲೇ ಅಧಿವೇಶನ ಸೇರಲೇಬೇಕು. ಆ ಫ್ಯಾಸಿಸ್ಟ್ ಪ್ರವೃತ್ತಿಯನ್ನು ಎಲ್ಲರೂ ಒಕ್ಕೊರಲಿನಿಂದ ವಿರೋಧಿಸಬೇಕು. ಲೋಕಾಯುಕ್ತ ವರದಿಯನ್ನು ಸರ್ಕಾರ ಒಪ್ಪಿ ತಪ್ಪಿತಸ್ಥರ ಮೇಲೆ ಇಡಿಯಾಗಿ ಕ್ರಮ ಕೈಗೊಳ್ಳಬೇಕು. ಭ್ರಷ್ಟಾಚಾರದ ವಿರುದ್ಧ, ಜನಲೋಕಪಾಲ್‌ಗಾಗಿ ನಡೆದ ಜನ ಚಳುವಳಿಯ ಶಕ್ತಿಯು ಇದರತ್ತಲೂ ತಿರುಗಬೇಕು. ಜನತೆಯ ಎಚ್ಚರವೇ ಪ್ರಜಾಪ್ರಭುತ್ವದ ರಕ್ಷಣೆಯ ಕಾವಲು ಕೋಟೆ ಎಂಬುದನ್ನು ಮತ್ತೊಮ್ಮೆ ಸಾರಬೇಕು. ▲

ಅಣ್ಣಾ ನೆರಳಲ್ಲಿ ನಿಂತ 'ನೀತಿವಂತರು'



ಜನ ಲೋಕಪಾಲ್‌ಗಾಗಿ ನಡೆಯುತ್ತಿದ್ದ ಚಳುವಳಿ ವಿಜಯೋತ್ಸವದಲ್ಲಿ ಮುಕ್ತಾಯ ವಾಯಿತು. ದೇಶದ ಹಲವೆಡೆ ನಡೆದಂತೆ ಕರ್ನಾಟಕದಲ್ಲಿಯೂ ಅತ್ಯುತ್ತಮ ಸ್ಪಂದನ ಸಿಕ್ಕಿತು. ಇದಕ್ಕೆ ಕಾರಣ ಬಿಜೆಪಿ ಆಡಳಿತದಲ್ಲಿ ಕರ್ನಾಟಕ 'ಭ್ರಷ್ಟಾಚಾರದಲ್ಲಿ ನಂ.1" ಎಂಬ ಪಟ್ಟ, ನಿತ್ಯವೂ ಹಗರಣ–ಅಕ್ರಮ, ಬ್ರಹ್ಮಾಂಡ ಭ್ರಷ್ಟಾಚಾರ ಲೋಕಾಯುಕ್ತರ ವರದಿ, ಅದನ್ನು ಮುಚ್ಚಿಕೊಳ್ಳಲು ನಡೆದಿರುವ ಹಲವು ವರಸೆ, ಮಹಾನಾಯಕರ ಬಂಧನದ ಭೀತಿ ಇತ್ಯಾದಿ ನಿತ್ಯ ಸುದ್ದಿಗಳಿಂದ ರಾಜ್ಯದ ಜನತೆಯ ಬೇಸತ್ತ ಮನೋಭಾವ 'ಅಣ್ಣಾ' ಚಳುವಳಿಯ ಯಶಸ್ಸಿ ಹಿಂದಿದ್ದ ಪ್ರಮುಖ ಭೂಮಿಕೆ.

ಇದರಲ್ಲಿ ವಿವಿಧ ವಿಭಾಗಗಳ ಜನರು, ವಿಶೇಷವಾಗಿ ಎಲ್ಲೆಡೆಗಳಂತೆ ಮಧ್ಯಮ–ಮೇಲ್ ಮಧ್ಯಮ ವರ್ಗದ ಜನ ಐಟಿ–ಬಿಟಿ, ಕಾರ್ಪೋರೇಟ್ ಉದ್ಯೋಗಿಗಳು, ವ್ಯಾಪಾರಸ್ಥರು, ಕಾಣಬಂದರು. ವಿಶೇಷವಾಗಿ ವಿದ್ಯಾರ್ಥಿ–ಯುವಜನರು ಅಪಾರ ಸಂಖ್ಯೆಯಲ್ಲಿ ಉತ್ಸಾಹದಿಂದ ತೊಡಗಿದ್ದು ಸಹ ಗಮನಾರ್ಹ. ಇದೇ ಹೊತ್ತಿನಲ್ಲಿ ಟಿ.ವಿ., ಪತ್ರಿಕೆ, ಎಫ್.ಎಂ.ರೇಡಿಯೋದಂತಹ ಮಾಧ್ಯಮಗಳು ಹಗಲುರಾತ್ರಿ ಗಂಟಲು ಹರಿದುಕೊಂಡು, ಚಳುವಳಿಗೆ ಉಸಿರು ದೂಡುತ್ತಿದ್ದುದು ಜನರನ್ನು ಅಣಿನೆರೆಸುವಲ್ಲಿ ಸಹಾಯಕವಾಯಿತು. ಇದು 'ಮೀಡಿಯಾ ಮೊಬಲ್ ಜೇಷನ್' ಸಹ.

ಭ್ರಷ್ಟಾಚಾರದ ವಿರುದ್ಧದ ಈ ಚಳುವಳಿಯ ಕಾವಿನಲ್ಲಿ ಮೈ ಕಾಯಿಸಿಕೊಂಡ 'ನೀತಿ ವಂತರಿಗೂ' ಇಲ್ಲಿ ಕೊರತೆಯಿರಲಿಲ್ಲ. ಕಳಂಕಿತರ ಇದೇ ಚೆಡ್ಡಿಪಡೆ ಇದರಲ್ಲಿ ಬಣ್ಣ ಬಳೆದುಕೊಂಡಿದ್ದಲ್ಲದೇ, ಸಂಘಟನಾತ್ಮಕ ವಾಗಿ ದುರ್ಬಳಕೆ ಮಾಡಲು ಯತ್ನಿಸಿತು. ಹಗರಣಗಳ ಒಂಡೆ ಹೊತ್ತಿರುವ 'ಯಡ್ಡಿ' ಯವರೂ ಹಜಾರೆಗೆ ಬೆಂಬಲಿಸಿ ಉಪವಾಸ ಕೂಡಲು ಮುಂದಾದರು. ಟೀಕೆಗಳಿಂದ ಮುಖ ತಗ್ಗಿಸಿದ್ದು, ರಾಜ್ಯದ ಜನತೆಗೆ ರಂಜನೆ ಒದಗಿಸಿತಲ್ಲದೆ, ಮಾನಗೇಡಿಯ ವಿವಿಧ ಮುಖಗಳನ್ನು ಕಾಣುವಂತಾಯಿತು. ಇವೆಲ್ಲವುಗಳ ನಡುವೆ ಎಲ್ಲವನ್ನು ಮೀರಿ ಲೋಕಪಾಲ್‌ಗಾಗಿ ಜನರು ಸ್ಪಂದಿಸಿದ್ದು ಆಳುವವರಿಗೆ ಎಚ್ಚರಿಕೆಯು ಹೌದು. ಅದನ್ನು ಪರಿಗಣಿಸುವರೇ?


ನೀತಿವಂತರು: ಈ 'ನೀತಿವಂತರ ಸಾಲಿನಲ್ಲಿ ನಿಂತವರು ಅನೇಕರು. ವಿಶೇಷವಾಗಿ ಪ್ರಸ್ತಾಪಿಸಬೇಕಾದ ಕೆಲವರೆಂದರೆ ಭೂಗಳ್ಳತನದ ಆರೋಪ ಎದುರಿಸುತ್ತಿರುವ ರವಿಶಂಕರ್ ಗುರೂಜಿ, ಇನ್ಫೋಸಿಸ್ ಮುಖ್ಯಸ್ಥರು, ಕಾರ್ಮಿಕ ದ್ರೋಹಿ ಮಾಧ್ಯಮೋದ್ಯಮಿ ಯಾಗಿರುವ ಭ್ರಷ್ಟ ಹಣದಿಂದ ಆಯ್ಕೆಯಾದ ಸಂಸದ ರಾಜೀವ್ ಚಂದ್ರಶೇಖರ್, ಇತ್ಯಾದಿ. ಈ ಚಂದ್ರಶೇಖರ್ 'ಅಣ್ಣಾ' ಚಳವಳಿಗೆ ಸೈದ್ಧಾಂತಿಕ ವಿವರಣೆ, ಅಭಿಪ್ರಾಯ ಕೊಡಲು ತನ್ನದೇ 7 ಶಿಫಾರಸ್ಸುಗಳನ್ನು ಮಂಡಿಸಿ ನಿರ್ಲಕ್ಷ್ಯಕ್ಕೆ ಈಡಾದರು. ಈ ನಡುವೆ ಬಯಲುಗೊಂಡ ಗಣಿ ಅಕ್ರಮಗಳ ಫಲಾನುಭವಿಗಳು ಮಾಧ್ಯಮಲೋಕದಲ್ಲಿ ಮಿಂಚುತ್ತಿರುವುದು ಬಯಲಾಯಿತು. ಜನಾರ್ಧನರೆಡ್ಡಿ ಕಂಪನಿಯಿಂದ ಪ್ರೆಸ್‌ಕ್ಲಬ್ ಅಲ್ಲದೇ ಸುಮಾರು 1.25 ಕೋಟಿಯಷ್ಟು ಹಣವನ್ನು ವಿ.ಭಟ್ಟ, 50 ಲಕ್ಷದಷ್ಟು ಆರ್.ಬಿ.ಎಂಬ ಪತ್ರಕರ್ತ ದೇಣಿಗೆ ಸ್ವೀಕರಿಸಿದ್ದಾರೆಂಬ ಮಾಹಿತಿ ಲೋಕಾಯುಕ್ತ ವರದಿಯಲ್ಲಿರುವುದು ಅಕ್ರಮ ಉದ್ಯಮಿಗಳಲ್ಲಿ ಮಾಧ್ಯಮದವರು ಪಾಲು ಏನು ಎಂಬುದನ್ನು ಬಯಲಿಗೆ ತಂತು. ಈ ವಿ.ಭಟ್ಟ, ಆರ್.ಬಿ. ಎಂದರೆ ಅವರು ವಿಶ್ವೇಶ್ವರಭಟ್, ರವಿಬೆಳಗೆರೆ

ಪುಟ 15ಕ್ಕೆ



ಕಾಮ್ರೇಡ್ ಹಕ್ಕಲಗೌಡ ಪಾಟೀಲ ಇನ್ನಿಲ್ಲ

ಕೃಷಿ ಕೂಲಿಕಾರರ ಸಂಘದ ಸಂತಾಪ



ಹಾವೇರಿ ಜಿಲ್ಲೆ, ಹಾನಗಲ್ ತಾಲ್ಲೂಕಿನ ಕಾಡಶೆಟ್ಟಿಹಳ್ಳಿ ಗ್ರಾಮದ ಕಾಮ್ರೇಡ್ ಹಕ್ಕಲಗೌಡ ಮರಿಗೌಡ ಪಾಟೀಲ್‌ಅವರು 01.08.2011ರ ಬೆಳಗಿನ ಜಾವ ಹುಬ್ಬಳ್ಳಿಯ ಕಿಮ್ಸ್ ಆಸ್ಪತೆಯಲ್ಲಿ ಹೃದಯಾಘಾತದಿಂದ ನಿಧನರಾದರು. ಅವರಿಗೆ ಸುಮಾರು 60 ವರ್ಷ ವಯಸ್ಸಾಗಿತ್ತು. ಅವರು ಮಡದಿ, ಮಕ್ಕಳು, ಮೊಮ್ಮಕ್ಕಳು, ಬಂಧುಬಳಗ ಅಲ್ಲದೆ ಅಪಾರ ಅಭಿಮಾನಿಗಳನ್ನು ಅಗಲಿದ್ದಾರೆ.

1990ರ ದಶಕದಲ್ಲಿ ಹಾನಗಲ್ ತಾಲ್ಲೂಕಿನಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ನಡೆದ ಸಮರಶೀಲ ಭೂ ಹೋರಾಟದಲ್ಲಿ ಕಾಮ್ರೆಡ್ ಹಕ್ಕಲಗೌಡರು ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದರು. ಹಿರಿಯ ರೈತ–ಕೂಲಿಕಾರರ ಮುಖಂಡರಾದ ಕಾಮ್ರೆಡ್ ಫಕೀರಪ್ಪ ಹೋತನಹಳ್ಳಿಯವರ ಒಡನಾಟದಿಂದಾಗಿ ಎಡ ಚಳುವಳಿಗೆ ಆಕರ್ಷಿತರಾದ ಅವರು ಹಾನಗಲ್ ತಾಲ್ಲೂಕಿನ ಅನೇಕ ಗ್ರಾಮಗಳ ಮತ್ತು ಲಂಬಾಣಿ ತಾಂಡಾಗಳ ಭೂ ರಹಿತ ಕೂಲಿಕಾರರನ್ನು ಸಂಘಟಿಸಿದ್ದರು. ಭೂ ಅತಿಕ್ರಮಣ ಚಳುವಳಿಯಲ್ಲಿ ಬಂಧನಕ್ಕೆ ಒಳಗಾಗಿದ್ದ ಅವರು ಬಿಂಗಾಪುರ, ಬೆಳಗಾಲಪೇಟೆ, ಗುಂಡೂರು, ಗುಂಡೂರು ತಾಂಡಾ, ಜಾನಗುಂಡಿ ತಾಂಡಾ, ಹನುಮಾಪುರ, ಹುಣಸೀಕಟ್ಟಿ, ಬಳಂಬೀಡ, ಮೊದಲಾದ ಗ್ರಾಮಗಳ ಐದಾರು ನೂರು ಕೃಷಿ ಕೂಲಿಕಾರರರೊಂದಿಗೆ ಒಂದು ತಿಂಗಳಿಗೂ ಹೆಚ್ಚು ಕಾಲ ಬೆಳಗಾವಿಯಲ್ಲಿ ಜೈಲುವಾಸ ಅನುಭವಿಸಿದ್ದರು. ಚಳುವಳಿಯ ಮುಖಂಡರಾಗಿದ್ದ ನಿತ್ಯಾನಂದಸ್ವಾಮಿ, ಫಕೀರಪ್ಪ ಹೋತನ ಹಳ್ಳಿ ಮತ್ತು ವಿ.ಡಿ.ತುಪ್ಪದ್‌ರವರನ್ನು ಬಂಧಿಸಿ ಹುಬ್ಬಳ್ಳಿ ಜೈಲಿನಲ್ಲಿ ಇಡಲಾಗಿತ್ತು. ಈ ಚಳುವಳಿಯ ಪರಿಣಾಮವಾಗಿ ಬಿಂಗಾಪುರ, ಹುಣಸೀಕಟ್ಟಿ ಮೊದಲಾದ ಗ್ರಾಮಗಳ ಭೂ ರಹಿತ ಕೂಲಿಕಾರರಿಗೆ ಬಗರ್‌ಹುಕುಂ ಸಾಗುವಳಿಯ ಹಕ್ಕುಪತ್ರಗಳು ದೊರೆಯು ವಂತಾಯಿತು. ಚಳುವಳಿಯ ಪ್ರಭಾವ ಪಕ್ಕದ ಶಿಗ್ಗಾಂವ, ಬ್ಯಾಡಗಿ, ಸವಣೂರು ಮೊದಲಾದ ತಾಲ್ಲೂಕು ಗಳಿಗೂ ಹಬ್ಬುವಂತಾಯಿತು. ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಕಾಮ್ರೇಡ್ ಎ.ವಿಜಯರಾಘವನ್, ಕಾಮ್ರೇಡ್ ಸುನೀತ್ ಚೋಪ್ರಾ, ಅಂದು ಜನವಾದಿ ಮಹಿಳಾ ಸಂಘದ ಅಖಿಲ ಭಾರತ ಮುಖಂಡರಾಗಿದ್ದ ಕಾಮ್ರೇಡ್ ಸುಭಾಷಿಣಿ ಅಲಿ ಮೊದಲಾದವರು ಹಾನಗಲ್ಲಿಗೆ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾಮ್ರೇಡ್ ಹಕ್ಕಲಗೌಡರು ಕೃಷಿ ಕೂಲಿಕಾರರ ಸಂಘದ ಹಾನಗಲ್ ತಾಲ್ಲೂಕು ಅಧ್ಯಕ್ಷರಾಗಿಯೂ, ರಾಜ್ಯ ಉಪಾಧ್ಯಕ್ಷರಾಗಿಯೂ ಕೆಲಸ ಮಾಡಿದರು. ಅವರ ನಿಧನದಿಂದಾಗಿ ಆ ಪ್ರದೇಶದ ರೈತ–ಕೂಲಿಕಾರರ ಚಳುವಳಿಗೆ ದೊಡ್ಡ ನಷ್ಟವಾಗಿದೆ. ಸಿಪಿಐ(ಎಂ) ಧಾರವಾಡ ಜಿಲ್ಲಾ ಸಂಘಟನಾ ಸಮಿತಿಯ ಕಾರ್ಯದರ್ಶಿ ಕಾಮ್ರೆಡ್ ಬಿ.ಎಸ್.ಸೊಪ್ಪಿನ, ಫಕೀರಪ್ಪ ಹೋತನಹಳ್ಳಿ, ವಿದ್ಯಾರ್ಥಿ ಯುವಜನ ಮುಖಂಡರಾದ ಬಸವರಾಜಪೂಜಾರ್, ಅಣ್ಣಪ್ಪ ಚಿಕ್ಕಣ್ಣನವರ್ ಅಲ್ಲದೆ ಸುತ್ತಲಿನ ಗ್ರಾಮಗಳ ಕೃಷಿ ಕೂಲಿಕಾರರು ನೂರಾರು ಸಂಖ್ಯೆಯಲ್ಲಿ ಕಾಮ್ರೇಡ್ ಹಕ್ಕಲಗೌಡರ ಅಂತ್ಯಯಾತ್ರೆಯಲ್ಲಿ ಭಾಗವಹಿಸಿದ್ದರು. ಕಾಂ॥ ಹಕ್ಕಲಗೌಡರ ಮೃತದೇಹದ ಮೇಲೆ ಕೃಷಿ ಕೂಲಿಕಾರರ ಸಂಘದ ಕೆಂಪು ಬಾವುಟವನ್ನು ಹೊದಿಸಲಾಗಿತ್ತು. ಸ್ಥಳದಲ್ಲೇ ಸಭೆಯೊಂದನ್ನು ನಡೆಸಿ ಅಗಲಿದ ಮುಖಂಡರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕೇರಳದ ಕಲ್ಲಿಕೋಟೆಯಲ್ಲಿ ಅಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಜನರಲ್ ಕೌನ್ಸಿಲ್ ಸಭೆ ನಡೆದಿತ್ತು. ಕಾಮ್ರೇಡ್ ಹಕ್ಕಲಗೌಡರ ನಿಧನದ ಸುದ್ದಿ ತಿಳಿದಾಗ ಸಂಘದ ಜನರಲ್ ಕೌನ್ಸಿಲ್ ಸಭೆಯು ಒಂದು ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿ ಸಲ್ಲಿಸಿತು. ಜನರಲ್ ಕೌನ್ಸಿಲ್ ಸಭೆ ಮುಗಿಸಿಕೊಂಡು ಬಂದ ನಂತರ ಸಂಘದ ರಾಜ್ಯ ಸಮಿತಿಯ ಅಧ್ಯಕ್ಷರಾದ ಕಾಮ್ರೇಡ್ ನಿತ್ಯಾನಂದಸ್ವಾಮಿ ಅವರು ಕಾಡಶೆಟ್ಟಿಹಳ್ಳಿಗೆ ಹೋಗಿ, ಕಾಮ್ರೇಡ್ ಹಕ್ಕಲಗೌಡರ ಸಮಾಧಿ ಸ್ಥಳಕ್ಕೆ ಭೇಟಿಕೊಟ್ಟು ಶ್ರದ್ಧಾಂಜಲಿ ಸಲ್ಲಿಸಿದರಲ್ಲದೆ ಅವರ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ಕೃಷಿ ಕೂಲಿಕಾರರ ಸಂಘದ ಮುಂಡಗೋಡ ಮುಖಂಡರಾದ ಭೀಮಣ್ಣ ಭೋವಿ, ಬಸವರಾಜ ಧಾರವಾಡ ಮತ್ತು ಹನುಮಂತಪ್ಪ ನ್ಯಾಸರ್ಗಿ ಅವರು ಜೊತೆಯಲ್ಲಿದ್ದರು. ▲

ಈ ವಾರ
ಪುಟ 3 ರಿಂದ

ಎಂಬ ಸತ್ಯವನ್ನು ಕಂಡವರು ಸಾರ್ವಜನಿಕವಾಗಿ ಹೇಳಿದರು. ಅದನ್ನು ಅವರು ನಿರಾಕರಿಸಲಿಲ್ಲ. ಬದಲಾಗಿ ತಮ್ಮ ಸ್ಥಾನದ ಹೆಚ್ಚಳವೆಂದೇ ಭಾವಿಸಿದಂತಿದೆ.

ಆಗ ಬಂದ ಪ್ರಶ್ನೆ ಭ್ರಷ್ಟಾಚಾರದ ವಿರುದ್ಧ ಹೋರಾಡುವ ಸಪ್ತ ಸೂತ್ರಧಾರಿ ರಾಜೀವ್‌ಚಂದ್ರಶೇಖರ್ ತನ್ನ ಮಾಲೀಕತ್ವದ ಕನ್ನಡ ಪ್ರಭ ಪತ್ರಿಕೆಯ ಆ ಸಂಪಾದಕನ ಭ್ರಷ್ಟಾಚಾರದ ಬಗ್ಗೆ ಏನು ಹೇಳುವರು? ಏನು ಮಾಡುವರು. ಆದರೆ ಈ ನೀತಿವಂತ ಮಾಲೀಕ ಏನೂ ಹೇಳಲಿಲ್ಲ, ಏನೂ ಮಾಡಲಿಲ್ಲ! ಹೇಳಿಕೇಳಿ ಉದ್ಯಮ ಅಲ್ಲವೇ?. ತನಗೆ ತಕ್ಕ ತುತ್ತೂರಿ ಕನ್ನಡಪ್ರಭದ ಈ ಸಂಪಾದಕ ಎಂದು ಸಮಾಧಾನಪಟ್ಟುಕೊಂಡಿದ್ದು ಇನ್ನಷ್ಟು ಸುದ್ಧಿಯಾಗಲಿಲ್ಲ!

ಕಟಕಟೆಗೆ ನಾಯಕರು!

ದುಡ್ಡು ಆಸ್ತಿ ಲೂಟಿ ಮಾಡುವಾಗ ಅಳುಕಿಲ್ಲದ, ಆದರೆ ನ್ಯಾಯಾಲಯದ ಪೀಠದೆದುರು ನಿಲ್ಲವುದು ಅವಮಾನವೆಂದೇ ಭಾವಿಸಿರುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅಲ್ಲಿಂದ ತಪ್ಪಿಸಿಕೊಳ್ಳುವ ನಾಟಕಗಳಿಗೆ ನ್ಯಾಯಾಲಯ ಸೊಪ್ಪು ಹಾಕಲಿಲ್ಲ. ಹೀಗಾಗಿ ಬಾಡಿದ ಮುಖದಿಂದ ಹೈಕೋರ್ಟ್‌ನ ಆರೋಪಿಬಾಕ್ಸ್‌ನಲ್ಲಿ ಕೈ ಮುಗಿದು ನಿಲ್ಲಬೇಕಾಗಿ ಬಂತು. ಅಲ್ಲೂ ಸದಾ ವಿಜಯದ ಸಂಕೇತ 'V' ತೋರಿಸಿದರೂ ಆ ಎರಡು ಬೆರಳುಗಳು ಸಾಕಷ್ಟು ಗಾಯದ ಬಟ್ಟೆ ಸುತ್ತಿಕೊಂಡಿದ್ದವು. ಇನ್ನೊಬ್ಬ ಮಾಜಿ ಸಿ.ಎಂ. ಕುಮಾರಸ್ವಾಮಿ, ಅವರ ಪತ್ನಿಯವರೂ ಕೋರ್ಟ್‌ಗೆ ಖುದ್ದು ಹಾಜರಾತಿಯಿಂದ ವಿನಾಯ್ತಿಗೆ ಕೋರಿ ಅರ್ಜಿ ಗುಜಾರಿಯುತ್ತಿರುವುದನ್ನು ನ್ಯಾಯಾಲಯ ತಿರಸ್ಕರಿಸುತ್ತಲೇ ಇದೆ. ಹೀಗಾಗಿ ಈ ದಂಪತಿಗಳು ಕೋರ್ಟಿನ ಬಾಕ್ಸ್‌ನಲ್ಲಿ ಕಾಣಿಸಿಕೊಳ್ಳುವುದು ಗ್ಯಾರಂಟಿಯಾದಂತಿದೆ. ಅದೂ ಸೆಪ್ಟೆಂಬರ್ 5ಕ್ಕೆ ದಿನ ನಿಗದಿಯಾಗಿದೆ. ರಾಜ್ಯದ ಜನರ ಎದುರು ಇವರ ವರಸೆಗಳು, ಅನಾರೋಗ್ಯದ ನೆಪಗಳು ಹಾಸ್ಯಾಸ್ಪದವಾಗಿ ಕಾಣುತ್ತಿದೆ. ಆದರೆ ಈ ಮಹಾನಾಯಕರಿಗೆ ಕಾಣುತ್ತಿಲ್ಲ ! ಏನು ಮಾಡುವುದು ಕನ್ನಡಕದ ನಂಬರ್ ಮಾತ್ರವಲ್ಲ, ಗಾಜಿನ ಗುಣವೇ ಬದಲಾಗಿದೆ!

ಈ ಮಧ್ಯೆ 'ಕುಮಾರಣ್ಣ' ತನ್ನ ಮೇಲೆ ಬಂದಿರುವ ಆರೋಪಗಳನ್ನು ನೆನೆದು ದುಃಖಿಸುತ್ತಾ ಹಿಂದಿನ ಲೋಕಾಯುಕ್ತ ಸಂತೋಷ ಹೆಗಡೆ ಬಗ್ಗೆ ತೀರಾ ವ್ಯಕ್ತಿಗತ ನಿಂದನೆ ಮಾಡಿ ಎಂದಿನಂತೆ 'ದಾಖಲೆ ಬಿಡುಗಡೆ' ಮಾಡುವುದಾಗಿ ಬೆದರಿಕೆ ಹಾಕಿದ್ದು, ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತಿರುವ ಈ 'ಅಣ್ಣ'ನನ್ನು 'ಸಣ್ಣ'ವನನ್ನಾಗಿಸಿತು. ಇದೇ ಸ್ಫೂರ್ತಿಯಲ್ಲಿ' ಅದೇ ಭಾಷೆಯಲ್ಲಿ ನ್ಯಾ. ಹೆಗಡೆಯವರು ಸ್ಪರ್ಧೆಗೆ ಇಳಿದದ್ದು ವ್ಯಕ್ತಿಗತ ನೆಲೆಯಲ್ಲಿಯೇ ಸಮಸ್ಯೆಯನ್ನು ವ್ಯಾಖ್ಯಾನಿಸಿದ್ದು, ಹಲವಾರು ಚಿಂತಕರ ವಿಮರ್ಶೆಯಾಗಿ ಒಳಗಾಯಿತು. ಸದ್ಯ 'ದಾಖಲೆ'ಗಳೇನು ಇನ್ನೂ ಬಿಡುಗಡೆಯಾಗಿಲ್ಲ. 'ಎರಡು ಮನೆಗಳ' ಪ್ರಹಸನ ಪೂರ್ಣ ಹೊರಬರಲಿಲ್ಲ.

ಅಂತೂ 'ಕುಮಾರಣ್ಣ' ನೂ ಲೋಕಾಯುಕ್ತ ವರದಿಯನ್ನೇ ಅವಹೇಳನ ಮಾಡಿದ್ದು, ಆ ವರದಿಯ ವಿರುದ್ಧವೇ 'ಸೆಣಸುತ್ತಿರುವ' ಯಡ್ಡಿ–ರೆಡ್ಡಿಗಳಿಗೆ ತುಂಬಾ ಖುಷಿ ತಂದಿದೆ. ಕೇಳದೆ ಬಂದ ಆಶ್ಚರ್ಯಕರ 'ಮೈತ್ರಿ'ಯ ಗಾನಕ್ಕೆ 'ಯಡ್ಡಿ–ರೆಡ್ಡಿ'ಗಳು ಆಲಾಪನವನ್ನು ಸೇರಿಸ ಬಹುದೇ?

ಇದು ನಿಮಗೆ ಗೊತ್ತೆ?

ಸ್ವಿಸ್ ಬ್ಯಾಂಕುಗಳಲ್ಲಿನ ಭಾರತೀಯ ಹಣ 11 ಸಾವಿರ ಕೋಟಿ ರೂಪಾಯಿಗಳು

ಸ್ವಿಸ್ ಬ್ಯಾಂಕ್ ಖಾತೆ ಯೆಂದರೆ ಭಾರದಲ್ಲಿ ಕಳ್ಳಹಣದ ಖಜಾನೆ ಎಂದರ್ಥ. ಇದುವರೆಗೆ ತಮ್ಮ ಬ್ಯಾಂಕ್ ಖಾತೆಗಳಲ್ಲಿ ಇರುವ ಗುಪ್ತ ಠೇವಣಿಗಳ ಮಾಹಿತಿ ಕೊಡುವಂತಿಲ್ಲ ಎಂದು ಸ್ವಿಸ್ ಬ್ಯಾಂಕುಗಳು ಹೇಳುತ್ತಿದ್ದವು. ಆದರೆ ಈಗ ವಿದೇಶಗಳಲ್ಲಿ ಪೇರಿಸಿಟ್ಟ ಕಳ್ಳಹಣದ ವಿರುದ್ಧ ಹೆಚ್ಚೆಚ್ಚು ಪ್ರತಿಭಟನೆಗಳು ವ್ಯಕ್ತವಾಗುತ್ತಿರುವಂತೆ ಸ್ವಿಝರ್ಲೆಂಡಿನ ಕೇಂದ್ರೀಯ ಬ್ಯಾಂಕ್ ಮೊತ್ತ ಮೊದಲ ಬಾರಿಗೆ ತನ್ನ ದೇಶದಲ್ಲಿರುವ ಭಾರತೀಯ ಸಂಪತ್ತಿನ ಮೊತ್ತ 1.945 ಬಿಲಿಯ ಸ್ವಿಸ್ ಫ್ರಾಂಕ್‌ಗಳು ಎಂದಿದೆ. ಡಾಲರುಗಳಲ್ಲಿ ಇದು 2.5 ಬಿಲಿಯ ಆಗುತ್ತದೆ, ರೂಪಾಯಿಗಳಲ್ಲಿ 11,000 ಕೋಟಿ ಆಗುತ್ತದೆ. ಇದು 2010 ರ ಅಂತ್ಯದ ವೇಳೆಗೆ ಇದ್ದ ಮಾಹಿತಿ. ಇದು ಕೂಡ ಅಲ್ಲಿರುವ ಭಾರತದ ಕಳ್ಳ ಹಣದ ನಿಜವಾದ ಪ್ರಮಾಣವನ್ನು ಪೂರ್ಣವಾಗಿ ನೀಡುತ್ತಿಲ್ಲ ಎಂಬುದು ತಜ್ಞರ ಅಭಿಪ್ರಾಯ. ಅಲ್ಲದೆ ಕಳೆದ ಮೂರು ವರ್ಷಗಳಲ್ಲಿ ಸ್ವಿಸ್ ಬ್ಯಾಂಕುಗಳಲ್ಲಿ ಬಚ್ಚಿಟ್ಟಿರುವ ಹಣವನ್ನು ಹಿಂದಕ್ಕೆ ತರಬೇಕೆಂಬ ಆಗ್ರಹಗಳು ಹೆಚ್ಚಿರುವುದರಿಂದ ಇಂತಹ ಭಾರತೀಯ ಮೂಲದ ಠೇವಣಿಗಳು ಮಾರಿಶಸ್, ದುಬೈ, ಸಿಂಗಾಪುರ ಮುಂತಾದ ಹೆಚ್ಚು 'ಸುರಕ್ಷಿತ' ತಾಣಗಳಿಗೆ ಪಲಾಯನಗೊಂಡಿರುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ.

ರಾಜ್ಯದಲ್ಲಿರುವ ಬಿಜೆಪಿ ಪಕ್ಷದ ಆಡಳಿತ ಭೂಗಳ್ಳರು, ಗಣಿಲೂಟಿಕೋರರ ಪಾಲಿಗೆ ಅಕ್ಷರಶಃ ಸುವರ್ಣಯುಗವೇ ಆಗಿದೆ. ಸರ್ಕಾರವೇ ಈ ದರೋಡೆಕೋರರ ದರೋಡೆಗೆ ಅವಕಾಶ ನೀಡಿ ಅಪರಾಧಿಗಳ ರಕ್ಷಣೆಗೆ ನಿಂತಿದೆ. ಡಾ. ಯು.ವಿ.ಸಿಂಗ್ ವರದಿ ಹೊರಗೆಡಹಿರುವ ಆಘಾತಕಾರಿ ಅಂಶಗಳ ಕೆಲವು ತುಣುಕುಗಳು.

ಬಿಜೆಪಿ ಆಡಳಿತ: ಗಣಿಲೂಟಿಯ 'ಸುವರ್ಣ ಯುಗ'!!

ಡಾ. ಯು.ವಿ. ಸಿಂಗ್ ತನಿಖಾ ವರದಿಯಲ್ಲಿ ಬಯಲು

"...ನನ್ನ ಕಾಲದಲ್ಲಿ ಯಾವ ಗಣಿ ಕಂಪನಿಗಳಿಗೂ ಗಣಿಗಾರಿಕೆಗೆ ಅನುಮತಿ ನೀಡಿಲ್ಲ. ಗಣಿ ಅದಿರು ರಫ್ತು ನಿಷೇಧ ಮಾಡಿದ ಮೊದಲ ಸರ್ಕಾರ ನಮ್ಮ ಬಿಜೆಪಿ ಸರ್ಕಾರ. ಈ ಘನ ಸಾಧನೆಗಾಗಿ ನನಗೆ ನೋಬೆಲ್ ಪ್ರಶಸ್ತಿ ಕೊಟ್ಟರೂ ಕಡಿಮೆಯೆ..." ಅಂತ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಮತ್ತು ಮುಂದಿನ ಆರು ತಿಂಗಳ ನಂತರದ ಸ್ವಯಂಘೋಷಿತ ಭವಿಷ್ಯತ್ ಮುಖ್ಯಮಂತ್ರಿ ಡಾ। ಬಿ.ಎಸ್. ಯಡಿಯೂರಪ್ಪನವರು ಅಧಿಕಾರದಲ್ಲಿದ್ದಾಗ ಆಗಾಗ್ಗೆ ಬೊಬ್ಬೆ ಹಾಕುತ್ತಿದ್ದುದು.... ನೋಬೆಲ್ ಪ್ರಶಸ್ತಿಗೆ ಅರ್ಜಿ ಹಾಕುತ್ತಿದ್ದುದು ನಮಗೆಲ್ಲಾ ಗೊತ್ತೇ ಗೊತ್ತು. ಮತ್ತು ಅವರ ನೇತೃತ್ವದ ಭಾರತೀಯ ಜನತಾ ಪಕ್ಷದ ರಾಜ್ಯ ಸರ್ಕಾರದ ಅಡಿಯಲ್ಲಿ ಯಾವ ಪರಿಯಾಗಿ ರಾಜ್ಯದ ಗಣಿ ಸಂಪತ್ತು ನಿರ್ಧಿಷ್ಟವಾಗಿ ಕಬ್ಬಿಣದ ಅದಿರಿನ ಸಂಪತ್ತು ಲೂಟಿಯಾಗಿ ಹೋಯಿತು ಎಂಬುದು ರಾಜ್ಯದ ಜನಕ್ಕೆಲ್ಲಾ ಗೊತ್ತು.

ಇದು ಗೊತ್ತಿರುವ ವಿಚಾರವೇ ಆದರೂ ಈ ಮಾಹಿತಿಗೀಗ ಅಧಿಕೃತತೆ ಬಂದಿದೆ. ಅಂದರೆ ಅದು ಬರೀ ಆರೋಪವಲ್ಲ. ಈ ವಿಚಾರ ಖಚಿತ ಸಾಕ್ಷಿ ಆಧಾರಗಳೊಂದಿಗೆ ನಿಜವೆಂದು ಸಿದ್ಧವಾಗುತ್ತಿದೆ. ಲೋಕಾಯುಕ್ತ ವರದಿಗೆ ಆಧಾರವಾದ ಡಾ। ಯು.ವಿ.ಸಿಂಗ್ ವರದಿಯೊಳಗಿನ ಈ ಮಾಹಿತಿ ನೋಡಿ.

ಕರ್ನಾಟಕ ರಾಜ್ಯದಿಂದ ಹೊರ ದೇಶಕ್ಕೆ ಅಕ್ರಮವಾಗಿ ಹರಿದು ಹೋದ ಗಣಿ ಸಂಪತ್ತಿನ ಪ್ರಮಾಣ ಯಾವ ಯಾವ ವರ್ಷ ಎಷ್ಟೆಷ್ಟು ಎಂದು ನೋಡಿ.

ಸ್ವತಂತ್ರವಾಗಿ ಬಿಜೆಪಿಯದ್ದೇ ಸರ್ಕಾರ ಬರುವುದಕ್ಕೆ ಮುಂಚೆ ಅಂದರೆ 2007-08 ರಲ್ಲಿ ಆಗಿಹೋಗಿರುವ ಅಕ್ರಮ ರಫ್ತು 37 ಲಕ್ಷ ಟನ್. 2008-09 ರ ವರ್ಷದಲ್ಲಿ ಅಂದರೆ ರಾಜ್ಯದಲ್ಲಿ ಬಿಜೆಪಿಯದ್ದೇ ಸರ್ಕಾರ ಅಧಿಕಾರಕ್ಕೆ ಬಂದ ವರ್ಷವೇ ಈ ಅಕ್ರಮ ಅದಿರು ರಫ್ತು ಪ್ರಮಾಣ 53.55 ಲಕ್ಷ ಟನ್‌ಗಳಿಗೇರಿತು. ಮುಂದಿನ ವರ್ಷ ಅಂದರೆ 2009_10 ರ ಸಾಲಿನಲ್ಲಿ ಅಂದರೆ ಬಿಜೆಪಿ ಸರ್ಕಾರ ರಾಜ್ಯದಲ್ಲಿ ತಳವೂರಿದಂತೆ ಈ ಅಕ್ರಮ ಅದಿರು ರಫ್ತಿನ ಪ್ರಮಾಣವು 1.27 ಕೋಟಿ ಟನ್‌ಗಳಿಗೆ ಏರಿತು.

2006-07 ರಿಂದ 2009-10 ರವರೆಗಿನ ಅವಧಿಯಲ್ಲಿ ಕರ್ನಾಟಕದಿಂದ ಆಗಿರುವ ಒಟ್ಟು ಅಕ್ರಮ ಅದಿರು ರಫ್ತು ಪ್ರಮಾಣ 2,98,60,647 ಟನ್. ಅಂದರೆ ಸರಿ ಸುಮಾರು ಹತ್ತಿರ ಹತ್ತಿರ ಮೂರು ಕೋಟಿ ಟನ್‌ಗಳು. ಹಣದ ರೂಪದಲ್ಲಿ ಇದರ ಮೌಲ್ಯ 12,228 ಕೋಟಿ ರೂಪಾಯಿಗಳು.

ರಾಜ್ಯ ಬಿಜೆಪಿ ಸರ್ಕಾರ ಜುಲೈ 28,2010 ರಂದು ಕಬ್ಬಿಣದ ಅದಿರು ರಫ್ತನ್ನೇ ನಿಷೇಧಿಸಿ ಆದೇಶ ಹೊರಡಿಸಿ ತನ್ನ ಬೆನ್ನು ತಾನೇ ತಟ್ಟಿಕೊಂಡಿತು. ಈ ನಿಷೇಧದ ನಂತರ 17,58,336 ಟನ್ ಕಬ್ಬಿಣದ ಅದಿರು ರಾಜ್ಯದಿಂದ ಅಕ್ರಮವಾಗಿ ವಿದೇಶಗಳಿಗೆ ರಫ್ತಾಗಿ ಹೋಗಿದೆ ಎನ್ನುತ್ತಿದೆ ಖಚಿತ ದಾಖಲೆ. ರಾಜ್ಯ ವಿರೋಧ ಪಕ್ಷಗಳು, ನಾಡಿನ ಜನತೆ, ಪರಿಸರ ಪ್ರೇಮಿಗಳು ರಾಜ್ಯವಿಡಿ ಚಳುವಳಿ ನಡೆಸುತ್ತಾ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂದು ಕೂಗಿ ಕೂಗಿ ಹೇಳುತ್ತಿದ್ದ ಸಮಯವದು. ಜೊತೆಗೆ ರಾಜ್ಯದ ಗಣಿ ಅಕ್ರಮ ದೇಶದ ಗಮನವನ್ನು ಸೆಳೆದು



ಮಾಧ್ಯಮಗಳ ಕಣ್ಣೂ ಕೂಡ ಅತ್ತ ಕಡೆಯೇ ನೆಟ್ಟಿದ್ದ ಕಾಲವದು. ಅಷ್ಟಾದರೂ.... ಹೀಗೆ.... ಇದೇನೋಡಿ ಬಿಜೆಪಿ ಆಡಳಿತ 'ಸೊಗಡು', 'ಸೊಗಸು'.

ಕರ್ನಾಟಕದಲ್ಲಿ ತಾವು ಗಣಿಗಾರಿಕೆಯನ್ನೇ ನಡೆಸುತ್ತಿಲ್ಲ ಎಂದು ಸಾರುವ ರೆಡ್ಡಿ ಸಹೋದರರ ಮಾಲಿಕತ್ವದ ಓಬಳಾಪುರಂ ಮೈನಿಂಗ್ ಕಂಪನಿಯು 2006 ರಿಂದ 2010-11 ರ ನಡುವೆ 71,61,455 ಟನ್‌ಗಳಷ್ಟು ಕರ್ನಾಟಕ ಮೂಲದ ಕಬ್ಬಿಣದ ಅದಿರನ್ನು ಅಕ್ರಮವಾಗಿ ವಿದೇಶಗಳಿಗೆ ರಫ್ತು ಮಾಡಿದೆ. ಅಸಲಿಗೆ ಈ ಓಬಳಾಪುರಂ ಕಂಪನಿಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಅದಿರು ಸಾಗಾಣಿಕೆ ಅನುಮತಿ ಯನ್ನೇ ನೀಡಿಲ್ಲವಂತೆ. ಅದಿರು ಸಾಗಾಣಿಕೆಗೆ ಅನುಮತಿ ಇಲ್ಲದೇನೇ ಈ ಪರಿ ಗೋರಾಟ, ಸಾಗಾಟ, ನುಂಗಾಟ. ಇನ್ನು ಅದಿರು ಸಾಗಾಟ ಅನುಮತಿಯನ್ನು ಕೊಟ್ಟಿದ್ದಿದ್ದರೆ....?! ಓಹೋ ಕಲ್ಪಿಸಿಕೊಳ್ಳುವುದು ಬೇಡ ಬಿಡಿ ಅದೊಂದು ಭಯಾನಕ ಚಿತ್ರಣ ವಾಗುತ್ತದೆ.

ಸೋಮಶೇಖರ ರೆಡ್ಡಿ ವಿರುದ್ಧವೂ ಕ್ರಮವಿಲ್ಲ

ಈಗ ಬಳ್ಳಾರಿ ಕ್ಷೇತ್ರದ ಬಿಜೆಪಿ ಶಾಸಕ, ಗಣಿಲೂಟಿಕೋರ ರೆಡ್ಡಿ ಸಹೋದರ ರಲ್ಲೊಬ್ಬರಾದ ಸೋಮಶೇಖರ ರೆಡ್ಡಿ ಮಹಿಮೆ ಯನ್ನು ಸ್ವಲ್ಪ ಕೇಳೋಣ. ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ರಾಮಗಡ ಅರಣ್ಯ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಸಿರುವ ಸಂಬಂಧ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಸೆಪ್ಟೆಂಬರ್ 13, 2009 ರಂದು ದೂರು ಸಲ್ಲಿಸಿದ್ದರಂತೆ. ಆದರೆ ಇಲ್ಲಿಯವರೆಗೆ ಈ ದೂರಿನ ಬಗೆಗೆ ಸಂಡೂರಿನ ಪೋಲಿಸರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಎನ್ನುತ್ತದೆ ಡಾ। ಯು.ವಿ.ಸಿಂಗ್ ಅವರು ಕೊಟ್ಟಿರುವ ಗಣಿ ಅಕ್ರಮಗಳ ಕುರಿತ ತನಿಖಾ ವರದಿ.

ಈ ಸಂದರ್ಭದಲ್ಲಿ ಅಕ್ರಮಗಳ ಖುದ್ದು ಪರಿಶೀಲನೆಗೆ ಸ್ಥಳಕ್ಕೆ ಹೋಗಿದ್ದ ಯು.ವಿ.ಸಿಂಗ್ ಅವರನ್ನು ಮತ್ತೊಬ್ಬರ ಮೊಬೈಲ್ ಮೂಲಕ ಸಂಪರ್ಕಿಸಿದ ಸೋಮಶೇಖರ ರೆಡ್ಡಿ "ಜಿಲ್ಲಾ ಉಸ್ತುವಾರಿ ಸಚಿವರ ಅನುಮತಿ ತೆಗೆದುಕೊಂಡು ಬಂದಿದ್ದೀರ?" ಎಂದಿದ್ದಲ್ಲದೇ ಹಗರಣದ ತನಿಖೆಯನ್ನು ಮುಂದುವರಿಸಬಾರದು ಎಂದು ಸಿಂಗ್ ಅವರಿಗೆ ಬೆದರಿಕೆ ಹಾಕಿದ್ದರಂತೆ. ಈ ಬಗ್ಗೆಯೂ ವರದಿಯಲ್ಲಿದೆ.

ಬೇನಾಮಿ ಅದಿರು ರಫ್ತು, ಬೇನಾಮಿ ಖಾತೆಗಳ ಮೂಲಕ ಹಣಕಾಸು ವ್ಯವಹಾರಗಳು

ಐಎಲ್‌ಸಿ ಎಂಬುದೊಂದು ಬೆಂಗಳೂರು ಮೂಲದ ಕಂಪನಿ. ಅದು ಕಳೆದ ನಾಲ್ಕು ವರ್ಷಗಳಲ್ಲಿ 1300 ಕೋಟಿ ಮೌಲ್ಯದ ಕಬ್ಬಿಣದ ಅದಿರನ್ನು ಅಕ್ರಮವಾಗಿ ವಿದೇಶಗಳಿಗೆ ರಫ್ತು ಮಾಡಿದೆಯಂತೆ. ಜನಾರ್ಧನ ರೆಡ್ಡಿ ಮತ್ತು ಸಹೋದರರ ಒಡೆತನದ ಓಬಳಾಪುರಂ ಮೈನಿಂಗ್ ಕಂಪನಿ ಸೇರಿದಂತೆ ಸು. 21 ಕಂಪನಿಗಳು ಅಕ್ರಮವಾಗಿ ಈ ಕಂಪನಿಗೆ ಅದಿರು ಪೂರೈಸಿವೆಯಂತೆ. ಈ ಕಂಪನಿ ನಾಲ್ಕು ವರ್ಷಗಳಲ್ಲಿ ಮಾಡಿರುವ ಒಟ್ಟು 43,30,200 ಟನ್ ಅದಿರಿನಲ್ಲಿ 31,69,186 ಟನ್ ಅಕ್ರಮವೇ ಅಂತೆ. ಗಣಿ ಲೂಟಿಕೋರ ವಂಚಕರಿಗೆ ಅದಿರಿನ ಕೊಳ್ಳೆಗೆ. ಅಕ್ರಮ ಅದಿರು ರಫ್ತಿಗೆ ರೂಪಿಸಿಕೊಂಡಿರುವ ಹತ್ತಾರು ದಾರಿಗಳಲ್ಲಿ ಇದು ಒಂದು ದಾರಿ ಅಷ್ಟೆ. ಇದನ್ನು ಮೀರಿಸುವ ಭಾರಿ ಭಾರಿ ಮೋಸ, ದಗಾಕೋರತನಗಳು ಇಲ್ಲಿ ನಡೆದಿವೆ.

ಗಡ್ಕರಿ ಬಾಬು ಮೂತಿಗೂ ಮೆತ್ತಿಕೊಂಡಿರುವ ಗಣಿ ಅದಿರು

ಬಿಜೆಪಿಯ ಅಖಿಲ ಭಾರತ ನಾಯಕರಾದ ಲಾಲ್ ಕೃಷ್ಣ ಅಡ್ವಾಣಿ ಹವಾಲ ಹಗರಣದಲ್ಲಿ ಕೈ ಬಾಯಿಗೆಲ್ಲ ಕೊಳಕು ಮೆತ್ತಿಕೊಂಡು ಕಳಂಕಿತರಾಗಿದ್ದು, ಬಿಜೆಪಿಯ ಮಾಜಿ ಅಖಿಲ ಭಾರತ ಅಧ್ಯಕ್ಷರಾದ ಬಂಗಾರು ಲಕ್ಷ್ಮಣ್ ಅವರು ಅಧ್ಯಕ್ಷ್ಯರಾಗಿದ್ದ ಅವಧಿಯಲ್ಲೇ ರಕ್ಷಣಾ ಖರೀದಿ ಹಗರಣದಲ್ಲಿ ಲಂಚ ಮೆದ್ದು ತೆಹಲ್ಕಾ ಟೇಪುಗಳಲ್ಲಿ ದಾಖಲಾಗಿ ಮುಖಕ್ಕೆ ಮಸಿ ಮೆತ್ತಿಕೊಂಡು ಸಿಕ್ಕಿ ಬಿದ್ದದ್ದು.... ಎಲ್ಲಾ ಸ್ವಲ್ಪ ಹಳೇ ಕತೆ. ಇಗೋ ಈಗ ಆ ಸಾಲಿಗೆ ಮತ್ತೊಬ್ಬರು ಸೇರಿಕೊಂಡಿದ್ದಾರೆ. ಇವರೇನು ಕಡಿಮೆಯಲ್ಲ. ಭಾರಿ ತೂಕದ ಆಸಾಮಿಯೇ. ಅವರು ತಮ್ಮ ಹೆಗಲ ಮೇಲೆ ಹೊತ್ತುಕೊಂಡಿರುವ ಪದವಿ ಬಿಜೆಪಿ ಪಕ್ಷದ ಅಖಿಲ ಭಾರತ ಅಧ್ಯಕ್ಷಗಿರಿ. ಹೆಸರು ಬಾಬು ನಿತಿನ್ ಗಡ್ಕರಿ. ಬಳ್ಳಾರಿ ಅಕ್ರಮ ಗಣಿ ಲೂಟಿಯಲ್ಲಿ ಭಾಗಿಯಾಗಿರುವ ಮಧುಶ್ರೀ ಎಂಟರ್‌ಪ್ರೈಸಸ್ ಎಂಬ ಕಂಪನಿ 'ನಿತಿನ್ ಗಡ್ಕರಿ ಸರ್' ಅವರ ಸ್ನೇಹಿತರ ಹೋಟೆಲ್ ಬಿಲ್ ಪಾವತಿಸಿರುವುದಕ್ಕೆ ಲೋಕಾಯುಕ್ತ ದಾಳಿಯ ಸಂದರ್ಭದಲ್ಲಿ ಸಿಕ್ಕಿರುವ ಲೆಕ್ಕಪತ್ರ ದಾಖಲೆಗಳು ಸಾಕ್ಷಿ ಹೇಳುತ್ತಿವೆ.

2010 ಆಗಸ್ಟ್ 31 ರ ಗಡ್ಕರಿ ಮಿತ್ರರ

ಪುಟ 12ಕ್ಕೆ

ದಕ್ಷ ಲೋಕಾಯುಕ್ತ ಡಿಐಜಿ ಮೊಹಂತಿ ಏಕಾಏಕಿ ಎತ್ತಂಗಡಿ

ಅವರ ಹೆಸರು ಪ್ರಣಬ್ ಮೊಹಂತಿ. ಅವರು ಐಎಎಸ್ ಅಧಿಕಾರಿ. ಅರಣ್ಯ ನಾಶ, ಭ್ರಷ್ಟಾಚಾರ ಮುಂತಾದ ಹಲವು ಗಂಭೀರ ಪ್ರಕರಣಗಳಲ್ಲಿ ಅಪರಾಧಿಗಳಾದ ಹಲವರಿಗೆ ಶಿಕ್ಷೆ ಖಚಿತಗೊಳಿಸಿದವರು. ದಕ್ಷ ಮತ್ತು ಅನುಭವಿ ಅಧಿಕಾರಿ. 2009 ರ ಜುಲೈನಿಂದ ಕರ್ನಾಟಕ ಲೋಕಾಯುಕ್ತದ ಡಿಐಜಿಯಾಗಿದ್ದರು. ರಾಜ್ಯ ಬಿಜೆಪಿ ಸರ್ಕಾರ ಅವರನ್ನು ದಿಢೀರನೆ ಆ ಜಾಗದಿಂದ ಎತ್ತಂಗಡಿ ಮಾಡಿದೆ. ಈ ವರ್ಗಾವಣೆಗೆ ಮುಂಚೆ ಕ್ರಮದಂತೆ ಈ ಬಗ್ಗೆ ಲೋಕಾಯುಕ್ತರೊಂದಿಗೆ ಚರ್ಚಿಸಿಯೂ ಇಲ್ಲ. ವಿಷಯವನ್ನು ಲೋಕಾಯುಕ್ತರ ಗಮನಕ್ಕೂ ತಂದಿಲ್ಲ. ಇದು ಸದಾನಂದ ಗೌಡರ ನೇತೃತ್ವದ ನೂತನ ಬಿಜೆಪಿ ಸರ್ಕಾರದ ಅಮೋಘ ಕಾರ್ಯಶೈಲಿ. ಕಾರ್ಯದಕ್ಷತೆ.

ತಿಂಗಳಿಗೆ ಖಾಲಿ 50 ರೂ. ಪಿಂಚಣಿಯೂ ಉಂಟು ಮಾರಾಯ್ರೆ ಇಲ್ಲಿ!

ನೌಕರರ ಭವಿಷ್ಯ ನಿಧಿ ಅಡಿ ರೂಪಿಸಿರುವ ನೌಕರರ ಪಿಂಚಣಿ ಯೋಜನೆ 1995 ರಡಿ ನಿವೃತ್ತ ಕಾರ್ಮಿಕರಿಗೆ ಪಿಂಚಣಿ ಕಾರ್ಯಕ್ರಮವೊಂದನ್ನು ಸರ್ಕಾರ ಅನುಷ್ಠಾನಕ್ಕೆ ತಂದಿದ್ದರೂ, 80% ನಿವೃತ್ತ ಕಾರ್ಮಿಕರು ಮಾಸಿಕ ರೂ.500ಕ್ಕಿಂತ ಕಡಿಮೆ ನಿವೃತ್ತಿ ವೇತನ ಪಡೆಯುತ್ತಿದ್ದಾರೆ. ಇಲ್ಲಿ ಕನಿಷ್ಟ ಪಿಂಚಣಿ ರೂ.50 ಮಾತ್ರ ಇದೆ ಎಂಬುದನ್ನು ನಂಬುವುದು ಕಷ್ಟ. ಯಾರ ಪಿಂಚಣಿಯು ರೂ.1000 ತಲುಪುವ ಸಂಭವ ಇಲ್ಲ. ಅನೇಕ ಸಂದರ್ಭಗಳಲ್ಲಿ ಲೇಬರ್ ಗುತ್ತಿಗೆದಾರರು ತಮ್ಮ ಪಾಲಿನ ಭವಿಷ್ಯ ನಿಧಿ ಭಾಗವನ್ನು ಪಾವತಿಸದೇ ಇರುವುದರಿಂದಲೂ, ನಿವೃತ್ತಿ ಕಾರ್ಮಿಕರು ಕಡಿಮೆ ಪಿಂಚಣಿ ಪಡೆಯುವಂತಾಗಿದೆ.

ಈ ಹಿನ್ನೆಲೆಯಲ್ಲಿ ಸಿಐಟಿಯು ನೇತೃತ್ವದಲ್ಲಿ ನಿವೃತ್ತ ಕಾರ್ಮಿಕರು ಪಿಂಚಣಿ ಸಂಬಂಧ ಹಲವಾರು ಬೇಡಿಕೆಗಳನ್ನು ಸರ್ಕಾರಕ್ಕೆ ಈ ಹಿಂದೆ ಸಲ್ಲಿಸಿದ್ದರೂ ಫಲ ಲಭಿಸಿಲ್ಲ. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ನಿವೃತ್ತ ಕಾರ್ಮಿಕರ ಸಂಘಟನೆಗಳು ಸಿಐಟಿಯು ನೇತೃತ್ವದಲ್ಲಿ ಆಗಸ್ಟ್ 26 ರಂದು ಪ್ರತಿಭಟನಾ ರ್‍ಯಾಲಿ ಮತ್ತು ಪ್ರದರ್ಶನ ಏರ್ಪಡಿಸಿದ್ದವು. ಕನಿಷ್ಟ ರೂ.1000 ಖಾತರಿ ಮಾಸಿಕ ಪಿಂಚಣಿಗಾಗಿ, ಮಾಲೀಕ-ಸರ್ಕಾರದ ಪಾಲಿನ ಕೊಡುಗೆ ಹೆಚ್ಚಳಕ್ಕಾಗಿ, ಷೇರು ಮಾರುಕಟ್ಟೆ ಆಧಾರಿತ ಪಿಎಫ್‌ಆರ್‌ಡಿಎ ಮಸೂದೆ ಕೈಬಿಡಬೇಕೆಂದು ಹಾಗೂ ಕಡಿತ ಮಾಡಿರುವ ಸೌಲಭ್ಯಗಳನ್ನು ಮತ್ತೆ ನೀಡಬೇಕೆಂದು ಈ ರ್‍ಯಾಲಿಗಳಲ್ಲಿ ಒತ್ತಾಯಿಸಲಾಯಿತು.



ಮಂಗಳೂರು: ಮಂಗಳೂರಿನಲ್ಲಿ ಸಿಐಟಿಯು ದ.ಕ.ಜಿಲ್ಲಾ ಘಟಕದ ಆಶ್ರಯದಲ್ಲಿ ಪ್ರತಿಭಟನಾ ಮೆರವಣಿಗೆ ಕಂಕನಾಡಿ ಹೈಲ್ಯಾಂಡ್ ಆಸ್ಪತ್ರೆಯಿಂದ ಭವಿಷ್ಯ ನಿಧಿ ಕಚೇರಿ ವರೆಗೆ ನಡೆಯಿತು. ಸಿಐಟಿಯು ರಾಜ್ಯ ಉಪಾಧ್ಯಕ್ಷ ಬಿ.ಮಾಧವ, ದ.ಕ.ಜಿಲ್ಲಾ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.

ಉಡುಪಿ: ಉಡುಪಿಯಲ್ಲಿ ಸಿಐಟಿಯು ಉಡುಪಿ ಜಿಲ್ಲಾ ಘಟಕದ ಆಶ್ರಯದಲ್ಲಿ ಸರ್ವಿಸ್ ಬಸ್ ನಿಲ್ದಾಣದಿಂದ ಪ್ರಾರಂಭವಾದ ಪ್ರತಿಭಟನಾ ಮೆರವಣಿಗೆಯು ಉಡುಪಿ ಭವಿಷ್ಯ ನಿಧಿ ಕಚೇರಿಯಲ್ಲಿ ಧರಣಿ ಸತ್ಯಾಗ್ರಹವಾಗಿ ಪರಿವರ್ತನೆಯಾಯಿತು. ಕೇಂದ್ರ ಸರ್ಕಾರದ ಕಾರ್ಮಿಕ ಹಾಗೂ ಉದ್ಯೋಗ ಸಚಿವರಿಗೆ ಉದ್ದೇಶಿಸಿದ್ದ ಬೇಡಿಕೆಗಳ ಮನವಿಯನ್ನು ಭವಿಷ್ಯ ನಿಧಿ ಸಹಾಯಕ ಕಮಿಷನರ್ ಅವರಿಗೆ ಸಲ್ಲಿಸಲಾಯಿತು. ಸಿಐಟಿಯು ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವಿಶ್ವನಾಥ ರೈ ಅವರು ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.



★

ಕೃಷಿ ಕೂಲಿಕಾರರಿಂದ ಉಡುಪಿಯಲ್ಲಿ ಧರಣಿ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಜಿಲ್ಲೆಯ ನಿವೇಶನ ರಹಿತರಿಗೆ ಶೀಘ್ರ ನಿವೇಶನ ಒದಗಿಸುವಂತೆ, ಅಕ್ರಮ ಭೂಮಿ ಸಾಗುವಳಿಯನ್ನು ಸಕ್ರಮೀಕರಿಸುವಂತೆ ಹಾಗೂ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿದ ಕೂಲಿಕಾರರ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಆಗಸ್ಟ್ 25 ರಿಂದ 3 ದಿನ ರಾಜ್ಯಾದ್ಯಂತ ಹಾಕಿಕೊಂಡಿದ್ದ ಧರಣಿ ಕಾರ್ಯಕ್ರಮಗಳ ಭಾಗವಾಗಿ ಈ ಮೂರೂ ದಿನಗಳಲ್ಲಿ ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿತು.

ಉಡುಪಿ ಜಿಲ್ಲೆಯ ಕುಂದಾಪುರ, ಬೈಂದೂರು, ಉಡುಪಿ ತಾಲೂಕುಗಳ ಕೃಷಿ ಕೂಲಿಕಾರರ ಸಂಘದ ತಾಲೂಕು ಘಟಕಗಳ ನೇತೃತ್ವದಲ್ಲಿ ಈ ಮೂರು ದಿನಗಳಲ್ಲಿ ತಂಡ ತಂಡಗಳಲ್ಲಿ ಧರಣಿ ಸತ್ಯಾಗ್ರಹ ನಡೆಸಿದವು. ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ನಗರ ಪ್ರದೇಶಕ್ಕೂ ವಿಸ್ತರಿಸಬೇಕೆಂದೂ, ಏಕರೀತಿಯ ಆಹಾರ ಪಡಿತರ ಪದ್ಧತಿಯನ್ನು ಜಾರಿಗೆ ತರಬೇಕೆಂದೂ ಈ ಸಂದರ್ಭದಲ್ಲಿ ಒತ್ತಾಯಿಸಲಾಯಿತು. ಸಂಘದ ನೇತೃತ್ವದಲ್ಲಿ ಈಗಾಗಲೇ ಸರ್ಕಾರಕ್ಕೆ ನಿವೇಶನಕ್ಕಾಗಿ ಸಲ್ಲಿಸಿರುವ ಅರ್ಜಿಗಳನ್ನು ಶೀಘ್ರ ಪರಿಶೀಲಿಸ ಬೇಕೆಂದೂ ಒತ್ತಾಯಿಸ ಲಾಯಿತು.

ಸಂಘದ ಕುಂದಾಪುರ ತಾಲೂಕು ಕಾರ್ಯದರ್ಶಿ ವೆಂಕಟೇಶ್ ಕೋಣಿ, ಉಡುಪಿ ತಾಲೂಕು ಕಾರ್ಯದರ್ಶಿ ದೋಗು ಸುವರ್ಣ, ಜಿಲ್ಲೆಯ ಕಾರ್ಮಿಕ ಮುಖಂಡರಾದ ಕೆ.ಶಂಕರ್, ಪಿ.ವಿಶ್ವ ನಾಥ ರೈ, ಎ.ಶ್ರೀಪತಿ ಆಚಾರ್ಯ, ಎಚ್.ನರಸಿಂಹ, ಕೃಷಿ ಕಾರ್ಮಿಕ ಕುಂದಾಪುರ ತಾಲೂಕಿನ ಮುಂದಾಳುಗಳಾದ ರಾಜೀವ ಪಡುಕೋಣೆ, ಸುಬ್ರಹ್ಮಣ್ಯ ಆಚಾರ್ಯ, ಯಶೋದಾ ಆಲೂರು, ಜಲಜಾ ಹೆಮ್ಮಾಡಿ, ಉಡುಪಿ ತಾಲೂಕಿನ ವಿಠಲ ಪೂಜಾರಿ, ಕೆ.ಲಕ್ಷ್ಮಣ ಕಾಪು, ಸಾಯಿರಬಾನು ಹೂಡೆ, ಪುಷ್ಪಾ ಮಲ್ಲಾರು ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮೂರು ದಿನಗಳಲ್ಲೂ ಪ್ರತಿ ದಿನವೂ ಸಾವಿರಕ್ಕೂ ಮೀರಿದ ನಿವೇಶನಾರ್ಥಿಗಳು ಧರಣಿಯಲ್ಲಿ ಭಾಗವಹಿಸಿದ್ದರು.

★

ಹಿರಿಯ ಸಂಗಾತಿ ಜೆ.ಗೋಪಾಲ ನಿಧನ:

ಮಂಗಳೂರು ಜಪ್ಪು ಬಪ್ಪಾಲಿನ ನಿವಾಸಿಯಾಗಿರುವ ಸಿಪಿಐಎಂ ಪಕ್ಷದ ಸದಸ್ಯರೂ ಕಾರ್ಮಿಕ ಸಂಘಟನೆಯ ಕಾರ್ಯಕರ್ತರೂ ಆಗಿದ್ದ ಜೆ.ಗೋಪಾಲ ಅವರು ತಮ್ಮ 68ನೆಯ ವಯಸ್ಸಿನಲ್ಲಿ ನಿಧನರಾದರು.

ಕಳೆದ 35 ವರ್ಷಗಳಿಂದಲೂ ಪಕ್ಷದ ನಿಷ್ಠ ಸದಸ್ಯರಾಗಿದ್ದು ಪಕ್ಷದ ಹಾಗೂ ಬೀಡಿ ಕಾರ್ಮಿಕ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು. ಇದಕ್ಕಾಗಿ ಪೋಲೀಸರ ದಮನಕ್ಕೂ ಒಳಗಾಗಿದ್ದರು. ಸ್ವತ: ಬೀಡಿ ಕಾರ್ಮಿಕರಾಗಿದ್ದು, ಜಿಲ್ಲೆಯಲ್ಲಿ ಬೀಡಿ ಕಾಂಟ್ರಾಕ್ಟು ಪದ್ಧತಿ ಆರಂಭವಾದಾಗ ದ.ಕ.ಜಿಲ್ಲಾ ಬೀಡಿ ಕೆಲಸಗಾರರ ಸಂಘ ಹುಟ್ಟಿದಾಗ, ಆಗಲೇ ಅವರು ಸಂಘಟನೆಯಲ್ಲಿ ತಮ್ಮನ್ನು ಗುರುತಿಸಿಕೊಂಡರು. ಜಿಲ್ಲಾ ಸಂಘಕ್ಕೆ ಸಂಯೋಜಿತ ಸಂಘವಾಗಿ ಮಂಗಳೂರು ಬೀಡಿ ಕೆಲಸಗಾರರ ಸಂಘ ರಚನೆಯಾದಾಗಿನಿಂದ, ಅದರಲ್ಲಿ ಪದಾಧಿಕಾರಿಯಾಗಿ ಬಹಳ ವರ್ಷ ಕಾರ್ಯನಿರ್ವಹಿಸಿರುತ್ತಾರೆ.

ಈಗ ಕೆಲವು ವರ್ಷಗಳ ಹಿಂದೆ ಅವರು ದೃಷ್ಟಿಯನ್ನು ಕಳೆದು ಕೊಂಡಿದ್ದರೂ, ಮನೆಗೆ ಅವರು ತರಿಸಿಕೊಳ್ಳುತ್ತಿದ್ದ ಪಕ್ಷದ ಪತ್ರಿಕೆ 'ಜನಶಕ್ತಿ'ಯನ್ನು ಮಕ್ಕಳಿಂದ ಓದಿಸಿಕೊಂಡು, ವಿದ್ಯಮಾನಗಳ ಬಗ್ಗೆ ತಿಳಿದುಕೊಳ್ಳುತ್ತಿದ್ದರು. ಅವರ ಮರಣ ವೃತ್ತಾಂತ ತಿಳಿದು ಅವರ ಹಾಗೂ ಪಕ್ಷದ ಅಭಿಮಾನಿಗಳು ಅವರ ಮನೆಗೆ ಭೇಟಿ ಇತ್ತು ಶ್ರದ್ಧಾಂಜಲಿ ಸಲ್ಲಿಸಿರುತ್ತಾರೆ.

ದಾಂಡೇಲಿ : ಭ್ರಷ್ಟಾಚಾರ ವಿರೋಧಿಸಿ 'ಸತ್ಯಾಗ್ರಹ'

ಭ್ರಷ್ಟಾಚಾರದ ವಿರುದ್ಧ ಬಲಿಷ್ಠ ಜನಲೋಕಪಾಲ ಮಸೂದೆ ಅಂಗೀಕಾರಕ್ಕೆ ಒತ್ತಾಯಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಳಿಯಾಳ ತಾಲೂಕ ಸಮಿತಿ ನೇತೃತ್ವದಲ್ಲಿ ಅಗಸ್ಟ್ 23 ರಂದು ಒಂದು ದಿನದ ಧರಣಿ ಸತ್ಯಾಗ್ರಹ ದಾಂಡೇಲಿ ನಗರದ ಬಸ್ ನಿಲ್ದಾಣದೆದುರು ನಡೆಯಿತು.

ಧರಣಿ ಸತ್ಯಾಗ್ರಹದಲ್ಲಿ ಭ್ರಷ್ಟಾಚಾರ ನಿರ್ಮೂಲನೆಯಾಗಲಿ, ಲೋಕಪಾಲ ಮಸೂದೆ ಜಾರಿಯಾಗಲಿ ಎಂದು ಒತ್ತಾಯಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಸಮಿತಿ ಸದಸ್ಯ ಎಚ್.ಬಿ. ನಾಯಕ ಮಾತನಾಡಿದರು.

ಸಿ.ಪಿ.ಐ.(ಎಂ)ನ ರಾಷ್ಟ್ರೀಯ ಸಮಿತಿಯ ಕರೆಯಂತೆ ರಾಷ್ಟ್ರವ್ಯಾಪಿ ನಡೆದ ಧರಣಿ ಸತ್ಯಾಗ್ರಹದ ಹಿನ್ನೆಲೆಯಲ್ಲಿ ಸಿ.ಪಿ.ಐ.(ಎಂ)ನ ತಾಲೂಕಾ ಕಾರ್ಯದರ್ಶಿ ಮಂಜುನಾಥ ಪುಲಕರ, ಶಾಖಾ ಕಾರ್ಯದರ್ಶಿ ಬಿ.ಎಲ್. ನಾಯ್ಕ, ಸಿ.ಐ.ಟಿ.ಯು. ತಾಲೂಕಾ ಕಾರ್ಯದರ್ಶಿ ಎಸ್.ವಿ. ಸಾವಂತ, ನಗರ ಕಾರ್ಯದರ್ಶಿ ಉದಯ ನಾಯ್ಕ, ಡಿ.ವೈ.ಎಫ್.ಐ.ನ ಜಿಲ್ಲಾ ಕಾರ್ಯದರ್ಶಿ ಡಿ. ಸ್ಯಾಮಸನ್, ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಜಯಶ್ರೀ, ಕಾರ್ಯದರ್ಶಿ ಸರಿತಾ ಪಾವಲೆ, ಜನವಾದಿ ಮಹಿಳಾ ಸಂಘಟನೆಯ ಸಂಚಾಲಕಿ ಗೀತಾ ಸರನಾಯ್ಕ, ಎಸ್.ಎಫ್.ಐ.ನ ಎ.ಎಂ. ಜಾಫರ್,



ರವೀಂದ್ರಬಾಬು, ಕರ್ನಾಟಕ ಪ್ರಾಂತ ರೈತ ಸಂಘದ ಆರ್.ಎಂ. ಮುಲ್ಲಾ, ರಿಕ್ಷಾ ಸಂಘಟನೆ ಹಾಗೂ ಕಟ್ಟಡ ಕಾರ್ಮಿಕರ ಸಂಘಟನೆಯ ರಾಜಾಸಾಬ ಕೆಸನೂರ, ಪ್ರಮುಖರಾದ ಎಂ.ಎಚ್. ನಾಯ್ಕ, ಡಿ.ಎಸ್. ಕಲ್ಗುಟಕರ, ಗಣಪತಿ ನಾಯ್ಕ, ಪ್ರಭುದಾಸ, ಸುರೇಂದ್ರ, ನಾಗರತ್ನ ಮುಂತಾದವರು ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಜನರ ಕೊಂಡುಕೊಳ್ಳುವ ಶಕ್ತಿ ಹೆಚ್ಚಿಸದ ಪೊಳ್ಳು 'ಅಭಿವೃದ್ಧಿ'ಯ ಗುರಿ

12ನೇ ಪಂಚವಾರ್ಷಿಕ ಯೋಜನೆಯ ಜನವಿರೋಧಿ ಮುಖ

ಜನರ ಕೊಳ್ಳುವ ಶಕ್ತಿಯ ಹೆಚ್ಚಳದ ಬಗೆಗೆ ಇಲ್ಲದ ಆದ್ಯತೆ ಬಂಡವಾಳಿಗರ ಉತ್ಪಾದನೆ ಹೆಚ್ಚಳ, ಲಾಭದ ಹೆಚ್ಚಳಕ್ಕೆ, ಶಿಕ್ಷಣ, ಆರೋಗ್ಯ ಸೇವೆ, ನೀರು ಪೂರೈಕೆ, ನಿರ್ವಹಣೆಯ ಖಾಸಗೀಕರಣದ ಯೋಜನೆ ಇಂಥವು ದೇಶದ 12ನೇ ಪಂಚವಾರ್ಷಿಕ ಯೋಜನೆಯ ಪ್ರಧಾನ ಅಂಶಗಳಾಗಿವೆ. ಇದೇ ನೋಡಿ ನಮ್ಮ ಬೆಳವಣಿಗೆಯ ಹಾದಿ.

■ ಎಸ್. ಪ್ರಸನ್ನಕುಮಾರ್


11ನೇ ಪಂಚ ವಾರ್ಷಿಕ ಯೋಜನೆ ಅವಧಿಯು ಮುಂದಿನ 9 ತಿಂಗಳಲ್ಲಿ ಕೊನೆಗೊಳ್ಳಲಿದೆ. ಆದ್ದರಿಂದ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿರುವ ಯೋಜನಾ ಆಯೋಗವು ಮುಂದಿನ 12ನೇ ಪಂಚ ವಾರ್ಷಿಕ ಯೋಜನೆ ರೂಪುರೇಶೆಗಳನ್ನು ಅಂತಿಮಗೊಳಿಸುವ ದಿಶೆಯಲ್ಲಿ ದೇಶದ ವಿವಿಧ ವಿಭಾಗಗಳ ಜನರ ಅಭಿಪ್ರಾಯಗಳನ್ನು ಪಡೆಯುವ ಸಮಾಲೋನಾ ಸಭೆಗಳನ್ನು ನಡೆಸಲಾಗಿದೆ. ಅದರ ಭಾಗವಾಗಿ ದಿನಾಂಕ 11-6-2011 ರಂದು ಬೆಂಗಳೂರಿನ ವಿಂಡ್ಸರ್ ಮ್ಯಾನರ್ ಹೋಟೆಲ್‌ನಲ್ಲಿ ಸಮಾಲೋಚನಾ ಸಭೆ ನಡೆಯಿತು. ಕಳೆದ ಪಂಚವಾರ್ಷಿಕ ಯೋಜನೆಯ ಕಾಲಾವಧಿಯಲ್ಲಿ ಶೇ 8.2 ಸಾಧ್ಯವಾಗಿದೆ. ಯೋಜನಾ ಆಯೋಗವು ತನ್ನ ಉದ್ದೇಶಗಳನ್ನು ಅನಾವರಣ ಗೊಳಿಸುತ್ತಾ "ವೇಗವಾದ, ಹೆಚ್ಚು ಒಳಗೊಳ್ಳುವ ಮತ್ತು ನಿರಂತರ ತಾಳಿಕೆ ಹೊಂದಿರುವ ಅಭಿವೃದ್ಧಿ" ಎಂದು ಘೋಷಣೆ ಮಾಡಲಾಗಿದೆ. ಅದರಂತೆ ಶೇ 9 ರಿಂದ 9.5 ರಷ್ಟು ಅಭಿವೃದ್ಧಿ ಸಾಧಿಸುವ ಗುರಿಯನ್ನು ಹೊಂದಲಾಗಿದೆ. ಈ ಗುರಿಯನ್ನು ಸಾಧಿಸುವ ಸಲುವಾಗಿ ಕೃಷಿ ರಂಗದಲ್ಲಿ ಶೇ 4 ರಷ್ಟು ಅಭಿವೃದ್ಧಿ ಸಾಧಿಸುವುದು, ಕೈಗಾರಿಕಾ ಉತ್ಪಾದನಾ ರಂಗದಲ್ಲಿ ಶೇ 12 ರಷ್ಟು ಹೆಚ್ಚಳ ಸಾಧಿಸುವ ಗುರಿ ಹೊಂದಲಾಗಿದೆ.

ಸರ್ಕಾರಿ ಹೂಡಿಕೆ ಮಾತಿಲ್ಲ

ಮೇಲಿನ ಈ ಗುರಿಗಳನ್ನು ಸಾಧಿಸಲು ಯಾವ ಕ್ರಮಗಳನ್ನು ಕೈಗೊಳ್ಳುವ ಯೋಜನೆ ಇದೆ ? ಕೃಷಿ ರಂಗದ ಅಭಿವೃದ್ಧಿಗೆ ಎಪಿಎಂಸಿ ಕಾನೂನಿಗೆ ತಿದ್ದುಪಡಿಗಳನ್ನು ಮಾಡಬೇಕು, ಭೂಮಿಯಲ್ಲಿ ಉತ್ಪಾದಕತೆ ಹಾಗೂ ನೀರಿನ ಬಳಕೆಯಲ್ಲಿ ಕಾರ್ಯಕ್ಷಮತೆ ಹೆಚ್ಚಿಸುವುದು, ನೀರು ನಿಯಂತ್ರಣ ಪ್ರಾಧಿಕಾರ ಗಳನ್ನು ರಚನೆ ಮಾಡುವುದು ಮುಂತಾಗಿ ಸೂಚಿಸಲಾಗಿದೆ. ಈ ಮೇಲಿನ ಕ್ರಮಗಳು ನಿಜವಾಗಿಯೂ ಗುರಿ ಸಾಧಿಸಲು ಸಹಾಯಕವಾಗುತ್ತದೆಯೇ? ಇಂತಹುದೇ ಕ್ರಮಗಳನ್ನು 11ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಅಳವಡಿಸಿದ ಓನ್ನಲೆಯಲ್ಲಿ ಶೇ 4 ಗುರಿಯು ಶೇ 2 ಮಾತ್ರ ಸಾಧನೆಯಾಗಿದೆ ಎಂಬುದು ಸರಕಾರದ ಯೋಜನಾ ನಿರೂಪಕರಿಗೆ ಜ್ಞಾನೋದಯ ವಾಗಿಯೇ ಇಲ್ಲ. ಎಲ್ಲಿಯೂ ಸರಕಾರದ ಹೆಚ್ಚಿನ ಹಣ ಹೂಡಿಕೆ ಮಾಡುವ ಅಗತ್ಯ ಕುರಿತು ಒಂದು ಮಾತು ಕೂಡ ಹೇಳಿಲ್ಲ. ಬದಲಾಗಿ ನೀರು ನಿಯಂತ್ರಣ ಪ್ರಾಧಿಕಾರ ರಚನೆಯಂತಹ ಕ್ರಮಗಳು ವಾಸ್ತವದಲ್ಲಿ ನೈಸರ್ಗಿಕವಾದ ಸಂಪತ್ತಾಗಿರುವ ನೀರಿನ ಮೇಲೆ ಕೆಲವು ಖಾಸಗಿ ಬಂಡವಾಳಗಾರರಿಗೆ ನಿಯಂತ್ರಣ ಮಾಡಲು ಅವಕಾಶ ನೀಡುವುದೇ ಆಗಿದೆ. ಒಕ್ಕಲುತನವನ್ನೇ ಜೀವನಾಧಾರವಾಗಿಸಿಕೊಂಡು ಬದುಕುತ್ತಿರುವ ಕೋಟ್ಯಾಂತರ ರೈತರನ್ನು ಭೂಮಿಯಿಂದ ಒಕ್ಕಲೆಬ್ಬಿಸುವುದು ಹೊರತು ಬೇರೆ ಯಾವ ಸಾಧನೆಯನ್ನು ಮಾಡಲು ಸಾಧ್ಯವಾಗದು.

ಕೊಳ್ಳುವ ಶಕ್ತಿ ಹೆಚ್ಚ ಬೇಡವೇ?

ಕೈಗಾರಿಕಾ ಅಭಿವೃದ್ಧಿಯ ಗುರಿಯನ್ನು 2012-2017 ರ ಕಾಲಾವಧಿಯಲ್ಲಿ ಶೇ 12 ಹೊಂದಲಾಗಿದೆ. ಪ್ರತಿ ವರ್ಷ 20 ಲಕ್ಷ ಉದ್ಯೋಗಗಳನ್ನು ಅಂದರೇ ಒಟ್ಟು 100 ಲಕ್ಷ ಉದ್ಯೋಗಗಳನ್ನು ಉತ್ಪಾದನಾ ರಂಗದಲ್ಲಿ ಸೃಷ್ಟಿಸುವ ಗುರಿ ಹೊಂದಲಾಗಿದೆ. ಕಳೆದ ಯೋಜನಾ ಅವಧಿಯಲ್ಲಿ ಶೇ 8 ರಷ್ಟು ಉತ್ಪಾದನಾ ರಂಗದಲ್ಲಿ ಹೆಚ್ಚಳವಾಗಿದೆ. ಅದಕ್ಕಾಗಿ ಸೂಚಿಸಲಾಗಿರುವ ಉಪ ಕ್ರಮಗಳು ವಿದೇಶಿ ಬಂಡವಾಳದ ಆಕರ್ಷಣೆ ಮಾಡುವುದು, ಭೂಮಿ ಮತ್ತು ಮೂಲಭೂತ ಸಂಪನ್ಮೂಲಗಳ ಸಮಸ್ಯೆಗಳಿಂದ ಪರಿಹಾರ ಪಡೆಯಲು "ವಿಶೇಷ ಕೈಗಾರಿಕಾ ವಲಯ" ಗಳನ್ನು ಸ್ಥಾಪಿಸುವುದು ಮುಂತಾಗಿ ಹೇಳಲಾಗಿದೆ. ಇಂತಹ ಕ್ರಮಗಳಿಂದ ಹೇಗೆ ಸದರಿ ನಿಗದಿತ ಗುರಿ ಸಾಧಿಸಲು ಸಾಧ್ಯ ? ಈಗಾಗಲೇ ಕೇಂದ್ರ ಸರಕಾರವು ಕಳೆದ ವಾರದ ಕ್ಯಾಬಿನೆಟ್ ಸಭೆಯಲ್ಲಿ "ರಾಷ್ಟ್ರೀಯ ಉತ್ಪಾದನಾ ಮತ್ತು ಹೂಡಿಕೆ ವಲಯ" ಸ್ಥಾಪಿಸಲು ನಿರ್ಣಯ ಕೈಗೊಂಡಿದೆ. ಅಲ್ಲದೇ ಖಾಸಗಿ ಬಂಡವಾಳಗಾರರಿಂದ ಅರ್ಥಿಕ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ಆಗುತ್ತಿದೆ ಎಂದು ಪ್ರತಿಪಾದನೆ ಮಾಡುತ್ತಿರುವ ಯೋಜನಾ ಆಯೋಗವು ಖಾಸಗಿ ಬಂಡವಾಳಗಾರರಿಗೆ ಉತ್ತೇಜನ ನೀಡುವಂತಹ ನೀತಿಗಳನ್ನು ರಚನೆ ಮಾಡಬೇಕೆಂದು ಒತ್ತು ಕೊಡಲಾಗಿದೆ. ಯಾವುದೇ ದೇಶದ ಅಭಿವೃದ್ಧಿ ಎಂದರೇ ಆ ದೇಶದ ಜನರ ಆದಾಯದ ಹೆಚ್ಚಳ ಮತ್ತು ಗಳಿಸಿದ ಆದಾಯದಿಂದ ಮಾರುಕಟ್ಟೆಯಲ್ಲಿ ಸರಕುಗಳನ್ನು ಕೊಳ್ಳುವ ಶಕ್ತಿಯು ಹೆಚ್ಚಳವಾಗಿರಬೇಕು. ಆ ಮೂಲಕ ಆಂತರಿಕ ಮಾರುಕಟ್ಟೆಯಲ್ಲಿ ಬಲವಾದ ಬೇಡಿಕೆ ನಿರ್ಮಾಣವಾಗಿ ಉತ್ಪಾದನೆಯ ಉತ್ತೇಜನ ಉಂಟಾಗಲು ಸಾಧ್ಯ. ಆದರೇ ಯೋಜನಾ ಆಯೋಗದ ಕಣ್ಣೋಟವನ್ನು ಪರಿಶೀಲಿಸಿದರೇ ಅಂತಹ ಯಾವುದೇ ಕಾರ್ಯ ಯೋಜನೆ ಕಂಡು ಬರುವುದಿಲ್ಲ. ಕೈಗಾರಿಕಾ ಬೆಳವಣಿಗೆ ಮೂಲ ಅವಶ್ಯಕತೆ **ಮಾರುಕಟ್ಟೆಯಲ್ಲಿ ಬೇಡಿಕೆ.** ಬೇಡಿಕೆಯ ಹೆಚ್ಚಳಮಾಡಲು ಮಾರ್ಗವೇನು ? ಸರಳವಾಗಿ ಹೇಳುವುದಾದರೇ ಹೆಚ್ಚಿನ ಜನರ ಕೈಯಲ್ಲಿ ಸಮೃದ್ಧವಾಗಿ ಹಣ ಇರಬೇಕು. ಆಗ ಅವರು ಮಾರುಕಟ್ಟೆಯಲ್ಲಿ ಸರಕುಗಳನ್ನು ಕೊಳ್ಳಲು ಮುಂದಾಗುತ್ತಾರೆ. ಅದರಿಂದ **ಮಾರುಕಟ್ಟೆಯಲ್ಲಿ ಬೇಡಿಕೆ** ಹೆಚ್ಚಾಗುತ್ತದೆ. ಅದಕ್ಕೆ ಏನು ಮಾಡಬೇಕು ? ಎಲ್ಲರಿಗೂ ದುಡಿಯುವ ಅವಕಾಶಗಳನ್ನು ಒದಗಿಸಬೇಕು ಮತ್ತು ದುಡಿಮೆಯಿಂದ ಗಳಿಸುವ ಆದಾಯ ಕನಿಷ್ಟವಾಗಿರದೇ ಗರಷ್ಟವಾಗಿರಬೇಕು. ಈ ಪ್ರಮುಖ ಮಾರುಕಟ್ಟೆ ಅಗತ್ಯವನ್ನು ಉತ್ತೇಜಕತೆ ದೃಷ್ಟಿಯಿಂದಲೂ ಗಮನ ನೀಡುವ ಗೋಜಿಗೆ ಯೋಜನಾ ಆಯೋಗದ ಪರಣಿತರು ಪ್ರಯತ್ನಿಸದೇ ಇರುವುದು ಏಕೆ ? ಈ ಪ್ರಶ್ನೆಗಳು ಹಾಗೂ ದೊರೆಯದ ಉತ್ತರಗಳು ಸ್ಪಷ್ಟವಾಗಿ ಬಂಡವಾಳಶಾಹಿ ಆರ್ಥಿಕ ದೃಷ್ಟಿಕೋನದ ಇತಿಮಿತಿಗಳನ್ನು ಎತ್ತಿ ತೋರುತ್ತದೆ. ಆದ್ದರಿಂದಲೇ ಕಳೆದ ವಾರ ಪ್ರಕಟವಾಗಿರುವ ಜಾಗತಿಕ ಶತಕೋಟಿ ಶ್ರೀಮಂತರ ಪಟ್ಟಿಯಲ್ಲಿ ಭಾರತದಿಂದ 4 ಜನರಿಂದ 12 ಜನರ ಮಟ್ಟಕ್ಕೆ ಏರಿಕೆ ಆಗಿದೆ. ಮತ್ತೊಂದೆಡೆ ಬೆಲೆ ಏರಿಕೆಯು ತೀವ್ರತೆ ಹೆಚ್ಚಾಗುತ್ತಿದ್ದೂ ಭಾರತದಲ್ಲಿ ಕಡು ಬಡವರ ಸಂಖ್ಯೆ ರಾಕೆಟ್ ವೇಗದಲ್ಲಿ ಹೆಚ್ಚುತ್ತಿದೆ. ಇದರಿಂದ ಅರ್ಥವಾಗುವುದೇನು ? ಭಾರತದ ಕೆಲವು ಬಂಡವಾಳಗಾರರ ಲಾಭ ಬಾಚಿಕೊಳ್ಳುವ ಸಾಮರ್ಥ್ಯ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂಬುದು ಗೊತ್ತಾಗುತ್ತದೆ.





ಖಾಸಗೀಕರಣದ ತುಡಿತ

ಯೋಜನಾ ಆಯೋಗವು ಉತ್ತಮ ಅಭಿವೃದ್ಧಿಗಾಗಿ ಶಿಕ್ಷಣ ಹಾಗೂ ಆರೋಗ್ಯ ರಂಗಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಹೇಳಿದೆ. ಅದಕ್ಕಾಗಿ ಕೇಂದ್ರ ರಾಜ್ಯ ಸರಕಾರಗಳು ಇದುವರೆಗೆ ಆರೋಗ್ಯ ರಂಗಕ್ಕೆ ಮಾಡುತ್ತಿರು ಖರ್ಚು ಜಿಡಿಪಿಯ ಶೇ 1.3 ರಿಂದ ಶೇ 2.5 ರಷ್ಟು ಖರ್ಚು ಮಾಡಬೇಕು ಎಂದು ಒತ್ತು ನೀಡಿ ಹೇಳಲಾಗಿದೆ. ಆದರೆ ವಾಸ್ತವದಲ್ಲಿ ಆಗುತ್ತಿರುವುದೇನು ? 11ನೇ ಯೋಜನೆಯ ಕಾಲಾವಧಿಯಲ್ಲಿ ಆರೋಗ್ಯ ರಂಗಕ್ಕೆ ರೂ.1,23,901 ಕೋಟಿಗಳನ್ನು ಖರ್ಚು ಮಾಡಬೇಕೆಂದು ನಿಗದಿ ಮಾಡಿಕೊಂಡಿದ್ದರೂ ಮಾಡಿರುವ ವೆಚ್ಚ ರೂ.75,533 ಕೋಟಿಗಳು ಮಾತ್ರ, ಅಂದರೇ ಶೇ 61 ಮಾತ್ರ ಜಾರಿ ಮಾಡಲಾಗಿದೆ. ಹಾಗೆಯೇ ಶಿಕ್ಷಣ ರಂಗದಲ್ಲಿ ರೂ. 2,38,608 ಕೋಟಿಗಳು ಖರ್ಚು ಮಾಡಲು ನಿಗಧಿ ಮಾಡಿಕೊಂಡಿದ್ದರೂ ಖರ್ಚು ಮಾಡಿರುವುದು ರೂ.1,42,659 ಕೋಟಿಗಳು ಮಾತ್ರ, ಅಂದರೇ ಶೇ 60 ಮಾತ್ರ. ಈ ಅಂಕಿ ಅಂಶಗಳು ಸ್ಪಷ್ಟವಾಗಿ ಒಟ್ಟು ರಾಷ್ಟ್ರೀಯ ಉತ್ಪನ್ನ ಜಿಡಿಪಿಯ 1.3 ರಷ್ಟು ಮೊತ್ತವನ್ನು 11ನೇ ಯೋಜನಾ ಅವಧಿಯಲ್ಲಿ ಖರ್ಚು ಮಾಡಿಲ್ಲ ವೆಂಬುದು ತಿಳಿಯುತ್ತದೆ. ಈಗ 12ನೇ ಯೋಜನೆಯ ಕಾಲಾವಧಿ 2012-2017 ರಲ್ಲಿ ಪಿಪಿಪಿ (ಖಾಸಗಿ-ಸಾರ್ವಜನಿಕ-ಭಾಗಿದಾರಿಕೆ) ಪಬ್ಲಿಕ್-ಪ್ರೈವೇಟ್-ಪಾರ್ಟನರ್‌ಶಿಪ್) ಮಾದರಿ ಗಳ ಮೂಲಕ ತನ್ನ ಗುರಿಗಳನ್ನು ಸಾಧಿಸಲು ಸೂಚಿಸಲಾಗಿದೆ. ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಪಿಪಿಪಿ ಮಾದರಿ ಅನುಸರಿಸಿದರೇ ಖಾಸಗಿ ಬಂಡವಾಳಗಾರರು ಮುಖ್ಯ ಪಾತ್ರವನ್ನು ವಹಿಸುವಂತಾಗಿದೆ. ಖಾಸಗಿ ಬಂಡವಾಳಗಾರರು ಆರೋಗ್ಯ ಹಾಗೂ ಶಿಕ್ಷಣ ರಂಗಗಳಲ್ಲಿ ಬಂಡವಾಳ ಹೂಡಿಕೆ ಮಾಡುವುದು ಅವರ ಲಾಭದ ಉದ್ದೇಶವನ್ನು ಬಿಟ್ಟು ಮಾಡಲು

ಪುಟ 15ಕ್ಕೆ



ಕಳೆದ ವಾರ ಆಗಸ್ಟ್ 25ರಂದು ಬಂಗಾಲದಿಂದ ಬಂದ 1500ಕ್ಕೂ ಹೆಚ್ಚು ಹಾಲಿ ಮತ್ತು ಮಾಜಿ ಶಾಸಕರು ದೇಶದ ರಾಜಧಾನಿಯಲ್ಲಿ ಧರಣಿ ನಡೆಸಿದರು. ಪ್ರಧಾನ ಮಂತ್ರಿಗಳಿಗೆ ಆ ರಾಜ್ಯದಲ್ಲಿ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲೆ ನಡೆಯುತ್ತಿರುವ ಗಂಭೀರ ಹಲ್ಲೆಗಳ ಒಂದು ವಿವರವಾದ ಮನವಿ ಪತ್ರವನ್ನು ಸಲ್ಲಿಸಿದರು. ರಾಮಲೀಲಾ ಮೈದಾನದಲ್ಲಿಯೇ ತಮ್ಮೆಲ್ಲ ಕ್ಯಾಮರಾಗಳನ್ನು ನೆಟ್ಟಿದ್ದ ಮುಖ್ಯಧಾರೆಯ ಮಾಧ್ಯಮಗಳು ಇದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದವು. 'ಸಿವಿಲ್ ಸೊಸೈಟಿ' ಮಹಾನುಭಾವರುಗಳು ಕೂಡ ತುಟಿ ಬಿಚ್ಚದೆ ತಮ್ಮ ಸೈದ್ಧಾಂತಿಕ ಒಲವು ಎಲ್ಲಿದೆ ಎಂಬುದನ್ನು ತೋರಿಸಿದ್ದಾರೆ. ಆದರೆ ಇಡೀ ಭಾರತೀಯ ಜನತೆ ಈ ಪ್ರಜಾಪ್ರಭುತ್ವ–ವಿರೋಧಿ ಸರ್ವಾಧಿಕಾರಶಾಹಿ ಪ್ರವೃತ್ತಿಗಳ ವಿರುದ್ಧ ಎಚ್ಚೆತ್ತುಕೊಳ್ಳಬೇಕಾಗಿದೆ, ಜಾಗರೂಕರಾಗಿರಬೇಕಾಗಿದೆ, ಇವನ್ನು ಸೋಲಿಸಲು ಒಂದಾಗಿ ಎದ್ದೇಳಬೇಕಾಗಿದೆ.

ಪಶ್ಚಿಮ ಬಂಗಾಲದಲ್ಲಿನ ಹಲ್ಲೆಗಳು ಭಾರತೀಯ ಜನತೆಗೆ ಮುನ್ನೆಚ್ಚರಿಕೆಯ ಕರೆ

(ಸೆಪ್ಟೆಂಬರ್ 2, 2011 ರ 'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಸಂಪಾದಕೀಯ)

ಅಣ್ಣಾ ಹಜಾರೆಯವರ ಉಪವಾಸ ಮತ್ತು ಲೋಕಪಾಲ ಮಸೂದೆಯಲ್ಲಿ ದೇಶ ಮತ್ತು ಸಂಸತ್ತು ತಲ್ಲೀನವಾಗಿದ್ದು, ಈ ನಡುವೆ ಪಶ್ಚಿಮ ಬಂಗಾಲದಲ್ಲಿ ಪ್ರಜಾಪ್ರಭುತ್ವ ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲೆ ನಡೆಯುತ್ತಿರುವ ಗಂಭೀರ ದಾಳಿಗಳು ಅಗತ್ಯ ಗಮನ ಪಡೆದಿಲ್ಲ. ಎಡ-ವಿರೋಧ ಎಂಬುದು ಕಾರ್ಪೊರೇಟ್ ಮಾಧ್ಯಮದ ಹುಟ್ಟುಗುಣ, ಅದು ಸುಟ್ಟರೂ ಬಿಡದಂತದ್ದು ಎಂದು ತಿಳಿದಿರುವವರಿಗೆ ಇದರಲ್ಲಿ ಆಶ್ಚರ್ಯವೇನೂ ಕಾಣಲಾರದು. ನಿಮಗೆ ನೆನಪಿದೆಯೇ, ಕೆಲವು ತಿಂಗಳ ಹಿಂದೆ ರಾಮಲೀಲಾ ಮೈದಾನದಲ್ಲಿ ನೆರೆದಿದ್ದವರಿಗಿಂತ ಅದೆಷ್ಟೋ ಪಾಲು ಹೆಚ್ಚಿನ ಸಂಖ್ಯೆಯಲ್ಲಿದ್ದ ಜನರು ಸಂಸತ್ತಿನತ್ತ ನಡೆದಿದ್ದರು; ಕೇಂದ್ರ ಕಾರ್ಮಿಕ ಸಂಘಗಳ ಕರೆಗೆ ಓಗೊಟ್ಟು ರಾಜಧಾನಿಗೆ ಬಂದಿದ್ದ ಅವರು ಅಷ್ಟೇ ದೇಶಪ್ರೇಮಿ ಭಾರತೀಯರಾಗಿದ್ದರು, ಬೆಲೆಯೇರಿಕೆ ಮತ್ತು ಭ್ರಷ್ಟಾಚಾರ ಎರಡರ ವಿರುದ್ಧವೂ ಅವರು ಪ್ರತಿಭಟಿಸುತ್ತಿದ್ದರು. ಆದರೆ ಮಾಧ್ಯಮಗಳಲ್ಲಿ ಈ ಅಗಾಧ ಜನಸಮೂಹದ ಪ್ರಸ್ತಾಪವಾದದ್ದು, ರಾಜಧಾನಿಯ ಸಂಚಾರ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿದವರು ಎಂದು ಮಾತ್ರ! ಇಲೆಕ್ಟ್ರಾನಿಕ್ ಮಾಧ್ಯಮಗಳು ತಾವು ಯಾವ ಸುದ್ದಿಗಳನ್ನು ಬಿತ್ತರಿಸಬೇಕು ಎಂಬುದನ್ನು ಅವು ತರುವ 'ಟಿಆರ್‌ಪಿ' ದರಗಳ ಆಧಾರದಲ್ಲಿ ನಿರ್ಧರಿಸುತ್ತವೆಯೇ ಹೊರತು, ಅವುಗಳ ಸುದ್ದಿಯೋಗ್ಯತೆಯ ಮೇಲಲ್ಲ. ಈ 'ಭೂಮಿಯ ಮೇಲಿನ ದರಿದ್ರ'ರು ಬೆಲೆಯೇರಿಕೆ ಮತ್ತು ಭ್ರಷ್ಟಾಚಾರದ ವಿರುದ್ಧ ಪ್ರತಿಭಟಿಸುವುದನ್ನು ತೋರಿಸಿದರೆ ಅದು ಟಿಆರ್‌ಪಿ ದರಗಳ ಮೇಲೆ ಸಕಾರಾತ್ಮಕ ಪ್ರಭಾವ ಬೀರಲಿಕ್ಕಿಲ್ಲ ತಾನೇ? ಅವರ ತರ್ಕದ ಪರಿಯಿದು!

ಇದೇ ಮನೋಭಾವ ಇದೇ ಆಗಸ್ಟ್ 25ರಂದು ಕೂಡ ಪ್ರದರ್ಶನಗೊಂಡಿತು. ಅಂದು ಬಂಗಾಲದಿಂದ ಬಂದ 1500ಕ್ಕೂ ಹೆಚ್ಚು ಹಾಲಿ ಮತ್ತು ಮಾಜಿ ಶಾಸಕರು ದೇಶದ ರಾಜಧಾನಿಯಲ್ಲಿ ಧರಣಿ ನಡೆಸಿದರು. 17 ಸದಸ್ಯರಿದ್ದ ಒಂದು ನಿಯೋಗ ಈ ಧರಣಿ ನಿರತರ ಪರವಾಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಒಂದು ವಿವರವಾದ ಮನವಿ ಪತ್ರವನ್ನು ಅವರಿಗೆ ಸಲ್ಲಿಸಿತು. ಇದರಲ್ಲಿ, ಪಶ್ಚಿಮ ಬಂಗಾಲದಲ್ಲಿ ಎಡರಂಗದ ಕಾರ್ಯಕರ್ತರು, ಕಚೇರಿಗಳು ಮತ್ತು ಮನೆಗಳ ಮೇಲೆ ನಡೆಯುತ್ತಿರುವ ಗಂಭೀರ ಹಿಂಸಾತ್ಮಕ ದಾಳಿಗಳ ಪಟ್ಟಿಯನ್ನೇ ಕೊಡಲಾಗಿದೆ. ಆದರೆ ಮುಖ್ಯಧಾರೆಯ ಮಾಧ್ಯಮಗಳು ಇದನ್ನು ಸಂಪೂರ್ಣವಾಗಿ ಕತ್ತಲಲ್ಲಿಟ್ಟವು.

'ಸಿವಿಲ್ ಸೊಸೈಟಿ'ಯ ದಿವ್ಯಮೌನ

ಈ ಮನವಿ ಪತ್ರದ ಸಾರಾಂಶದಿಂದ ವ್ಯಕ್ತವಾಗುವ ಸಂಗತಿಯೆಂದರೆ, ಈ ಅವಧಿಯಲ್ಲಿ 30 ಎಡರಂಗದ ಮುಖಂಡರು ಮತ್ತು ಕಾರ್ಯಕರ್ತರನ್ನು (ಸಿಪಿಐ(ಎಂ)ನ 28 ಹಾಗೂ ಆರ್‌ಎಸ್‌ಪಿ ಯ 2) ಕೊಲ್ಲಲಾಗಿದೆ ಮತ್ತು ಇನ್ನೂ ಏಳು ಮಂದಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಲಾಗಿದೆ; 684 ಮಹಿಳೆಯರ ಮೇಲೆ ದೈಹಿಕ ಹಲ್ಲೆ ನಡೆದಿದೆ, 508 ಮಹಿಳೆಯರಿಗೆ ಲೈಂಗಿಕ ಕಿರುಕುಳ ಕೊಡಲಾಗಿದೆ ಮತ್ತು 23 ಮಹಿಳೆಯರ ಮಾನಭಂಗ ಮಾಡಲಾಗಿದೆ; ಗಾಯಗೊಂಡ 3785 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಬೇಕಾಗಿ ಬಂದಿದೆ. ಇನ್ನೂ ಎಷ್ಟೋ ಮಂದಿಯನ್ನು ದೂರು ಕೊಡದಂತೆ ತಡೆದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯದಂತೆಯೂ ಮಾಡಲಾಗಿದೆ. ಮನೆಗಳಿಗೆ ಬೆಂಕಿ ಹಚ್ಚುವ, ಲೂಟಿ ಮಾಡುವ 2064 ಕೇಸುಗಳು ನಡೆದಿವೆ, 14081 ಮಂದಿಯನ್ನು ಅವರ ನಿವಾಸಗಳಿಂದ ಒಕ್ಕಲೆಬ್ಬಿಸಲಾಗಿದೆ. ಒಟ್ಟು ಸುಮಾರು 40,000 ಮಂದಿ ಬೆದರಿಕೆಗೊಳಗಾಗಿ ತಮ್ಮ ಮನೆಮಾರು ಬಿಟ್ಟು ಹೋಗಬೇಕಾಗಿ ಬಂದಿದೆ. ತಮ್ಮ ಮನೆಗಳಲ್ಲಿ ಶಾಂತಿಯಿಂದ ಇರಲು ಜನರು ಸ್ಥಳೀಯ ತೃಣಮೂಲ ಕಾಂಗ್ರೆಸ್ ಮುಖಂಡರಿಗೆ ಹಣ ತೆರಬೇಕಾದ ಬಲವಂತಕ್ಕೆ ಒಳಗಾಗಿದ್ದಾರೆ. ಒಂದು ಅಂದಾಜಿನ ಪ್ರಕಾರ ಹೀಗೆ ಕಿತ್ತುಕೊಂಡಿರುವ ಹಣದ ಮೊತ್ತ ಕನಿಷ್ಟ ರೂ. 27.77 ಕೋಟಿ ದಾಟಿರಬಹುದು. 758 ಪಕ್ಷದ ಕಚೇರಿಗಳು, ಕಾರ್ಮಿಕ ಸಂಘಗಳ ಅಥವ ಸಾಮೂಹಿಕ ಸಂಘಟನೆಗಳ ಕಚೇರಿಗಳ ಮೇಲೆ ದಾಳಿ ನಡೆಸಲಾಗಿದೆ, ಅವುಗಳನ್ನು ಲೂಟಿ ಹೊಡೆಯಲಾಗಿದೆ, ಸುಟ್ಟು ಹಾಕಲಾಗಿದೆ, ಮುಚ್ಚುವಂತೆ ಮಾಡಲಾಗಿದೆ, ಇಲ್ಲವೇ ಬಲವಂತದಿಂದ ವಶಪಡಿಸಿಕೊಳ್ಳಲಾಗಿದೆ. 77 ವಿದ್ಯಾರ್ಥಿ ಸಂಘಗಳ ಕಚೇರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಅವುಗಳ ಪದಾಧಿಕಾರಿಗಳನ್ನು ಹೊಡೆದೋಡಿಸಲಾಗಿದೆ, ಇಲ್ಲವೇ ರಾಜೀನಾಮೆ ಕೊಡುವಂತೆ ಮಾಡಲಾಗಿದೆ, ಅವರಲ್ಲಿ ಕೆಲವರನ್ನು ಪರೀಕ್ಷೆಗೆ ಹಾಜರಾಗಲು ಕೂಡ ಬಿಟ್ಟಿಲ್ಲ. ರೈತಾಪಿ ಜನಗಳ ಹಕ್ಕುಗಳ ಮೇಲೂ ವ್ಯಾಪಕ ದಾಳಿಗಳು ನಡೆದಿವೆ. 3418 ರೈತರಿಗೆ ತಮ್ಮದೇ ಜಮೀನಿನಲ್ಲಿ ಉಳುಮೆ ಮಾಡುವ ಹಕ್ಕನ್ನು ನಿರಾಕರಿಸಲಾಗಿದೆ. ಹೀಗೆ ಉಳುಮೆ ನಡೆಸದಂತೆ ಮಾಡಿರುವ ಒಟ್ಟು ಜಮೀನಿನ ಪ್ರಮಾಣ 9222.73 ಎಕ್ರೆಗಳು. ಇದಲ್ಲದೆ 9222.02 ಎಕ್ರೆ ಪಟ್ಟಾ ಅಥವ ಬರ್ಗಾ ಜಮೀನುಗಳಿಂದ 26,838 ಪಟ್ಟಾದಾರರನ್ನು ಮತ್ತು ಭಾಗ ಬೆಳೆಗಾರರನ್ನು ಬಲವಂತದಿಂದ ಒಕ್ಕಲೆಬ್ಬಿಸಲಾಗಿದೆ.

ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳ ಮೇಲೆ ಇಂತಹ ಗಂಭೀರ ಮತ್ತು ಯಾರೂ ಒಪ್ಪಲಾರದ ದಾಳಿಗಳು ನಡೆಯುತ್ತಿದ್ದರೂ ಸಿವಿಲ್ ಸೊಸೈಟಿ ಅಥವ ನಾಗರಿಕ ಸಮಾಜ ಎಂದು ತಮ್ಮನ್ನು ಕರೆಸಿಕೊಳ್ಳುವ ಯಾವ ವಿಭಾಗವೂ ಇದರ ವಿರುದ್ಧ ಒಮ್ಮೆಯಾದರೂ ತುಟಿಪಿಟಕ್ಕೆಂದಿಲ್ಲ. ಇದೇ ಮಹಾನುಭಾವರುಗಳು ಸಿಂಗೂರ್ ಮತ್ತು ನಂದಿಗ್ರಾಂ ಪ್ರಶ್ನೆಗಳ ಮೇಲೆ ಎಡರಂಗ ಮತ್ತು ಅದರ ರಾಜ್ಯಸರಕಾರದ ಮೇಲೆ ಸುಳ್ಳು ಆಪಾದನೆಗಳನ್ನು ಎತ್ತಿ ತೋರುವಲ್ಲಿ, ಮಾವೋವಾದಿಗಳೊಂದಿಗೆ ಕೈಜೋಡಿಸಿ ಮುಂಚೂಣಿಯಲ್ಲಿದ್ದರು. ಆದರೆ, ಈಗ ಬಂಗಾಲದಲ್ಲಿ ಇಂತಹ ಗಂಭೀರ ಹಲ್ಲೆಗಳು ನಡೆಯುತ್ತಿರುವಾಗ ಮೌನ ವಹಿಸಲು ಅವರು ನಿರ್ಧರಿಸಿದ್ದಾರೆ. ಇವರ ಸೈದ್ಧಾಂತಿಕ ಒಲವುಗಳು ಎಂತವು ಎಂಬುದನ್ನು ತಿಳಿಯಲು ಇಷ್ಟು ಸಾಲುವುದಿಲ್ಲವೇ?

ಜನತೆ ತೆಪ್ಪಗೆ ಒಪ್ಪಿಕೊಳ್ಳುವುದಿಲ್ಲ

ಆದರೆ ಇದರಲ್ಲಿ ಆಶ್ಚರ್ಯವೇನಿಲ್ಲ. ಇದು 1970ರ ದಶಕದ ನೆನಪುಗಳನ್ನು ಮರುಕಳಿಸುತ್ತದೆ. 1972 ರಿಂದ ಪೂರ್ಣ ಆರು ವರ್ಷಗಳಕಾಲ ಪಶ್ಚಿಮ ಬಂಗಾಲದಲ್ಲಿ ಸಿಪಿಐ(ಎಂ) ವಿರುದ್ಧ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಹರಿಯಬಿಡಲಾಯ್ತು. ರಾಜ್ಯದಲ್ಲಿ ಕಮ್ಯುನಿಸ್ಟ್ ನೇತೃತ್ವದ ಜನಾಂದೋಲನವನ್ನು ನಿರ್ನಾಮ ಮಾಡುವುದೇ ಅದರ ಗುರಿಯಾಗಿತ್ತು. ಈ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಪ್ರತಿರೋಧಿಸಿ ಸೋಲಿಸುವಲ್ಲಿ 1400ಕ್ಕಿಂತಲೂ ಹೆಚ್ಚು ಸಂಗಾತಿಗಳು ಹುತಾತ್ಮರಾದರು, ಸುಮಾರು 22,000 ಪಕ್ಷದ ಕುಟುಂಬಗಳು ತಮ್ಮ ಮನೆಮಾರು ಬಿಟ್ಟು ಸ್ಥಳಾಂತರಗೊಳ್ಳಬೇಕಾಯಿತು. 1975ರಲ್ಲಿ ಆಂತರಿಕ ತುರ್ತು ಪರಿಸ್ಥಿತಿಯ ಮೂಲಕ ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ಇಂತಹ ದಾಳಿಗಳನ್ನು ಇಡೀ ದೇಶಕ್ಕೇ ಸಾರ್ವತ್ರಿಕಗೊಳಿಸಿದಾಗ ಮಾತ್ರವೇ ಇನ್ನು ಕೆಲವು ವಿಭಾಗಗಳು ಸರ್ವಾಧಿಕಾರಶಾಹಿಯ ಅಪಾಯಗಳನ್ನು ಅರಿತು ಎಚ್ಚೆತ್ತುಕೊಂಡವು. ಅಂತಿಮವಾಗಿ 1977ರಲ್ಲಿ ಜನತೆ ಭಾರತೀಯ ಪ್ರಜಾಪ್ರಭುತ್ವದ ಮೇಲಿನ ಈ ಗಂಭೀರ ದಾಳಿಯನ್ನು ಸೋಲಿಸುವಲ್ಲಿ ಜಯಶೀಲರಾದರು. ಹಾಗೇನೇ, ಪಶ್ಚಿಮ ಬಂಗಾಲದ ಜನತೆ ಆಳುವ ವರ್ಗಗಳ ನಿರೀಕ್ಷೆಗಳು ಮತ್ತು ಕುತಂತ್ರಗಳಿಗೆ ತದ್ವಿರುದ್ಧವಾಗಿ 1977ರ ಚುನಾವಣೆಗಳಲ್ಲಿ ಸಿಪಿಐ(ಎಂ)

ಪುಟ 10ಕ್ಕೆ

ಕಾಂ.ಎಂ.ಕೆ.ಪಾಂಧೆ

ಕಾರ್ಮಿಕ ವರ್ಗದ ಅಸಾಮಾನ್ಯ ನೇತಾರ

ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರು, ದೇಶದ ಕಾರ್ಮಿಕ ಚಳುವಳಿಯ ಐಕ್ಯತೆಗಾಗಿ ಶ್ರಮಿಸಿದ ಚತುರ ಸಂಘಟಕರು, ನೇತಾರರೂ ಆದ ಕಾಂ॥ ಪಂಧೆಯವರು ನಮ್ಮನ್ನು ಅಗಲಿದ್ದಾರೆ. ಅವರ ಜೀವನ ಹಾಗೂ ಮಹತ್ವದ ಕೊಡುಗೆ ಕುರಿತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳ ಬರಹ

ಪ್ರಕಾಶ್ ಕಾರಟ್

ಆಗಸ್ಟ್ 19 ರಂದು ಮಧ್ಯರಾತ್ರಿಯ ನಂತರ ಕಾಮ್ರೇಡ್ ಎಂ ಕೆ ಪಾಂಧೆ ಅಸುನೀಗಿದರು. ಅವರು ತಮ್ಮ ಅಂತ್ಯ ಕಂಡ ಕ್ಷಣ ನಾನೂ ಅವರೊಂದಿಗೆ ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಯಲ್ಲಿ ಇದ್ದೆ. ನಮ್ಮೆಲ್ಲರ ಪ್ರೀತಿಯ ಸಂಗಾತಿ ನಮ್ಮೆಲ್ಲರಿಂದ ದೂರ ಹೋಗುತ್ತಿರುವುದು ನೋವಿನ ಸಂಗತಿಯಾಗಿತ್ತು. ಪಾಂಧೆ ತಾವು ಬಯಸಿದಂತೆಯೆ ತಮ್ಮ ಅಂತ್ಯವನ್ನು ಕಂಡರು ಎಂದು ಹೇಳಬಹುದು; ಕೊನೆಯ ತನಕ ಚುರುಕಾಗಿ, ತಮ್ಮ ಚೇತರಿಕೆ ಬಗ್ಗೆ ಆಶಾದಾಯಕವಾಗಿದ್ದರು. ಆಗಸ್ಟ್ 19ರಂದು ಪಾಂಧೆರವರು ಪಾಲಿಟ್‌ಬ್ಯುರೊವಿನ ಚರ್ಚೆಯಲ್ಲಿ ಭಾಗವಹಿಸಿ, ಸಂಜೆ ಎಂದಿನಂತೆ CITU ಕಛೇರಿಯಲ್ಲಿ ತಮ್ಮ ಕೆಲಸದಲ್ಲಿ ತೊಡಗಿಸಿಕೊಂಡರು. ಸಂಜೆ 6.30 ರ ಹೊತ್ತಿಗೆ ತಮ್ಮ ಮನೆಯಲ್ಲಿ ಪಾಂಧೆ ರವರು ಹೃದಯಾಘಾತದ ಪರಿಣಾಮವಾಗಿ ಆಸ್ಪತ್ರೆಯ ದಾರಿಯಲ್ಲಿ ಕುಸಿದರು.

ಪಾಂಧೆ ವಿದ್ಯಾರ್ಥಿ ಕಾರ್ಯಕರ್ತಕರಾಗಿ ತಮ್ಮ ರಾಜಕೀಯ ಜೀವನದಲ್ಲಿ ತೊಡಗಿದರು. ಅವರ ಸಾಮರ್ಥ್ಯ ಆಸಕ್ತಿ ಹಾಗು ಸಂಘಟನಾ ಕೌಶಲ್ಯತೆಗಳನ್ನು ಕಂಡು ಪಕ್ಷದ ಸದಸ್ಯತ್ವವನ್ನು 1943ರಲ್ಲಿ ಅವರ 17ನೆ ವಯಸಿನಲ್ಲೆ ನೀಡಲಾಯಿತು. 1958ರವರೆಗೂ ಅವರ ಚಟುವಟಿಕೆಗಳು ಶೋಲಾಪುರಕ್ಕೆ ಸೀಮಿತವಾಗಿದ್ದಿತು. ಶೋಲಾಪುರದ ಅವರ ಚಟುವಟಿಕೆಗಳು ಅವರಲ್ಲಿದ್ದ ಹಲವಾರು ಕೌಶಲ್ಯತೆಗಳನ್ನು ಹೆಚ್ಚಿಸಿದವು. ಪ್ರತಿಭಾವಂತ ವಿದ್ಯಾರ್ಥಿಯಿಂದ ಕಾರ್ಮಿಕ ಸಂಘಟನೆಗಳನ್ನು ಸಂಘಟಿಸುವ ಚತುರ ಕಾರ್ಯಕರ್ತರಾಗಿ ಬೆಳೆದರು; ಮುಂದೆ, 23ರ ವಯಸ್ಸಿನಲ್ಲಿ ಶೋಲಾಪುರದ ಸಿಪಿಐ ಪಕ್ಷದ ನಗರ ಕಾರ್ಯದರ್ಶಿಯಾಗಿ ನೇಮಿತಗೊಂಡರು. ಮರಾಠಿ ಪತ್ರಿಕೆಯ ಸಂಪಾದಕರಾಗಿ ಕೆಲಸ ಮಾಡುತ್ತ, ಗೋವಾ ವಿಮೋಚನಾ ಸಂಘಟನೆಯ ಕಾರ್ಯದರ್ಶಿಯಾಗಿದ್ದರು. ಈ ಎಲ್ಲಾ ಚಟುವಟಿಕೆಗಳ ಮಧ್ಯದಲ್ಲಿ, ಪಾಂಧೆರವರು ತಮ್ಮ ಸ್ನಾತಕೋತ್ತರ ಪದವಿ ಪ್ರೊ: ಡಿ. ಆರ್. ಗಾಡ್ಗಿಲ್‌ರವರ ಕೈ ಕೆಳಗೆ; ಗೋಖಲೆ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿಯನ್ನೂ ಪಡೆದುಕೊಂಡರು.



ಬೆಂಗಳೂರಿನಲ್ಲಿ ನಡೆದ ಸಿಐಟಿಯು ಅಖಿಲ ಭಾರತ ಸಮ್ಮೇಳನದ ಸಂದರ್ಭದ ರ‍್ಯಾಲಿಯನ್ನುದ್ದೇಶಿಸಿ

ಶೋಲಾಪುರದಿಂದ ಪಾಂಧೆರವರ ರಾಜಕೀಯ ಜೀವನ ದೆಹಲಿಗೆ ಸಾಗಿತು. ಇದರಿಂದ ರಾಷ್ಟ್ರ ರಾಜಕೀಯದಲ್ಲಿ ಭಾಗವಹಿಸ ತೊಡಗಿದರು. 1958ರಿಂದ ಪಾಂಧೆರವರು ಕಾರ್ಮಿಕ ಸಂಘಟನೆಯ ಹಾಗು ಪಕ್ಷದ ಚಟುವಟಿಕೆಗಳನ್ನು ದೆಹಲಿಯಿಂದಲೇ ಮಾಡಲಾರಂಭಿಸಿದರು. ಈ ರೀತಿಯಲ್ಲಿ, ಪಾಂಧೆರವರ ಕಮ್ಯುನಿಸ್ಟ್ ಚಟುವಟಿಕೆಗಳು ಮೊದಲು AICTU ನಂತರ CITU ಗಳಲ್ಲಿ ಆರಂಭಗೊಂಡವು. ಬಿ.ಟಿ. ರಣದಿವೆ ದಾರಿಯಲ್ಲಿ ನಡೆದು, ಪಾಂಧೆರವರು ಪ್ರಧಾನ ಕಾರ್ಯದರ್ಶಿ ಸ್ಥಾನದ ಹೊಣೆಯನ್ನು 1990ರಲ್ಲಿ ಹೊತ್ತರು.

ಪಾಂಧೆರವರು CITU ಸೇರುವ ಸಮಯದಲ್ಲಿ ಜಾಗತೀಕರಣದ ಹೆಚ್ಚಾದ ಪ್ರಭಾವ ಕಾರ್ಮಿಕ ವರ್ಗವನ್ನು ಘಾಸಿಗೊಳಿಸಿತು. ಕಳೆದ ಎರಡು ದಶಕಗಳು ಪಾಂಧೆರವರು ಈ ಜಾಗತಿಕರಣದಲ್ಲಿ ಸಿಲುಕಿ ನರಳುತ್ತಿರುವ ಕಾರ್ಮಿಕ ವರ್ಗದ ಚಳುವಳಿಗಳನ್ನು ಬೆಳೆಸುವುದರಲ್ಲಿ ಶ್ರಮಿಸಿದರು. ಸಾಮ್ರಾಜ್ಯಶಾಹಿ ಜಾಗತೀಕರಣ ಮತ್ತು ನವ ಉದಾರೀಕರಣ ನೀತಿಗಳು ಹೇಗೆ ಕಾರ್ಮಿಕ ವರ್ಗದ ಶೋಷಣೆಯನ್ನು ತೀವ್ರಗೊಳಿಸುತ್ತವೆ ಹಾಗೂ ಹೇಗೆ ಕಾರ್ಮಿಕ ವರ್ಗದ ಆಂದೋಲನವನ್ನು ತೀವ್ರಗೊಳಿಸಬೇಕು ಎಂದು ಕಾಂ॥ ಪಂಧೆ ಅತ್ಯಂತ ತ್ವರಿತವಾಗಿ ಗ್ರಹಿಸಿದರು. 1991ರಿಂದ 2010ರವರೆಗೆ ಜಾಗತೀಕರಣವನ್ನು ಎದುರಿಸಿ 13 ರಾಷ್ಟ್ರೀಯ ಮುಷ್ಕರಗಳು ನಡೆದವು. ಪಾಂಧೆರವರು ಪ್ರಧಾನ ಕಾರ್ಯದರ್ಶಿಯಾಗಿ ಹಲವಾರು ಸಲಹೆಗಳನ್ನು, ಬೇಡಿಕೆಗಳನ್ನು, ಈ ಮುಷ್ಕರಗಳ ಸಲುವಾಗಿ ಮಂಡಿಸಿದ್ದಾರೆ. ಈ ಮುಷ್ಕರಗಳು ನಡೆಸುವಾಗ ಪಾಂಧೆರವರು ತೋರಿಸುತ್ತಿದ್ದ ನೇತೃತ್ವ ಗಮನಾರ್ಹ.

ಪಾಂಧೆರವರು ತಮ್ಮ CITU ದಿನಗಳಲ್ಲಿ, CITUವಿನ ಮುಖ್ಯ ಗುರಿಯಾದ ಕಾರ್ಮಿಕ ವರ್ಗದ ಏಕೀಕರಣದ ಸಲುವಾಗಿ ಶ್ರಮ ಪಟ್ಟರು. 1981ರಲ್ಲಿ National Campaign Committee of Trade Unions ರಚನೆ, Committee of Public Sector Trade Union ರಚನೆ: ಇದರ ಮೂಲಕ ಸಾರ್ವಜನಿಕ ಉದ್ಯಮಗಳ ಏಕೀಕರಣ,ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ, (Sponsoring Committee of Trade Unions) ರಚನೆ: ಇದರ ಮೂಲಕ ಅನೇಕ ರಾಷ್ಟ್ರೀಯ ಮುಷ್ಕರಗಳನ್ನು ಹಮ್ಮಿಕೊಳ್ಳಲು ಸಹಾಯಕವಾಗಿದ್ದು, ಪರಿಣಾಮವಾಗಿ Committee of Central Trade Unions ರಚನೆಯಾಯಿತು. ಪಾಂಧೆರವರು ಕಾರ್ಮಿಕ ಸಂಘಟನೆಗಳ ಏಕೀಕರಣಕ್ಕಾಗಿ ನಿರತವಾಗಿ ಶ್ರಮ ಪಡುತ್ತಿದ್ದರು. ಕೊನೆಯಲ್ಲಿ, ಸೆಪ್ಟಂಬರ್ 7, 2010 ರಂದು ಎಲ್ಲಾ ಕಾರ್ಮಿಕ ಸಂಘಟನೆಗಳು ಒಂದಾಗಿ ಮುಷ್ಕರ ಮಾಡಿದ ಸಂಗತಿ ಅವರಿಗೆ ಸಂತೃಪ್ತಿ ತಂದಿತು.

ಪಾಂಧೆರವರು ಕಮ್ಯುನಿಸ್ಟ್ ಕಾರ್ಮಿಕ ಸಂಘಟನೆಗಳ ಅತಿ ಉತ್ಕೃಷ್ಟ ಮುಖಂಡರೆನಿಸಿಕೊಂಡರು. ತಾತ್ವಿಕ ವಿಚಾರಗಳನ್ನು ಅರಿತುಕೊಂಡು ಬಂಡವಾಳಶಾಹಿಗಳ ಎದುರು ಹೋರಾಡುವ ಮಹತ್ವವನ್ನು ಅರಿತು, ಕಾರ್ಮಿಕ ವರ್ಗದ ಜ್ಞಾನವನ್ನು ಹೆಚ್ಚಿಸಿ, ಅದರಿಂದಲೇ ಸಮಾಜವಾದಿ ಗುರಿಗಳನ್ನು ಪೂರೈಸಲು ಸಾಧ್ಯ ಎಂದು ನಂಬಿದ್ದರು. ಅವರ ಮಾತುಗಳಲ್ಲಿ, "ವೈಚಾರಿಕವಾಗಿ ಕಾರ್ಮಿಕ ವರ್ಗವು ತನ್ನ ಅರಿವು ಮತ್ತು ಜ್ಞಾನವನ್ನು ಹೆಚ್ಚಿಸಿಕೊಳ್ಳದೇ ಇದ್ದರೆ ಕಾರ್ಮಿಕ ವರ್ಗಕ್ಕೆ ಎಸಗಲಾಗುತ್ತಿರುವ ಅನ್ಯಾಯಗಳ ಪರಿಣಾಮಗಳನ್ನು ಮಾತ್ರವೇ ಕಡಿಮೆಗೊಳಿಸಲು ಸಾಧ್ಯ. ಅವುಗಳ ಕಾರಣಗಳನ್ನು ಗುರುತಿಸಿ, ಸರಿ ಪಡಿಸಲು ಸಾಧ್ಯವಿಲ್ಲ", ಎಂದು ಘೋಷಿಸಿದ್ದರು .

ಅವರು ತೀಕ್ಷ್ಣತೆ ಹಾಗು ಚಾತುರ್ಯತೆಯುಳ್ಳ ಕಾರ್ಮಿಕ ವರ್ಗ ಸಂಘಟನೆಗಾರ. ಕಲ್ಲಿದ್ದಲು ಮತ್ತು ಉಕ್ಕಿನ ಕಾರ್ಮಿಕರ ಸಂಘಟನೆಗಳನ್ನು ಸದೃಡಗೊಳಿಸಲು ಮುಖ್ಯ ಪಾತ್ರವಹಿಸಿದರು. ಸಾರ್ವಜನಿಕಾ ಉದ್ಯಮಗಳು ಮತ್ತು ಅವುಗಳ ಮಹತ್ವವನ್ನು ಅವರಂತೆ ಕೆಲವರು ಮಾತ್ರ ಅರ್ಥೈಸಿಕೊಂಡಿದ್ದರು. ಇದರ ಪರಿಣಾಮ ಪಾಂಧೆರವರು, ಉದ್ಯಮಗಳ ಆಡಳಿತ ಮಂಡಲಿಗಳೊಂದಿಗೆ ಸಂಧಾನ ನಡೆಸುವಾಗ ಕಾರ್ಮಿಕರ ಸಲುವಾಗಿ ಮಾತನಾಡಿ, ಅವರ ಹಿತವನ್ನು ಕಾಪಾಡುತ್ತಿದ್ದರು. ಗ್ರಾಹಕರ ಬೆಲೆ ಸೂಚ್ಯಂಕ (consumer price index) ಮತ್ತು ಅದರ ಕಪಟತನ, ಅದರಿಂದ ಕಾರ್ಮಿಕ ವರ್ಗಕ್ಕೆ ಆಗುವ ಮೋಸವನ್ನು ಸಮರ್ಥವಾಗಿ ಬಯಲು ಮಾಡುತ್ತಿದ್ದರು. ಈ ವಿಷಯಗಳ ಬಗ್ಗೆ ನನಗೆ ಅರಿವು ಮಾಡಲು ಪಾಂಧೆರವರು ಬರೆದ ಕರಪತ್ರವೆ ಕಾರಣ. ಇಂತಹ ಒಬ್ಬ ನಾಯಕನನ್ನು ಕಾಣುವುದು ಅತಿ ಅಪರೂಪ.

ಮಾರ್ಕ್ಸ್ ವಾದಿ, ಪಾಂಧೆ ರವರು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಗಳನ್ನು ಬೆಳೆಸಲು ಶ್ರಮಪಟ್ಟರು. ಕಾರ್ಮಿಕ ವರ್ಗದ ಸಲುವಾಗಿ ಕೆಲಸ ಮಾಡುತ್ತಿದ್ದ ಅಂತರ ರಾಷ್ಟ್ರೀಯ ಸಂಘಟನೆಗಳೊಂದಿಗೆ CITU ಕೆಲಸ ಮಾಡಿಸುವುದರಲ್ಲಿ ನಿರತರಾಗಿದ್ದರು.

ಅವರಿಗೆ ಕೊಟ್ಸ್ ಸಂಸ್ಥೆಯೊಂದಿಗೆ ಹಳೆಯ ಸಂಬಂಧವಿದ್ದಿತು. ಡಾ॥ ದ್ವಾರ್ಕನಾಥ್

ಪುಟ 12ಕ್ಕೆ



ಬೆಂಗಳೂರಿನಲ್ಲಿ ನಡೆದ ಸಿಐಟಿಯು ಅಖಿಲ ಭಾರತ ಸಮ್ಮೇಳನದ ಸಂದರ್ಭದಲ್ಲಿ ರೈತ ಚಳುವಳಿ ನೀಡಿದ ಕೊಡುಗೆ ಸ್ವೀಕರಿಸುತ್ತಾ


ಸರಳ ಜೀವನ, ಅಷ್ಟೇ ದೃಢವಾದ ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆ ಇವು ಕಾಂ. ಎಂ.ಕೆ.ಪಂಧೆಯುವರ ವಿಶೇಷಗಳು. ಪಂಧೆಯುವರ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್‌ರವರು ತಮ್ಮ ಅನಿಸಿಕೆಗಳನ್ನು ಹೀಗೆ ತೆರೆದಿಟ್ಟಿದ್ದಾರೆ.

ಕಾರ್ಮಿಕ ವರ್ಗದ ಐಕ್ಯತೆ ಬೆಸೆದ ಕುಶಲ ಹೋರಾಟಗಾರ ಎಂ.ಕೆ.ಪಂಧೆ

ಪ್ರಸನ್ನಕುಮಾರ್

ಕಾಮ್ರೇಡ್ ಹೌ ಈಜ್ ಯುವರ್ ಹೆಲ್ತ್ ಎಂದು ಕೇಳಿದಾಗ. ಅವರು ಹೇಳಿದ್ದು- ಈಗ ನನ್ನ ಆರೋಗ್ಯ ಸುಧಾರಿಸಿದೆ. ಈಗ ಎಲ್ಲಾ ಕೆಲಸಗಳನ್ನು ಮಾಡಲು, ಓಡಾಡಲು ತೊಂದರೆ ಇಲ್ಲ. ಎಂದು ನವ ಯುವಕರಂತೆ ಉತ್ತರ ನೀಡಿದವರು 86ರ ಹರೆಯದ ಹಿರಿಯ ಸಂಗಾತಿ ಕಾ: ಎಂ.ಕೆ.ಪಂಧೆ ಅವರು. ಹಿಮಾಚಲ ಪ್ರದೇಶದ ಕುಲ್ಲು ನಗರದಲ್ಲಿ 29-31 ಜುಲೈ 2011 ಸಿಐಟಿಯು ಜನರಲ್ ಕೌನ್ಸಿಲ್ ಸಭೆ ನಡೆಯುತ್ತಿರುವಾಗ ನಾನು ಕೇಳಿದಾದ ನೀಡಿದ ಸ್ಪಂದನೆ. ಇತ್ತೀಚಿಗೆ ಶ್ವಾಸಕೋಶದ ಕ್ಯಾನ್ಸರ್ ನಿಂದ ಬಳಲುತ್ತಿದ್ದ ಸಂಗಾತಿ ಪಂಧೆ ಅವರು ಕಿಮೋ ತೆರಪಿ ಚಿಕಿತ್ಸೆ ಯಿಂದ ಚೇತರಿಸಿಕೊಳ್ಳುತ್ತಿದ್ದ ಸಂಗಾತಿ. ಯುವಕರು ಕೂಡ ಪ್ರಯಾಣ ಮಾಡಲು ಪ್ರಯಾಸದಾಯಕವೆಂದು ಭಾವಿಸಿಸುವ ಹಿಮಾಚಲ ಪ್ರದೇಶದ ಗುಡ್ಡ ಬೆಟ್ಟಗಳ ನಾಡಿಗೆ ತುಂಬಾ ಹೈರಾಣಾದ ಪ್ರಯಾಣ ಮಾಡಿ ಭಾಗವಹಿಸಿದ್ದರು. ವರ್ಕಿಂಗ್ ಕಮಿಟಿ ಸಭೆಯ ಕೊನೆಯ ದಿನ ನಡೆದ ಬಹಿರಂಗ ಸಭೆಯಲ್ಲಿ ಹೈಡ್ರೋ ಪ್ರಾಜೆಕ್ಟಗಳ ಮಾಲೀಕರ ದೌರ್ಜನ್ಯಗಳನ್ನು ಜೀವದ ಹಂಗು ತೊರೆದು ಹೋರಾಟದಲ್ಲಿ ನಿರತಗಾಗಿರುವ ಕಾರ್ಮಿಕರಿಗೆ ವಿಶ್ವಾಸ ತುಂಬಿ, ಹುರಿದುಂಬಿಸುವ ಭಾಷಣವನ್ನು ಕಾಂ. ಪಂಧೆ ಮಾಡಿದ್ದು ಇನ್ನು ನನ್ನ ಕಣ್ಣಿಗೆ ಕಟ್ಟಿದಂತೆ ರಿಂಗಣಿಸುತ್ತಿದೆ. ಜೀವನದುದ್ದಕ್ಕೂ ಅತ್ಯಂತ ಸಾರ್ಥಕವಾಗಿ ಹಾಗೂ ಕ್ರಿಯಾಶೀಲವಾಗಿ ತೊಡಗಿಸಿಕೊಂಡು ಮಾದರಿಯಾಗಿದ್ದವರು ಕಾ: ಪಂಧೆ.

ಕಾಂ. ಮಧುಕರ್ ಕಾಶಿನಾಥ್ ಪಂಧೆ ಅವರು ದಿನಾಂಕ 19-8-2011 ರಂದು ಬೆಳಿಗ್ಗೆ ಪಕ್ಷದ ಪೊಲಿಟ್‌ಬ್ಯೂರೋ ಕೇಂದ್ರದ ಸಭೆಯಲ್ಲಿ ಭಾಗವಹಿಸಿ ನಂತರ ಸಿಐಟಿಯು ಕೇಂದ್ರ ಕಛೇರಿಗೆ ಬೇಟಿ ನೀಡಿ ಆನಂತರ ಮನೆಗೆ ಹೋಗಿ ಸ್ವಲ್ಪ ಹೊತ್ತಿನಲ್ಲೇ ಹೃದಯದ ನೋವು ಕಾಣಿಸಿಕೊಂಡು ರಾಮಮನೋಹರ ಲೋಹಿಯಾ ಆಸ್ಪತ್ರೆಯಲ್ಲಿ ರಾತ್ರಿ 11 ರ ಹೊತ್ತಿಗೆ ಚೇತರಿಸಿಕೊಂಡಂತೆ ಕಂಡರೂ ಮಧ್ಯರಾತ್ರಿ 12-20 ಕ್ಕೆ ತೀವ್ರ ಹೃದಯಾಘಾತದಿಂದ ನಮ್ಮೆಲ್ಲರನ್ನು ಅಗಲಿರಿವುದು ಭಾರಿ ದುಃಖವನ್ನು ಉಂಟು ಮಾಡುವಂತಹದ್ದಾಗಿದೆ. ಕಾಮ್ರೇಡ್ ಪಂಧೆ ಅವರು ಬಿಇಎಲ್ ಕಾರ್ಮಿಕರ ವೇತನ ಪರಿಷ್ಕರಣೆ ಮಾತುಕತೆಗಳಲ್ಲಿ ಭಾಗವಹಿಸುವಾಗ ನಾನು ಅವರೊಂದಿಗೆ ಹಲವು ಸಭೆಗಳಲ್ಲಿ



ಭಾಗಿಯಾಗಿದ್ದೇನೆ. ಕಾಂ. ಪಂಧೆ ಅವರ ನೆಗೋಷಿಯೇಟಿಂಗ್ ಚಾಕಚಕ್ಯತೆಯು ಕೇವಲ ತಂತ್ರವಾಗಿರದೇ ಅಪಾರವಾದ ವಿದ್ವತ್ ಹಾಗೂ ಕೈಗಾರಿಕಾ ಸಂಬಂಧಗಳ ಅನುಭವವು ಆಡಳಿತ ವರ್ಗಗಳು ಅವರ ತರ್ಕವನ್ನು ವಿರೋಧಿಸಲು ಅಥವಾ ಉತ್ತರ ಕೊಡಲು ಹೆಣಗಾಡಬೇಕಾದ ಹಲವು ಸಂದರ್ಭಗಳು ಪ್ರಾಕ್ಟಿಕಲ್ ಪಾಠವಾಗಿರುತ್ತಿದ್ದವು. ಬಿಇಎಲ್ ಮಾತುಕತೆ ಅಂದರೇ ರಾಷ್ಟ್ರಮಟ್ಟದ 12 ಘಟಕಗಳ ಸಂಘಗಳ ಪದಾಧಿಕಾರಿಗಳ ಜಂಟಿ ವೇದಿಕೆಯಾಗಿ ನಡೆಯುವಂತಹವು. ಸಿಐಟಿಯುನ ವಿರೋಧಿಗಳು ಕೂಡ ಕಾಂ. ಪಂಧೆ ಅವರ ಸಲಹೆಗಳನ್ನು ಒಪ್ಪದೇ ಅನ್ಯ ಮಾರ್ಗವಿಲ್ಲ ವೆಂದು ಒಪ್ಪುವುದಷ್ಟೇ ಅಲ್ಲ, ಮುಷ್ಕರಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಭಾಗವಹಿಸುವಂತೆ ಆಗಿದ್ದು, ಕಾರ್ಮಿಕರನ್ನು ಒಗ್ಗೂಡಿಸುವ ಸಂದರ್ಭದಲ್ಲಿ ಸಿಐಟಿಯು ವಿರೋಧಿಗಳು ಆಡಳಿತ ವರ್ಗಗಳೊಂದಿಗೆ ಹೊಂದಿಕೊಳ್ಳುವ ಮನೋಭಾವದ ಮುಖಂಡರು ಕೂಡ ಹೋರಾಟದ ಸಾಗರಕ್ಕೆ ಸೇರುವಂತೆ ಮಾಡುವ ಕುಶಲತೆ ಕಾಮ್ರೇಡ್ ಪಂಧೆ ಅವರ ವರ್ಗ ಐಕ್ಯತೆ ಕಟ್ಟುವ ಕಾರ್ಮಿಕ ವರ್ಗ ಸಿದ್ಧಾಂತದ ಸ್ಪಷ್ಟತೆ ಮತ್ತು ಬದ್ಧತೆಗೆ ಪ್ರತೀಕವಾಗಿರುವಂತಹದು. ಆದ್ದರಿಂದಲೇ ದೇಶದ ಏಕಸ್ವಾಮ್ಯ ಬಂಡವಾಳಗಾರರ ನಿಯಂತ್ರಣದಲ್ಲಿರುವ ಹಾಗೂ ಆಯಕಟ್ಟಿನ ಕೈಗಾರಿಕೆಗಳ ಕಾರ್ಮಿಕರನ್ನು ದೇಶಮಟ್ಟದಲ್ಲಿ ಒಗ್ಗೂಡಿಸಿ ವರ್ಗ ಹೋರಾಟವನ್ನು ಮೊನಚು ಹೆಚ್ಚಿಸುವ ದಿಶೆಯಲ್ಲಿ ಸ್ಟೀಲ್ ವರ್ಕರ್ಸ್ ಫೆಡರೇಷನ್ ಹಾಗೂ ಕೋಲ್ ವರ್ಕರ್ಸ್ ಫೆಡರೇಷನ್‌ಗಳ ಸ್ಥಾಪನೆ ಹಾಗೂ ಸಿಪಿಎಸ್‌ಟಿಯು ಸಂಘಟನೆಗಳನ್ನು ರೂಪಿಸಿ ನಿರಂತರ ಕ್ರಿಯಾಶೀಲಗೊಳಿಸಿದ ಕೊಡುಗೆ ಕಾಂ. ಪಂಧೆ ಅವರಿಗೆ ಸೇರಿದ್ದು.



ಬೆಂಗಳೂರಿನಲ್ಲಿ ನಡೆದ ಸಿಐಟಿಯು ಅಖಿಲ ಭಾರತ ಸಮ್ಮೇಳನದ ಸಂದರ್ಭದಲ್ಲಿ ವಿದೇಶಿ ಪ್ರತಿನಿಧಿಗಳೊಂದಿಗೆ

ಒಂದು ಬಾರಿ ಬಿಇಎಲ್ ಗೆಸ್ಟ್ ಹೌಸ್‌ನಲ್ಲಿರುವಾಗ ಒಂದು ಸಂಘದ ಮುಖಂಡರನ್ನು ಭೇಟಿ ಮಾಡಲು ಹೋಗಬೇಕು ಎಂದು ಕಾಂ. ಪಂಧೆ ಅವರು ಕೇಳಿದಾಗ ಅಲ್ಲಿದ್ದ ಸಿಐಟಿಯು ಸಂಗಾತಿ ಪಂಧೆ ಭೇಟಿ ಆಗಬೇಕಾಗಿರುವ ಮುಖಂಡ ಸಿಐಟಿಯು ಬೆಂಬಲಿಗರಲ್ಲ ಎಂದು ಹೇಳಿದಾಗ ಕಾಂ: ಪಂಧೆ ಅವರು ಹೇಳಿದ್ದು ಸಿಐಟಿಯುನವರು ಅಲ್ಲದಿದ್ದರೇನಂತೆ ಅವರು ಕಾರ್ಮಿಕ ವರ್ಗದ ಭಾಗ. ಆದ್ದರಿಂದ ಕ್ರಮೇಣ ಅವರನ್ನು ಸಿಐಟಿಯು ಕಡೆಗೆ ಬರುವಂತೆ ಮಾಡಲು ನಾವು ದುಡಿಯಬೇಕು ಹಾಗೂ ವರ್ಗ ಐಕ್ಯತೆಯ ಆಧಾರದಲ್ಲಿ ಕೆಲಸ ಮಾಡಬೇಕು ಎಂದು ತಿಳಿಸಿಕೊಟ್ಟಿದ್ದು ಅವರ ಸ್ಪಷ್ಟ ಕಣ್ಣೋಟವನ್ನು ಬಿಂಬಿಸುತ್ತದೆ. ಮತ್ತೊಬ್ಬ ಸಂಗಾತಿ ಲೀವ್ ಎನ್‌ಕ್ಯಾಶ್‌ಮೆಂಟ್ (ರಜೆ ನಗದೀಕರಣ) ಹೆಚ್ಚು ಮಾಡುವಂತೆ ಪ್ರಯತ್ನ ಮಾಡಲು ಕೇಳಿದಾಗ ಅವರು ನಿಷ್ಠೂರವಾಗಿ ಹೇಳಿದ್ದು ನಾವು ಆ ಬೇಡಿಕೆಯನ್ನು ಕೇಳಲಾಗುವುದಿಲ್ಲ. ಕಾರ್ಮಿಕರ ಕಲ್ಯಾಣ ಅಂಶಗಳನ್ನು ಪಡೆಯಲು ಹಲವು ತ್ಯಾಗಗಳಿಂದ ಸಾಧಿಸಿರುವಂತಹದ್ದು ಹೀಗಿರುವಾಗ ಸೌಲಭ್ಯಗಳನ್ನು ನಗದೀಕರಿಸಿಕೊಳ್ಳುವುದು ಸರಿಯಲ್ಲವೆಂದು ದೃಡವಾಗಿ ಉತ್ತರಿಸಿದ್ದರು.

ಸಾಮಾನ್ಯ ಕಾರ್ಮಿಕರಿಂದ ವಿಶ್ವಮಟ್ಟದ ನಾಯಕರೊಂದಿಗೆ ಸಂಬಂಧಗಳನ್ನು ಹೊಂದಿದ್ದ ಕಾಂ.ಎಂ.ಕೆ.ಪಂಧೆ ಅವರು ಎಲ್ಲರಿಗೂ ಸರಳವಾಗಿ ಲಭ್ಯವಾಗುತ್ತಿದ್ದರು. ಅವರು ವಿಶ್ವ ಮಾನ್ಯತೆ ಪಡೆದ ಮುಖಂಡರಾಗಿದ್ದರೂ ಸಾಮಾನ್ಯ ಕಾರ್ಮಿಕನಿಗೂ ಹಲವು ಸಂದರ್ಭಗಳಲ್ಲಿ ಅವರೇ ದೂರವಾಣಿ ಮೂಲಕ ಸಂಪರ್ಕಿಸಿ ಮಾತನಾಡುವ ಸೌಜನ್ಯ ಹಾಗೂ ಕಾಳಜಿ ಹೊಂದಿದವರಾಗಿದ್ದರು. ಕರ್ನಾಟಕ ರಾಜ್ಯಕ್ಕೆ ಹಲವು ಬಾರಿ ಬೇಟಿ ನೀಡಿದ ಕಾಂ. ಪಂಧೆ ಅವರು ರಾಜ್ಯದ ಚಳುವಳಿಗೂ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಅವರ ಎಲ್ಲಾ ಭಾಷಣಗಳಲ್ಲಿ ಬಂಡವಾಳಶಾಹಿ ಪದ್ಧತಿಯಲ್ಲಿ ಕಾರ್ಮಿಕರ ಮತ್ತು ಜನ ಸಾಮಾನ್ಯರ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ನೀಡಲಾಗುದಿಲ್ಲವೆಂಬುದನ್ನು, ಹಲವು ಅಂಕಿ ಅಂಶಗಳಿಂದ ಅತ್ಯಂತ ಸರಳವಾದ ತರ್ಕವನ್ನು ಬಳಸಿ ಸಾಮಾನ್ಯ ಕಾರ್ಮಿಕನಿಗೂ ಅರ್ಥವಾಗುವಂತೆ ಬಿಡಿಸಿ ತಿಳಿಹೇಳುತ್ತಿದ್ದರು. ಕಾಂ. ಪಂಧೆ ಅವರ ನಿಧನ ಕರ್ನಾಟಕ ರಾಜ್ಯದ ಚಳುವಳಿಗೂ ತುಂಬಲಾರದ ನಷ್ಟವಾಗಿದೆ.

ಕಾಂ. ಎಂ.ಕೆ.ಪಂಧೆ ಅವರು ಊಟಕ್ಕೆ ಏನು ಬೇಕು ಎಂದರೇ. ಬಹುತೇಕ ಕೇಳುತ್ತಿದ್ದದ್ದು ಮಸಾಲ ದೋಸೆ. ಅವರ ಸರಳ ಜೀವನ ಹಾಗೂ ವಿದ್ವತ್ ಪೂರ್ಣ ವರ್ಗ ಸೈದ್ಧಾಂತಿಕ ಸ್ಪಷ್ಟತೆ ನಾವೆಲ್ಲರೂ ಅಳವಡಿಸಿಕೊಂಡು ಅವರು ಬಿಟ್ಟು ಹೋಗಿರುವ ಕರ್ತವ್ಯವನ್ನು ಪೂರೈಸುವಲ್ಲಿ ದುಡಿಯುವದೊಂದೇ ಕಾಂ. ಮಧುಕರ್ ಕಾಶಿನಾಥ್ ಪಂಧೆ ಅವರಿಗೆ ನಾವು ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಆಗಿದೆ. ◎

ಪ.ಬಂಗಾಲದಲ್ಲಿನ ಹಲ್ಲೆಗಳು

ಪುಟ 8 ರಿಂದ

ನೇತೃತ್ವದ ಎಡರಂಗದಲ್ಲಿ ವಿಶ್ವಾಸ ವ್ಯಕ್ತ ಪಡಿಸಿದರಷ್ಟೇ ಅಲ್ಲ, ಮುಂದೆ ಸತತವಾಗಿ ಏಳು ಚುನಾವಣೆಗಳಲ್ಲಿ ಅಭೂತಪೂರ್ವ ರೀತಿಯಲ್ಲಿ, ದೇಶದ ಬೇರೆಲ್ಲೂ ಕಂಡು ಬರದ ರೀತಿಯಲ್ಲಿ ಈ ವಿಶ್ವಾಸವನ್ನು ಮುಂದುವರೆಸಿದರು.

ಜನತೆಯ ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳ ಮೇಲೆ ದಾಳಿಗಳ ಮೂಲಕ ಅವರ ಮೇಲೆ ಕ್ಲೇಶಗಳನ್ನು, ಸಂಕಟಗಳನ್ನು ಹೇರುವ ಇಂತಹ ಕಹಿ ಅನುಭವಗಳು ಪುನರಾವರ್ತನೆಗೊಳ್ಳಲು ಬಿಡಲಾಗದು. ಕಳೆದ ನಾಲ್ಕು ದಶಕಗಳಲ್ಲಿ ಭಾರತೀಯ ಗಣತಂತ್ರದ ಕ್ರೋಡೀಕರಣ ಮುನ್ನಡೆದಿದೆ, ಭಾರತೀಯ ಜನತೆ ಇಂತಹ ದಾಳಿಗಳನ್ನು ಸಹಿಸುವುದಿಲ್ಲ, ಅವನ್ನು ತೆಪ್ಪಗೆ ಸ್ವೀಕರಿಸಲು ನಿರಾಕರಿಸುತ್ತಾರೆ.

ಬಂಗಾಲದಲ್ಲಿನ ಈ ದಾಳಿಗಳು ಮತ್ತು ಅವಕ್ಕೆ ಪ್ರತಿರೋಧ ಇಡೀ ಭಾರತೀಯ ಜನತೆಗೆ ಎಚ್ಚೆತ್ತುಕೊಳ್ಳಲು ನೀಡುತ್ತಿರುವ ಒಂದು ಕರೆ; ಅವರು ಜಾಗರೂಕರಾಗಿರಬೇಕಾಗಿದೆ, ಇಂತಹ ಪ್ರಜಾಪ್ರಭುತ್ವ-ವಿರೋಧಿ ಸರ್ವಾಧಿಕಾರಶಾಹಿ ಪ್ರವೃತ್ತಿಗಳನ್ನು ಸೋಲಿಸಲು ಒಂದಾಗಿ ಎದ್ದೇಳಬೇಕಾಗಿದೆ.

ಚಾಮುಂಡಿ ಬೆಟ್ಟದ ತಪ್ಪಲು ನುಂಗಿರುವ ರವಿಶಂಕರ ಗುರೂಜಿಗೆ ಯಡಿಯೂರಪ್ಪನ ಶ್ರೀರಕ್ಷೆ

ಭೂಗಳ್ಳ ಚತುರ ಯಡಿಯೂರಪ್ಪನ ಕೂಟ ಮತ್ತು ರಾಜ್ಯದ ಅಧಿಕಾರರೂಢ ಬಿಜೆಪಿ ಸರ್ಕಾರದ ಹಾಲಿ ಮುಖ್ಯಮಂತ್ರಿ-ಮಂತ್ರಿಮಹೋದಯರಿಗೂ ಹಾಗೂ 'ಆರ್ಟ್ ಆಫ್ ಲೀವಿಂಗ್'ನ ಶ್ರೀ ಶ್ರೀ ಶ್ರೀ ರವಿಶಂಕರ ಗುರೂಜಿಗಳಿಗೂ ಅಂಟಿದ ನಂಟಿನ ಮರ್ಮವನು ಬಲ್ಲವರೇ ಧನ್ಯರು.


ರಾಜ್ಯದಲ್ಲಿ ಮೊನ್ನೆ ಯಡಿಯೂರಪ್ಪನವರು ಕುರ್ಚಿ ಬಿಟ್ಟು ಇಳಿದು ಅಲ್ಲಿ ಸದಾನಂದ ಗೌಡರೆಂಬ ಕೈಗೊಂಬೆಯನ್ನು ಪ್ರತಿಷ್ಠಾಪಿಸದೇ ಬೇರೆ ದಾರಿಯಿಲ್ಲವೆಂದಾದ ಮೇಲೆ ಬಿಜೆಪಿಯ ಭಿನ್ನಮತದ ರೂಪದ ಚೌಕಾಸಿ ವ್ಯವಹಾರಗಳು, ವಿವಾದಗಳು ಇತ್ಯರ್ಥವಾಗದೇ ಕಚ್ಚಾಟ, ಕುರ್ಚಿಗಾಗಿ ವರಾತಗಳು ಇನ್ನೂ ಮುಂದುವರೆಯುತ್ತಿರುವಾಗ ಆಹಾ ನಮ್ಮ ಶ್ರೀಶ್ರೀಗಳು ಸ್ವಯಂಪ್ರೇರಿತರಾಗಿ ಭಿನ್ನಮತೀಯ ಗುಂಪುಗಳ ಬೆಸುಗೆಗೆ ಮುಂದಾಗಿದ್ದರಲ್ಲ... ಗುರೂಜಿಯವರ ಈ ಬಿಜೆಪಿ ಪ್ರೇಮದ ಪರಿಯನ್ನು ಮತ್ತು ಯಡಿಯೂರ್ ಪ್ರೇಮದ ರಹಸ್ಯವನ್ನು ಅರಿತುಕೊಳ್ಳಲು ಸಹಾಯಕವಾಗ ಬಹುದಾದ ಈ ಒಂದು 'ಸಣ್ಣ' ಪ್ರಕರಣ ನೋಡಿ.

5 ಎಕರೆ ತಪ್ಪಲು ಗುಳುಂ

ಮೈಸೂರು ನಗರದ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಅಂದರೆ ಕಸಬಾ ಹೋಬಳಿಯ ಅಲನಹಳ್ಳಿಯಲ್ಲಿ ಸರ್ವೆ ನಂ. 41ರಲ್ಲಿನ ಸರ್ಕಾರಿ ಜಮೀನಿನಲ್ಲಿ 100 ಎಕರೆಯಷ್ಟು ಜಾಗವನ್ನು ನೂತನ ಬಡಾವಣೆಗಳ ನಿರ್ಮಾಣಕ್ಕಾಗಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಮೂಡಾ)ವು ವಶಕ್ಕೆ ತೆಗೆದುಕೊಂಡಿತ್ತು. ಆದರೆ ಇನ್ನೂ ಬಡಾವಣೆ ನಿರ್ಮಿಸಿ ಜನರಿಗೆ ಸೈಟು ಹಂಚಿರಲಿಲ್ಲ.

ಜಗತ್ತಿನ ಪಾಮರರು, ಪಾಪಿಗಳಿಗೆ 'ಬದುಕುವ ಕಲೆ' ಬಗೆಗೆ ಉಪದೇಶ ಕೊಡುವ ಶ್ರೀ ಶ್ರೀ ರವಿಶಂಕರರ ಆರ್ಟ್ ಆಫ್ ಲೀವಿಂಗ್ ಸಂಸ್ಥೆಗೆ ಲೋಕ ಕಲ್ಯಾಣ ಕಾರ್ಯಗಳಿಗಾಗಿ ಇಲ್ಲಿನ ಒಂದು 5 ಎಕರೆ ಜಾಗ ಬೇಕೆನಿಸಿತು ನೋಡಿ. ಅಗೋ ಜಾಗ ವಶಕ್ಕೆ ತೆಗೆದುಕೊಂಡು ಒಂದು ಭವ್ಯ ಕಟ್ಟಡವನ್ನು ಎಬ್ಬಿಸಿಯೇ ಬಿಟ್ಟಿತು ಸಂಸ್ಥೆ. ಆಹಾ ಏನು ತ್ವರಿತ ಕಾರ್ಯಾಚರಣೆ!! ಏನು ಚಾಕಚಕ್ಯತೆ, ದಕ್ಷತೆ. ಜಾಗಕ್ಕಾಗಿ ಮನವಿ ಮಾಡುವುದು, ಚರ್ಚೆ, ತೀರ್ಮಾನ, ಮಂಜೂರಾತಿ... ಆದೇಶ, ಶುಲ್ಕ ಪಾವತಿ, ನೋಂದಣಿ, ದಾಖಲೆ, ನಕ್ಷೆ ಸಲ್ಲಿಕೆ, ತಿದ್ದುಪಡಿ, ಅಂಗೀಕಾರ.... ಉಹುಂ ಈ ಯಾವುದೂ ಇಲ್ಲ. ಅವೆಲ್ಲ ನಮ್ಮ ನಿಮ್ಮಂತಹ ಪಾಪಿಗಳು ಹಾಗೂ ಹುಲು ಮಾನವರಿಗೆ. ಜಗದ್ಗುರುಗಳು, ಶ್ರೀ ಶ್ರೀಗಳಿಗಲ್ಲ ಯಾವ ನಿಯಮ. ಅವರು ದೈವಾಂಶ ಸಂಭೂತರು!

ಆದರೆ ಕೆಲವು ಕಿಡಿಗೇಡಿಗಳು ಇರುತ್ತಾರಲ್ಲ!! 2010ರ [illegible] 20 ರಂದು ಆಗ ಜಿಲ್ಲಾಧಿಕಾರಿಗಳಾಗಿದ್ದ ಹರ್ಷಗುಪ್ತರವರು ಪತ್ರ ಬರೆದು ಈ 5 ಎಕರೆ ಜಮಿನು ಅತಿಕ್ರಮಣವನ್ನು ತೆರವುಗೊಳಿಸಿ ಜಾಗವನ್ನು ಮರುವಶಕ್ಕೆ ಪಡೆಯಿರಿ ಅಂತ ನಿರ್ದೇಶಿಸಿ 'ಮೂಡಾ'ಗೆ ಒಂದು ಲಿಖಿತ ಆದೇಶ ನೀಡಿದರು. ಆಮೇಲೆ 'ಮೂಡಾ'ದ ಸೂಚನೆಯಂತೆ ತಹಸೀಲ್ದಾರೆರು 'ಬದುಕಲು ಕಲಿಸುವ ಸಂಸ್ಥೆ'ಗೆ ನೋಟಿಸನ್ನು ನೀಡಿದರು. ತಹಿಸೀಲ್ದಾರರು ನೋಟೀಸ್ ನೀಡಿದ ದಿನದಂದೇ ಜಿಲ್ಲಾಧಿಕಾರಿಗಳು ಮತ್ತು ತಹಸೀಲ್ದಾರರಿಗೆ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಪರವಾಗಿ ಮುಖ್ಯಮಂತ್ರಿಗಳ ಅಪರ (ಪ್ರಿನ್ಸಿಪಲ್) ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್ ಪತ್ರ ಬರೆಯುತ್ತಾರೆ. "ಮುಖ್ಯಮಂತ್ರಿಗಳು ಈ ವಿಚಾರವನ್ನು ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳುವವರೆಗೆ ಕಟ್ಟಡವನ್ನು ತೆರವು ಮಾಡುವ, ಮುಂತಾದ ಯಾವುದೇ ಕ್ರಮವನ್ನು ಕೈಗೊಳ್ಳಬಾರದು" ಅಂತ.



ಆಹಾ ಮುಖ್ಯಮಂತ್ರಿಗಳು ಏನು ಪರಿಶೀಲಿಸುತ್ತಾರೆ ? ಏನು ಕ್ರಮ ವಹಿಸುತ್ತಾರೆ? ನಮ್ಮ ದೇವರ ಸತ್ಯ ನಮಗೆ ಗೊತ್ತಿಲ್ಲದಿರುವುದೇ? ಯಾರಾದರೂ ಊಹಿಸಬಹುದಾದಂತೆ ಯಡಿಯೂರಪ್ಪನವರು ಈ ವಿಚಾರದಲ್ಲಿ ಯಾವ ಕ್ರಮವನ್ನೂ ವಹಿಸಲಿಲ್ಲ. (ಇದು ಮೈಸೂರಿನ ಕತೆಯಾದರೆ ಈ ಬೆಂಗಳೂರಿನ ಕಗ್ಗಲಿಪುರ ಸರ್ವೆ.ನಂ.46 ರಲ್ಲಿರುವ ಉಡಿಪಾಳ್ಯ ಕೆರೆಗೆ ಸೇರಿದ 42.52 ಎಕರೆ ಜಾಗವನ್ನು ಇದೇ ಆರ್ಟ್ ಆಫ್ ಲೀವಿಂಗ್ ಸಂಸ್ಥೆ ಒತ್ತುವರಿ ಮಾಡಿಕೊಂಡು ಅಲ್ಲಿ ಐಷಾರಾಮಿ ಬಂಗಲೆ ನಿರ್ಮಾಣ ಮಾಡಿದೆ ಅಂತ ರಾಜ್ಯ ಹೈಕೋಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ. ಆಹಾ ಎಲ್ಲೆಲ್ಲೂ ಬದುಕುವ ಕಲೆಯೇ !!)

ಮಾನ್ಯ ಯಡಿಯೂರಪ್ಪನವರು ಈಗ ಬೇರೆ ಬೇರೆ ಭ್ರಷ್ಟಾಚಾರದ ಪ್ರಕರಣಗಳಲ್ಲಿ ಶ್ರೀಕೃಷ್ಣ ಜನ್ಮಸ್ಥಾನಕ್ಕೆ ಹೋಗಿ ತಲುಪುವುದಕ್ಕೆ ಬಹಳ ಸಮೀಪವೇ ಇದ್ದ ಹಾಗೆ ಕಾಣುತ್ತದೆ. ಆ ಪುಣ್ಯಸ್ಥಳದಲ್ಲಿ ಅವರು ಸಾಕಷ್ಟು ವಿರಾಮವಾಗಿ-ಆರಾಮವಾಗಿ ಇರುವುದಕ್ಕೆ ಈ ಒಂದು ಪ್ರಕರಣವೂ ಒಂದಷ್ಟು ಕಾಣಿಕೆ ನೀಡಬಹುದು. ಕಾದು ನೋಡೋಣ. ಎಲ್ಲ ದೈವೇಚ್ಛೆ... ಅನ್ನೋ ಹಾಗಿಲ್ಲ. ನಾವು ನೀವು ಎಲ್ಲರೂ ಒತ್ತಡ ಹಾಕಿ ಆ ಪುಣ್ಯದ ಕೆಲಸ ಆಗುವಂತೆ ಮಾಡುವಂತೆ ಮಾಡಬೇಕಾಗಿದೆ. ಏನಂತೀರಿ ?

ನೀರು, ವಿದ್ಯುತ್ ದರ ಏರಿಕೆ ಗುಮ್ಮ

ಜನರ ಮೂಲಭೂತ ಅವಶ್ಯಕತೆಗಳು ದುಬಾರಿಯಾಗುತ್ತಿವೆ..., ಅವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿವೆ...ರಸ್ತೆಗಳೆಲ್ಲಾ ಗುಂಡಿಬಿದ್ದಿವೆ.... ಎಲ್ಲೆಲ್ಲೂ ಭ್ರಷ್ಟಾಚಾರ ತಾಂಡವಾಡುತ್ತಿದೆ.... ಹೌದಲ್ಲ? ಈ ಮಾತುಗಳನ್ನೆಲ್ಲ ಎಲ್ಲೋ ಕೇಳಿದಂತಿದೆಯಲ್ಲ? ಹೌದು ನಿಮ್ಮ ನೆನಪು ಸರಿ. ಹಿಂದೆ ರಾಜ್ಯ ವಿಧಾನ ಸಭಾ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ಪಕ್ಷವು ಕೊಟ್ಟ ಜಾಹಿರಾತಿನಲ್ಲಿದ್ದ ಮಾತುಗಳಿವು. ಮತ್ತು ಈ ಸಮಸ್ಯೆಗಳಿಗೆಲ್ಲಾ ಬಿಜೆಪಿಯೇ ಪರಿಹಾರ ಅಂತಲೂ ಆ ಜಾಹಿರಾತು ಬೊಬ್ಬೆ ಹೊಡೆಯುತ್ತಿತ್ತು. ಈಗ ರಾಜ್ಯದಲ್ಲಿ ಬಿಜೆಪಿದ್ದೇ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ಆಗಿಹೋಗಿದೆ. ಸನ್ಮಾನ್ಯ ಬಿ.ವಿ.ಸದಾನಂದಗೌಡರು ತಮ್ಮ ಪಕ್ಷದ ಹಳೆಯ ಆ ಜಾಹಿರಾತನ್ನು ಈಗ ಮತ್ತೊಮ್ಮೆ ನೋಡಬೇಕು.

ಯಾಕೆ ಅಂತಿರಾ. ಬಿಜೆಪಿ ಸರ್ಕಾರದ ಸಚಿವರುಗಳು ಈಗ ನೀರಿನ ದರ ಏರಿಕೆ, ವಿದ್ಯುತ್ ಧರ ಏರಿಕೆ ಹಾಲಿನ ದರ ಏರಿಕೆ ಅಂತ ಜನರನ್ನು ಬೆದರಿಸುವ ಕೆಲಸಕ್ಕೆ ಕೈ ಹಾಕಿದ್ದಾರೆ. ...ಸಚಿವ ಸುರೇಶ್ ಕುಮಾರ್ ಅವರು ನೀರಿನ ದರ ಏರಿಕೆ ಅನಿವಾರ್ಯ, ಏಕೆಂದರೆ ನೀರನ್ನು ಪಂಪ್ ಮಾಡಲು ಅಗತ್ಯವಾದ ವಿದ್ಯುತ್ ದರ ಏರಿಕೆಯಾಗಿ ಬಿಟ್ಟಿದೆ ಎಂದಿದ್ದಾರೆ. ವಿದ್ಯುತ್ ದರವನ್ನು ಏರಿಸಿದ್ದು ಇದೇ ಬಿಜೆಪಿ ಸರ್ಕಾರ. ಈಗ ಮತ್ತೆ ವಿದ್ಯುತ್ ದರವನ್ನೂ ಏರಿಸಲಾಗುವುದು ಎಂದು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಒಂದು ಬಾಂಬ್ ಹಾಕಿದೆ. (ದರ ಏರಿಸುವುದು ಆಯೋಗ ಅಂದರೂ ಸರ್ಕಾರದ ತೀರ್ಮಾನ, ನಿರ್ದೇಶನ ಇಲ್ಲದೇ ಆಯೋಗವೇ ಏನು ಈ ಕ್ರಮಕ್ಕೆ ಕೈ ಹಾಕಲಾಗದು) ಇನ್ನು ಭ್ರಷ್ಟಾಚಾರದ ಕುರಿತು ಮಾತನಾವುದೇ ಬೇಡ. ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಎಂದ ಬಿಜೆಪಿಯೇ ಈಗ ಈ ರಾಜ್ಯಕ್ಕೆ ಅಂಟಿಕೊಂಡಿರುವ [illegible] ದೇಶದಿಂದ, ಕನಿಷ್ಠ ಈ ರಾಜ್ಯದಿಂದ ಬಿಜೆಪಿ ಪಕ್ಷವನ್ನು ತೊಲಗಿಸಿದರೆ ಇಲ್ಲಿನ ಸಮಸ್ಯೆಗೆ ಪರಿಹಾರಕ್ಕೆ ಇದೇ ಒಂದು ದೊಡ್ಡ ಕೊಡುಗೆಯಾಗಲಿದೆ.



ಆರ್.ರಾಮಕೃಷ್ಣ

ಬಿಜೆಪಿ ದರ್ಬಾರ್

ಹೈಕೋರ್ಟ್ ಎಂಬ ಹೈಕೋರ್ಟ್‌ಗೆ ಬಿಜೆಪಿ ಸರ್ಕಾರದ ಪಂಗನಾಮ

'ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ'ದಲ್ಲಿ ತಹಸೀಲ್ದಾರ್ ಡಿ.ಪುಟ್ಟಸ್ವಾಮಿ ಅಂತ ಒಬ್ಬರು ಇದ್ದಾರೆ. ಅವರನ್ನು ಕಂಡರೆ ನಮ್ಮ ಬಿಜೆಪಿ ಸರ್ಕಾರಕ್ಕೆ ಎಂಥ ಪ್ರೀತಿ ನೋಡಿ. ಯಾವುದೋ ಪ್ರಕರಣವೊಂದರಲ್ಲಿ ಹೈಕೋರ್ಟ್‌ಗೆ ಸುಳ್ಳು ಮಾಹಿತಿ ಕೊಟ್ಟ ಕಾರಣಕ್ಕಾಗಿ ಅವರನ್ನು ಸೇವೆಯಿಂದ ವಜಾ ಮಾಡುವಂತೆ ಹೈಕೋರ್ಟ್ ಆದೇಶ ನೀಡಿತು. ಅಷ್ಟು ಸುಲಭವಾಗಿ ಕೋರ್ಟ್ ಆದೇಶ ಜಾರಿ ಮಾಡಲು ಸಾಧ್ಯವೇ? ಅದೂ ಅತ್ಯಂತ ಆಯಕಟ್ಟಿನ ಜಾಗವಾದ ಸಾರ್ವಜನಿಕ ಜಮೀನುಗಳ ನಿಗಮದಲ್ಲಿ ತಹಸೀಲ್ದಾರ್ ಆಗಿರುವವ ನಿಯತ್ತಿನ ಮನುಷ್ಯನನ್ನ(ಯಾರಿಗೆ ಅಂತ ಕೇಳಬೇಡಿ) ಅದೂ ಕೂಡ ಈ ಬಿಜೆಪಿ ದರ್ಬಾರ್‌ನಲ್ಲಿ. ಪುಟ್ಟಸ್ವಾಮಿ ಕೋರ್ಟ್ ಆದೇಶ ಜಾರಿ ಮಾಡಬೇಡಿ ಅಂತ ಮನವಿ ಮಾಡಿಕೊಂಡುಬಿಟ್ಟರಂತೆ. ಸರ್ಕಾರ ಅದನ್ನು ಒಪ್ಪಿಕೊಂಡು ಅವರನ್ನು ಅದೇ ಜಾಗದಲ್ಲಿ ಮುಂದುವರಿಸಿತಂತೆ. ಆಹಾ !! ಹೈಕೋರ್ಟ್‌ನಂಥ ಹೈಕೋರ್ಟ್‌ಗೆ ಬಿಜೆಪಿ ಸರ್ಕಾರದ ಪಂಗನಾಮ. ಇತ್ತೀಚೆಗೆ ಈ ಸಂಬಂಧ ಹೈಕೋರ್ಟ್ ಕಿಡಿಕಾರಿ ಅಧಿಕಾರಿಯ ಅಮಾನತಿ ಆದೇಶದ ಜಾರಿಗೆ ಆದೇಶಿಸಿದೆ.

11,878 ಕೋಟಿ ಹಣ ಬಳಕೆಯೇ ಆಗಿಲ್ಲ

ಗಣಿ ಲೂಟಿ, ಡೀನೋಟಿಫಿಕೇಷನ್ ಮಾಡಿ ರೈತರ, ಬಡವರ ಭೂಮಿ ಲಪಟಾಯಿಸುವುದು. ಭೂಗಳ್ಳ ಸಚಿವರು. ಲಫಂಗ ಶಾಸಕರು. ಕ್ರಿಮಿನಲ್‌ಗಳು. ಕಪ್ಪು ಹಣದ ಸ್ವಾಮೀಜಿಗಳು ಹಾಗೂ ಅಧಿಕಾರಿಗಳ ರಕ್ಷಣೆಯ ಕಸರತ್ತುಗಳು. ಕುರ್ಚಿ ಎಳೆದಾಟ. ಬಡಿದಾಟಗಳು. ಭಿನ್ನಮತ. ಕತ್ತಿ ಮಸೆತ. ಪಂಚತಾರಾ ಹೋಟೆಲು-ರೆಸಾರ್ಟ್ ತಂಗುವ ರಾಜಕಾರಣ, ದೆಹಲಿ-ಬೆಂಗಳೂರುಗಳ [illegible] ಹೆಲಿಕಾಪ್ಟರ್‌ಗಳಲ್ಲಿ ಹಾರಾಟಗಳು ಮುಂತಾದ ಬಿಜೆಪಿ ದರ್ಬಾರ್‌ಗಳ [illegible] ಈ ಸಮಾಚಾರಗಳು [illegible]

ಕಾರ್ಮಿಕ ವರ್ಗದ ಅಸಾಮಾನ್ಯ ನೇತಾರ

ಪುಟ 9 ರಿಂದ

ಕೊಟ್ನಿಸ್ ಜಪಾನಿನ ಹಿಡತದಲ್ಲಿದ್ದ ಚೀನಾಗೆ ಕಳುಹಿಸಿದ ವೈದ್ಯಕೀಯ ತಂಡದ ಭಾಗಿಯಾಗಿದ್ದರು. ಶೋಲಾಪುರದ ಡಾ॥ ದ್ವಾರ್ಕನಾಥ್ ಕೊಟ್ನಿಸ್ ಭಾರತ ಮತ್ತು ಚೀನ ದೇಶದ ಜನರಲ್ಲಿ ಸೌಹಾರ್ದತೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದರು ಮತ್ತು ಚೀನಾ ವಿಮೋಚನಾ ಸಮರದಲ್ಲಿ ಅಸುನೀಗಿದರು. ಕೊಟ್ನಿಸ್ ರವರ ಪಾರಂಪರಿಕ ಮನೆಯನ್ನು, ಅವರ ನೆನಪಿನಾಲಯವಾಗಿ ಪಾಂಧೆ ಬದಲಾಯಿಸಿ ಸ್ವಾರ್ಥ್ಯತೆ ಹೆಚ್ಚಾಗಿರುವ ಪರಿಣಾಮವನ್ನು ಕಂಡರು.

ಅವಿಭಜಿತ ಸಿಪಿಐ ಪಕ್ಷದೊಳಗೆ ಪರಿಷ್ಕರಣವಾದದ ವಿರುದ್ಧ ಹೋರಾಟ ಬೆಳೆದು ಬಂದಾಗ ಪಾಂಧೆರವರು CPI(M) ರಚಿಸಲು ಹೊರಟಿದ್ದ ನಾಯಕರೊಂದಿಗೆ ಸೇರಿದರು. ಪಕ್ಷದ ಕೇಂದ್ರವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಪಾಂಧೆರವರ ಸಹಾಯ ಕೋರಲಾಯಿತು. 1964ರಿಂದ 1969ರವರೆಗೆ ಪಕ್ಷದ ಕಛೇರಿಯನ್ನು ನೋಡಿಕೊಂಡರು. ಕೆಲವೇ ಸಂಸತ್ ಸದಸ್ಯರಿದ್ದರೂ ಬಹಳ ಗಾಢವಾದ ಪರಿಣಾಮವನ್ನು ಮಾಡಿದ ಕಾಲವದು. ತಮ್ಮ ಅನುಭವ ಹಾಗು ವಿಶಾಲವಾದ ಮಾಹಿತಿಗಳನ್ನು ಕಛೇರಿಯಿಂದ ಒದಗಿಸುತಿದ್ದರು.

ಕಾಮ್ರೇಡ್ ಪಾಂಧೆ ಜಲಂಧರ್ ನಲ್ಲಿ ನಡೆದ 10ನೇ ಸಮಾವೇಶದಲ್ಲಿ ಕೇಂದ್ರ ಮಂಡಳಿಯ ಸದಸ್ಯರಾದರು. 1998ರಲ್ಲಿ ನಡೆದ ಕೊಲ್ಕಾತ್ತಾದ 16ನೇ ಸಮಾವೇಶದಲ್ಲಿ ಪೊಲಿಟ್ ಬ್ಯುರೊ ಸದಸ್ಯರಾದರು. ಪಕ್ಷದೊಳಗಿನ ಚರ್ಚೆಗಳಿಗೆ ಅವರು ಒಂದು ಖಚಿತವಾದ ವರ್ಗದೃಷ್ಟಿಕೋನವನ್ನು ಒದಗಿಸಿದರು. ಸಿಪಿಐ(ಎಂ) ಪಕ್ಷದ ಕಾರ್ಯಕ್ರಮವನ್ನು ಸಮಕಾಲೀನಗೊಳಿಸುವ ಪಾಲಿಟ್ ಬ್ಯೂರೋದ ಸಭೆಗಳಲ್ಲಿ ಅವರು ಪಾಲ್ಗೊಂಡರು ಮತ್ತು ಪಕ್ಷವು ಯಾವುದೇ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವುದಿರಲಿ ಅವರು ಅದು ಯಾವುದೇ ಪಾಲಿಟ್ ಬ್ಯೂರೋ ಅಥವಾ ಕೇಂದ್ರ ಸಮಿತಿಯ ಸಭೆಯ ಚರ್ಚೆಯೇ ಆಗಿರಲಿ ವರ್ಗ ನಿಲುಮೆಯು ಯಾವುದೇ ರೀತಿಯಲ್ಲಿ ದುರ್ಬಲಗೊಳ್ಳದಂತೆ ಸದಾ ಎಚ್ಚರ ವಹಿಸುತ್ತಿದ್ದರು. ಪೊಲಿಟ್ ಬ್ಯುರೊ ನಡೆಸುತ್ತಿದ್ದ ಪಕ್ಷದ ಸಂವಿಧಾನ ನವೀಕರಿಸುವ ಸಭೆಗಳಲ್ಲಿ ವರ್ಗಮಯ ವೈಚಾರಿಕತೆಯನ್ನು ಅನುಸರಿಸಿ ರಚನೆಗೊಳ್ಳುವಂತೆ ನೋಡಿಕೊಂಡರು. ಬಹಳ ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ಎಲ್ಲರ ಮುಂದೆ ಮಂಡಿಸುವರು. ಹಾಗೆಯೆ ತಮ್ಮ ಬಗ್ಗೆಯ ವಿಮರ್ಶೆಯನ್ನು ತಾಳ್ಮೆಯಿಂದ ಕೇಳುತ್ತಿದ್ದರು. ತಮ್ಮ ಅನಿಸಿಕೆಗಳನ್ನು, ಮತ್ತು ವಿಚಾರಗಳನ್ನು ಸ್ವಲ್ಪವೂ ಒಪ್ಪದ ಜನರಿಗೆ ಯಾವುದೇ ಕೆಟ್ಟದನ್ನು ಬಯಸುವವರಲ್ಲ.

ಪಾಂಧೆ ಪ್ರೇಮಿಳಾರನ್ನು 1957ರಲ್ಲಿ ಮದುವೆಯಾದರು. 5 ದಶಕಗಳಿಗೆ ಅವರು ಹೆಚ್ಚಾಗಿ ಜೋಡಿಯಾಗಿ ಪಕ್ಷಕಾಗಿ ಶ್ರಮಿಸಿದ್ದಾರೆ. ಅವರು ಸರಳವಾದ ಜೀವನವನ್ನು ಕಳೆದರು. ತಮ್ಮ ಜೊತೆ ಕೆಲಸದಲ್ಲಿ ತೊಡಗಿದ್ದ ಕಾಮ್ರೇಡ್ ಗಳೊಂದಿಗೆ ಸೌಹಾರ್ದತೆಯಿಯಿಂದ ನಡೆದುಕೊಳ್ಳುತ್ತಿದ್ದರು. ಎಲ್ಲಾ ವರ್ಗದ ಕಾರ್ಮಿಕರೂ ಪಾಂಧೆರವರನ್ನು ಭೇಟಿ ಮಾಡಿ ತಮ್ಮ ಸಮಸ್ಯೆಗಳನ್ನು ಹೇಳಿ ಚರ್ಚಿಸುವ ಸನ್ನಿವೇಶವನ್ನು ಕಲ್ಪಿಸಿದ್ದರು. ಕಾರ್ಮಿಕರೊಂದಿಗೆಯೆ ಸಮಯ ಕಳೆದು, ಅವರೊಂದಿಗೆ ಕೆಲಸ ಮಾಡುತ್ತಿದ್ದರು. ಆದುದರಿಂದ ಹೆಚ್ಚಾಗಿ ಓಡಾಡುತ್ತಿದ್ದರು. ಅವರಿಗೆ 80 ವಯಸ್ಸಾದರೂ, ತಮ್ಮ ಚಟುವಟಿಕೆಗಳಲ್ಲಿ ಯಾವುದೇ ಕುಂದು ಇರಲಿಲ್ಲ .

ಕಳೆದ ವರ್ಷ ಪಾಂಧೆರವರಿಗೆ ಶ್ವಾಸಕೋಶದ ಕ್ಯಾನ್ಸರ್ ಇದೆ ಎಂದು ಗೊತ್ತುಪಡಿಸಿದಾಗಲೂ, ಅನ್ಯರೆಲ್ಲರೂ ಅದರ ಬಗ್ಗೆ ಚಿಂತಿತವಾಗಿದ್ದರೂ ತಮ್ಮ ಕೆಲಸ, ಓಡಾಟಗಳನ್ನು ಕಡಿಮೆಗೊಳಿಸಲಿಲ್ಲ.

ಪಾಂಧೆರವರು ಕಾರ್ಮಿಕ ವರ್ಗದ ಒಬ್ಬ ಅಸಮಾನ್ಯ ನಾಯಕ. 68 ವರ್ಷಗಳ ಕಾಲ ಸಂಘಟನೆಗಳು ಮತ್ತು ಪಕ್ಷಕ್ಕಾಗಿ ಅವರು ಮಾಡಿರುವ ಸೇವೆ ಅತ್ಯಮೂಲ್ಯ ತಮ್ಮ ಜೀವನದ ಕೊನೆಯಲ್ಲಿ, ತಮ್ಮ ಕಾರ್ಯಗಳಿಂದ ಸಂತೃಪ್ತರಾಗಿರಬಹುದು. ಪಾಂಧೆರವರ ಜೀವನ ಎಲ್ಲಾ ಕಮ್ಯುನಿಸ್ಟ್‌ಗಳು ಮತ್ತು ಕಾರ್ಮಿಕ ವರ್ಗದ ಏಳಿಗಾಗಿ ಶ್ರಮಿಸುವ ಎಲ್ಲರಿಗೂ ಒಂದು ಸ್ಫೂರ್ತಿಯೇ ಹೌದು.

▲

ಗಣಿಲೂಟಿಯ 'ಸುವರ್ಣ ಯುಗ'

ಪುಟ 5 ರಿಂದ

ಏಟ್ರಿಯಾ ಹೋಟೆಲ್‌ನ ಬಿಲ್ ಬಾಬ್ತು 19,000 ರೂಪಾಯಿಗಳನ್ನು ಮಧುಶ್ರೀ ಎಂಟರ್‌ಪ್ರೈಸಸ್ ಪಾವತಿ ಮಾಡಿರುವುದು ಸ್ಪಷ್ಟವಾಗಿದೆ. ಈ ಸ್ನೇಹಿತರು ಎಂದರೆ ಯಾರು ಏನು ಎಂಬ ವಿವರಗಳು ಹೊರಬರಬೇಕಾದರೆ ಒಟ್ಟು ಹಗರಣದ ಬಗೆಗೆ ಸರಿಯಾದ ತನಿಖೆ ನಡೆಯಬೇಕಿದೆ.

ಕರ್ನಾಟಕದ ಗಣಿ ಹಗರಣಗಳ ಕರ್ಮಕಾಂಡಗಳನ್ನು ಲೋಕಾಯುಕ್ತರು ಅಗೆದು ತೆಗೆಯುತ್ತಾ ಹೊರಟಂತೆ ಈ ನೈಸರ್ಗಿಕ ಸಂಪತ್ತಿನ ಲೂಟಿಯ ವಿರಾಟ್ ಸ್ವರೂಪದ ದರ್ಶನವಾಗುತ್ತಾ ಹೊರಟಿದೆ. ಈ ಬೃಹತ್ ದರೋಡೆಯಲ್ಲಿ ಇಡೀ ಸರ್ಕಾರದ ಆಡಳಿತವನ್ನೇ ನಿಷ್ಕ್ರಿಯಗೊಳಿಸುವ ವ್ಯವಸ್ಥಿತ ಜಾಲವನ್ನು ಈ ರೆಡ್ಡಿ ಸಹೋದರರೆಂಬ ದಗಾಕೋರರು ಮತ್ತವರ 'ಸಹೋದ್ಯೋಗಿ'ಗಳು ಹೆಣೆದಿರುವುದು ಈಗ ಬಯಲಾಗಿದೆ. ಇದಕ್ಕೆ ಅವರು ಬಳಸಿರುವ ಒಂದು ಮಾರ್ಗ ಲಂಚ. ಕೆಲವು ಲೋಕಾಯುಕ್ತ ಪೋಲಿಸ್ ಅಧಿಕಾರಿಗಳು ಸೇರಿದಂತೆ ಪೋಲಿಸ್ ಅಧಿಕಾರಿಗಳು, ಸರ್ಕಾರದ ವಿವಿಧ ಇಲಾಖೆಗಳ ತಳ ಹಂತದ ಅಧಿಕಾರಿಗಳು ಉನ್ನತ ಹಂತದ ಅಧಿಕಾರಿಗಳು ಎಲ್ಲರ ಬಾಯಿಗಳಿಗೆ ಲಂಚವೆಂಬ ಅಮೃತವನ್ನು ಸುರಿದಿದ್ದಾರೆ.

ರಾಜ್ಯ ಬಿಜೆಪಿ ಸರ್ಕಾರದ ಕೃಪಾಕಟಾಕ್ಷದಿಂದ ಬಳ್ಳಾರಿ ಜಿಲ್ಲೆಯಲ್ಲಿ ಭಾರತತದಸಂವಿಧಾನ, ಕಾನೂನು, ಭಾರತೀಯ ದಂಡ ಸಂಹಿತೆಯ ನಿಯಮಾವಳಿ ಯಾವುವೂ ದಾರಿಯಲ್ಲಿಲ್ಲ. ಅಲ್ಲಿ ನಾಗರೀಕ ಸರ್ಕಾರದ ಆಡಳಿತ ಕಾನೂನಿನ ಆಡಳಿತ ಎಂಬುದು ಇಲ್ಲವೇ ಇಲ್ಲ. ಗಣಿಲೂಟಿಕೋರ ಅಂತರಂಗದ ಆಸೆ, ಆಕಾಂಕ್ಷೆ, ಇಂಗಿತಗಳೇ ಕಾನೂನು ಅವರ ಕಣ್ಸನ್ನೆಗಳೇ ಆದೇಶ ಎಂಬಂಥಹ ಸನ್ನಿವೇಶ ಸೃಷ್ಟಿಯಾಗಿದೆ ಎಂಬ ಘೋರ ವಾಸ್ತವವು ಸಿಂಗ್ ತನಿಖಾ ವರದಿಯ ಮೂಲಕ ಬಯಲಾಗಿದೆ. ಈ ಸಂಬಂಧದ ವಿವರಗಳನ್ನು ಕುರಿತು ಒಂದೇ ಸಂಚಿಕೆಯಲ್ಲಿ ಬರೆದು ಮುಗಿಸಲಾಗದು. ಕಂತು ಕಂತುಗಳಲ್ಲಿ ಪ್ರವಹಿಸಬೇಕಾದ ವಿವರ ಅದು.

ಬಿಜೆಪಿ ದರ್ಬಾರ್

ಪುಟ 11 ರಿಂದ

ಪಾಪ ರಾಜ್ಯದಲ್ಲಿ ಭಾರಿ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿರುವ ಬಿಜೆಪಿ ಸರ್ಕಾರದ ಸಚಿವರುಗಳಿಗೆ ತಮ್ಮ ತಮ್ಮ ಇಲಾಖೆಯ ಆಗು ಹೋಗುಗಳ ಬಗೆಗೆ ಹೇಗಾದರೂ ತಿಳಿಯಬೇಕು. ಇಲ್ಲಿ ನೋಡಿ ಏನಾಗಿದೆ. ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಳೆದ ವರ್ಷದ ಅವಧಿಯಲ್ಲಿ ರಾಜ್ಯದ ವಿವಿಧ ಇಲಾಖೆಗಳಲ್ಲಿ ಒಟ್ಟಾರೆ 11,878 ಕೋಟಿ ರೂಪಾಯಿಗಳಷ್ಟು ಹಣ ಬಳಕೆಯಾಗದೆ ವಾಪಸ್ಸು ಹೋಗಿದೆ. ಕೃಷಿ, ತೋಟಗಾರಿಕೆ, ಲೋಕೋಪಯೋಗಿ, ನೀರಾವರಿ, ನಗರಾಭಿವೃದ್ಧಿ, ಹಣಕಾಸು ಇತ್ಯಾದಿ ಇಲಾಖೆಗಳ ಮೂಲಕ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಒಂದಷ್ಟು ನೆಮ್ಮದಿ ನೀಡಬಹುದಾಗಿದ್ದ ಹಣ ಬಳಕೆಯಾಗದೇ ಹಾಗೇ ಉಳಿದು ಹೋಗಿದೆ. ಎಂದರೆ ಯಡಿಯೂರಪ್ಪನವರ ಸರ್ಕಾರ ಎಷ್ಟು ಚೆನ್ನಾಗಿ ಕೆಲಸ ಮಾಡಿದೆ ಎಂಬುದಕ್ಕೆ ಇದೇ ಸಾಕ್ಷಿ. ಕೃಷಿ ಇಲಾಖೆಯ ವಿವಿಧ ಅಧಿಕಾರಿಗಳನ್ನು ಪದೇ ಪದೇ ವರ್ಗಾಯಿಸಿದ ಕಾರಣಕ್ಕಾಗಿಯೇ ಆ ಇಲಾಖೆಯಲ್ಲಿನ ಸು. 1,311 ಕೋಟಿ ರೂಪಾಯಿಗಳಷ್ಟು ಹಣ ಬಳಕೆಯಾಗದೆ ಉಳಿದು ಹೋಗಿದೆ ಎಂದರೆ ಪರಿಸ್ಥಿತಿ ಎಷ್ಟು ಭೀಕರವಾಗಿದೆ ಅಂತ ಯಾರಾದರೂ ಅಂದಾಜು ಮಾಡಬಹುದು.

ಇವೆಲ್ಲಾ ಯಾರೋ ವಿರೋಧಿಗಳು ಹೇಳುವ ಅಂತೆ ಕಂತೆಗಳಲ್ಲ. ಮಹಾಲೇಖಪಾಲರ ಇತ್ತೀಚಿನ ವರದಿ ಈ ಎಲ್ಲ ಅಂಶಗಳನ್ನು ಬಯಲು ಮಾಡಿದೆ.

ನಮ್ಮ ಸದಾನಂದಗೌಡರು ನಾನು ಯಡಿಯೂರಪ್ಪನವರು ಹಾಕಿದ ದಾರಿಯಲ್ಲೇ ಹೋಗುತ್ತೇನೆ ಎನ್ನುತ್ತಾರೆ. ಹಾಗೂ ಅದೇ ದಾರಿಯಲ್ಲೇ ಹೋಗುತ್ತಿದ್ದಾರೆ. ಹಾಗಾಗಿ ಈ ಇವರಿಗೆ ಜನ ಚಾಟಿ ಏಟು ನೀಡದೇ ಹಾಗೇ ಬಿಟ್ಟರೆ ಮುಂದಿನ ವರ್ಷದ ಲೇಖಪಾಲರ ವರದಿಯಲ್ಲಿ ಉಳಿಕೆ ಮೊತ್ತ ಇನ್ನಷ್ಟು ಹೆಚ್ಚಬಹುದೇನೋ ಅಲ್ಲವೇ ?

★

ಪಾಲಿಕೆ ಬಜೆಟ್: ವಿರೋಧಿಗಳ ವಾರ್ಡ್‌ಗಳಿಗೆ ಹಣಕಾಸು ಖೋತ

ಹೊಸ ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ)ಯು ಬಜೆಟ್ ಮಂಡಿಸಿದೆ. ಈ ಬಿಬಿಎಂಪಿಯಲ್ಲಿ ಅಧಿಕಾರದಲ್ಲಿರುವುದು ಬಿಜೆಪಿ. ಬಿಜೆಪಿ ಶಾಸಕರಿರುವ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಾರ್ಡ್‌ಗಳ ಅಭಿವೃದ್ಧಿ ಯೋಜನೆಗಳಿಗೆ ತಲಾ ಸು.ಒಂದು ನೂರು ಕೋಟಿಗಳವರೆಗೆ ಮೊತ್ತವನ್ನು ಹಂಚಿಕೆ ಮಾಡಿದ್ದರೆ ವಿರೋಧ ಪಕ್ಷಗಳಾದ ಕಾಂಗ್ರೇಸ್, ಜೆಡಿ(ಎಸ್)ಶಾಸಕರಿರುವ ಕ್ಷೇತ್ರವ್ಯಾಪಿಯ ವಾರ್ಡ್‌ಗಳಿಗೆ ಬರೀ 5 ರಿಂದ 20 ಕೋಟಿಗಳವರೆಗೆ ಮೊತ್ತ ಹಂಚಿಕೆಯಾಗಿದೆ.

ಹಿಂದೆ ಆಪರೇಷನ್ ಕಮಲದ ಪರಿಣಾಮವಾಗಿ ಬಂದ ಉಪ ಚುನಾವಣೆಯ ಪ್ರಚಾರದಲ್ಲಿ ಯಡಿಯೂರಪ್ಪನವರು 'ಆಡಳಿತ ಪಕ್ಷದ ಶಾಸಕರಿದ್ದಲ್ಲಿ ಮಾತ್ರ ಕ್ಷೇತ್ರದ ಅಭಿವೃದ್ಧಿಗೆ ಅನುಕೂಲ. ಇಲ್ಲವಾದರೆ ಅಭಿವೃದ್ಧಿಗೆ ಅನಾನುಕೂಲ' ಎಂಬ ಎನ್ನುವ ಪ್ರಜಾಪ್ರಭುತ್ವ ವಿರೋಧಿ ಬೆದರಿಕೆ ಮತ್ತು ಬ್ಲಾಕ್ ಮೇಲ್ ರಾಜಕಾರಣದ ಮಾತನ್ನಾಡಿದ್ದುದು ಜನರಿಗೆ ಚೆನ್ನಾಗಿ ನೆನೆಪಿದೆ. ಆಹಾ ಏನು ರಾಜ ಧರ್ಮವಪ್ಪ ಬಿಜೆಪಿಯದು !!

▲

ಕನ್ನಡ ವಾರಪತ್ರಿಕೆ


"ಗೆಲುವು ತನ್ನದು, ಸೋಲು ಪರರದ್ದು"- ವಿಫಲವಾಗುತ್ತಿರುವ ಕಾಂಗ್ರೆಸ್ ಕಾರ್ಯತಂತ್ರ

ಯುಪಿಎ ನೇತೃತ್ವ ವಹಿಸುತ್ತಿರುವ ಕಾಂಗ್ರೆಸ್ '2004ರಿಂದ ಅನುಸರಿಸಿರುವ ಕಾರ್ಯತಂತ್ರವೆಂದರೆ, ಗೆಲುವುಗಳು ನಮ್ಮವು, ವಿಫಲತೆಗಳು ಇನ್ಯಾರದ್ದೋ ಎಂಬುದು. ಇತ್ತೀಚಿನ ವರೆಗೆ ಅದು ಕೆಲಸ ಮಾಡಿತ್ತು"- ಹೀಗೆಂದಿರುವವರು ಯುಪಿಎ-1 ಅಧಿಕಾರಾವಧಿಯ ಬಹುಪಾಲು ಅವಧಿಯಲ್ಲಿ (2004ರಿಂದ 2008) ಪ್ರಧಾನ ಮಂತ್ರಿಗಳ ಮಾಧ್ಯಮ ಸಲಹಾಗಾರರಾಗಿದ್ದ ಸಂಜಯ್ ಬರು; ಈಗ ಅವರು ಬಿಸಿನೆಸ್ ಸ್ಟಾಂಡರ್ಡ್ ಪತ್ರಿಕೆಯ ಸಂಪಾದಕರಾಗಿದ್ದಾರೆ.

ಅಣ್ಣಾ ಹಝಾರೆಯವರ ಆಂದೋಲನವನ್ನು ಯುಪಿಎ-2 ಸರಕಾರ ನಿರ್ವಹಿಸಿದ ರೀತಿ ಹಲವು ವಿಶ್ಲೇಷಕರ ಗಮನ ಸೆಳೆದಿದೆ. ಮುಂದಾಳುತ್ವದ ಅಗತ್ಯ ಅತ್ಯಂತ ತುರ್ತಿನದಾಗಿದ್ದಾಗ ಕಾಂಗ್ರೆಸಿನ ಉನ್ನತ ಮುಖಂಡರು ಅದಕ್ಕೆ ಕೈಕೊಟ್ಟಿದ್ದಾರೆ, ಇದರಿಂದ ಯುಪಿಎ ಅಸ್ತಿತ್ವಕ್ಕೇ ಧಕ್ಕೆ ಬಂದಿದೆ ಎಂದು ಇನ್ನೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ.

ಇತ್ತೀಚೆಗೆ ಭಾರತದಲ್ಲಿ ಉದಾರೀಕರಣದ 'ಹರಿಕಾರ' ಡಾ.ಮನಮೋಹನ ಸಿಂಗ್ ಮತ್ತು ಅವರ ಆಪ್ತ ಬಳಗದ ಚಿದಂಬರಂ, ಸಿಬಾಲ್, ಖುರ್ಶಿದ್ ಇತ್ಯಾದಿ ವಕೀಲರುಗಳಂತೂ ಉದಾರೀಕರಣದ ಎರಡು 'ಅಮೋಘ' ದಶಕಗಳ ಸಂಭ್ರಮಾಚರಣೆಯ ಸಂದರ್ಭದಲ್ಲೇ ನಗೆಪಾಟಲಾಗಿರುವುದು ಕೇವಲ ಕಾಕತಾಳೀಯವಲ್ಲ ಎಂದು ಮತ್ತೆ ಕೆಲವು ವಿಶ್ಲೇಷಕರು ಹೇಳುತ್ತಿದ್ದಾರೆ. ಯುಪಿಎ-1 ರ ಅವಧಿಯಲ್ಲಿ ಇದ್ದ ಎಡಪಕ್ಷಗಳ ಸಲಹೆಗಳು ಈಗ ಇಲ್ಲದಿರುವುದು ಮತ್ತು ದೂರದ ಅಮೆರಿಕಾದಲ್ಲಿ ಆಸ್ಪತ್ರೆಯಲ್ಲಿರುವ ಸೋನಿಯಾ ಗಾಂಧಿಯವರ ಗೈರು ಹಾಜರಿಯನ್ನು ಇವರು ಪ್ರಸ್ತಾಪಿಸುತ್ತಾರೆ. ಲೋಕಸಭಾ ಅಧಿವೇಶನದ 'ಶೂನ್ಯ ಗಂಟೆ'ಯಲ್ಲಿ ವಿಶೇಷ ಅವಕಾಶ ಪಡೆದು ಮಾತಾಡಿ ಲೋಕಪಾಲ ಒಂದು ಸಂವಿಧಾನಿಕ ವ್ಯವಸ್ಥೆಯಾಗಲಿ ಎಂಬ 'ಅಮೋಘ' ಪ್ರಸ್ತಾವ ಮುಂದಿಟ್ಟ, ನಂತರ ಇದು ಯುಪಿಎ-2ರ ಇನ್ನೊಂದು ವಿಳಂಬ ತಂತ್ರ ಎಂಬ ಟೀಕೆಯನ್ನು ಎದುರಿಸಬೇಕಾಗಿ ಬಂದ ಯುಪಿಎ ಮತ್ತು ಕಾಂಗ್ರೆಸ್ 'ಯುವರಾಜ' ಕೂಡ ಅಣ್ಣಾ ಹಝಾರೆಯವರ ಮೂರು ಅಂಶಗಳ ಬಗ್ಗೆ ಸಂಸತ್ತು ಚರ್ಚೆ ನಡೆಸಿ ಉಪವಾಸ ಸತ್ಯಾಗ್ರಹದ ಅಂತ್ಯಕ್ಕೆ ಕಾರಣವಾದ ನಿರ್ಣಯದ ಮೇಲೆ ಚರ್ಚೆ ನಡೆಯುವ ವಿಶಿಷ್ಟ ಸಂದರ್ಭದಲ್ಲಿ ನಾಪತ್ತೆಯಾಗಿದ್ದರು ಎಂಬುದನ್ನೂ ಇವರು ಪ್ರಸ್ತಾಪಿಸುತ್ತಾರೆ.

ಮನಮೋಹನ ಸಿಂಗ್‌ರವರು ಭಾರತೀಯರಿಗೆ 'ವಿಶ್ವವನ್ನು ತೆರೆದು ಕೊಟ್ಟರು' ಎಂದು ಆಗ ಹಾಡಿ ಹೊಗಳಿದ್ದ, ಅದರಿಂದ ಭಾರೀ ಪ್ರಯೋಜನ ಪಡೆದ ನಗರ ಪ್ರದೇಶಗಳ ಮಧ್ಯಮ ವರ್ಗಗಳವರೇ ಈಗ ಅಣ್ಣಾ ಹಝಾರೆಯವರ ಆಂದೋಲನದ ಪ್ರಮುಖ ಭಾಗವಾಗಿದ್ದಾರೆ ಎಂಬುದು ಕೆಲವರಿಗೆ ವಿರೋಧಾಭಾಸವಾಗಿ ಕಾಣುತ್ತಿದ್ದರೆ, ಇನ್ನು ಕೆಲವರು, ಆ ಉದಾರೀಕರಣ-ಖಾಸಗೀಕರಣ-ಜಾಗತೀಕರಣದ ನೀತಿಗಳೇ ಈಗಿನ ವ್ಯಾಪಕ ಭ್ರಷ್ಟಾಚಾರದ ವಿಷಕ್ಕೆ ಹಾಲೆರೆದವುಗಳು ಎಂಬುದನ್ನು ಕಾಣಲು ಈ ನಗರಪ್ರದೇಶಗಳ ಮಧ್ಯಮ ವರ್ಗಗಳವರು ವಿಫಲರಾಗಿರುವುದು



ಭ್ರಷ್ಟಾಚಾರ-ವಿರೋಧಿ ಆಂದೋಲನದ ಭವಿಷ್ಯದ ಬಗ್ಗೆ ಆತಂಕ ಹುಟ್ಟಿಸುತ್ತದೆ ಎಂದಿದ್ದಾರೆ.

ಇದನ್ನು ಒಪ್ಪದ 'ಉದಾರೀಕರಣ'ವಾದಿಗಳಿಗೆ ಇವುಗಳ ನಡುವೆಯೇ ಅಣ್ಣಾ ಹಝಾರೆಯವರ ಆಂದೋಲನದಲ್ಲಿ 'ಹೊಸ ಬೆಳಕು' ಕಾಣಬಂದಿದೆ- ಅದು ಭಾರತೀಯ ಸಮಾಜವನ್ನು ಭ್ರಷ್ಟಾಚಾರವನ್ನು ಗುಡಿಸಿ ಸ್ವಚ್ಛಗೊಳಿಸುವ ಬೆಳಕಲ್ಲ, ಬದಲಿಗೆ ಅದೇ ಉದಾರೀಕರಣದ 'ಆರ್ಥಿಕ ಸುಧಾರಣೆ'ಗಳಿಗೆ ಈಗ ಇನ್ನಷ್ಟು ಒತ್ತು ಸಿಗಬಹುದೆಂಬ ನಿರೀಕ್ಷೆಯ 'ಬೆಳಕು'. ಏಕೆ ಅಂತೀರಾ? ಈ ಆಂದೋಲನದ ಯಶಸ್ಸಿಗೆ ಕಾರಣವಾದದ್ದು ನಗರಪ್ರದೇಶಗಳ ಮಧ್ಯಮವರ್ಗಗಳವರು. ವೋಟ್ ಬ್ಯಾಂಕ್ ರಾಜಕೀಯದಲ್ಲಿ ಇದುವರೆಗೆ ನಗಣ್ಯರಾಗಿದ್ದ ಇವರತ್ತ ಈಗ ಯುಪಿಎ ಸರಕಾರ ನೋಡಲೇಬೇಕಾಗಿದೆ, ಅವರನ್ನು ಖುಶಿ ಪಡಿಸಲು ಆಧುನಿಕ ಸೂಪರ್ ಮಾರ್ಕೆಟ್‌ಗಳಲ್ಲಿ ವಿದೇಶಿ ನೇರ ಹೂಡಿಕೆಯಂತಹ 'ಸುಧಾರಣೆ'ಗಳನ್ನು ತರಲೇ ಬೇಕಾಗುತ್ತದೆ ಎಂಬುದು ಬೆಂಗಳೂರಿನ 'ಫೀಡ್ ಬ್ಯಾಕ್ ಕನ್ಸಲ್ಟಿಂಗ್' ಎಂಬ ಸಲಹಾ ಸಂಸ್ಥೆಯ ಅಧ್ಯಕ್ಷನ ನಿರೀಕ್ಷೆ ! ಯುಪಿಎ-2 ಸರಕಾರ ಆತನನ್ನು ನಿರಾಶಗೊಳಿಸಲಿಕ್ಕಿಲ್ಲ, ಆದರೆ ಅಣ್ಣಾ ಹಝಾರೆ ಈ ಬಗ್ಗೆ ಏನನ್ನುತ್ತಾರೋ?



ವೇದರಾಜ ಎನ್.ಕೆ.

★

ಜಿಡಿಪಿ ಬೆಳವಣಿಗೆ ದರ ಇಳಿಕೆ 8.8 ಶೇ.ದಿಂದ 7.7 ಶೇ.ಕ್ಕೆ

ಕಳೆದ ವಾರ ಹಣದುಬ್ಬರ ದರ 9.8%ಕ್ಕೇರಿದೆ ಎಂಬ ಸುದ್ದಿ ಬಂದಿತ್ತು. ಈ ವಾರ, ನಮ್ಮ ಆಳರಸರು ಸದಾ ಉಚ್ಚರಿಸುವ ಜಿಡಿಪಿಯ ಬೆಳವಣಿಗೆ ದರ ಕೂಡ ಆತಂಕ ಮೂಡಿಸಿದೆ- ಈ ಹಣಕಾಸು ವರ್ಷದ ಮೊದಲ ಮೂರು ತಿಂಗಳಲ್ಲಿ ಅದು 7.7%ಕ್ಕೆ ಇಳಿದಿರುವ ಸುದ್ದಿ ಹಣಕಾಸು ಮಂತ್ರಿಗಳು ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರನ್ನೂ ಚಿಂತೆಗೀಡು ಮಾಡಿದೆ. ಕಳೆದ ವರ್ಷ ಈ ಅವಧಿಯಲ್ಲಿ 8.8% ಏರಿಕೆ ದಾಖಲಾಗಿತ್ತು. ಇದು ನಿರಾಶಾದಾಯಕ ಎಂದಿರುವ ಹಣಕಾಸು ಮಂತ್ರಿಗಳು, ವರ್ಷದ ಕೊನೆಗೆ ಇದು ಉತ್ತಮಗೊಳ್ಳಬಹುದು, ಆದರೆ ನಾನು ಅಂತಿಮ ದರ ಎಷ್ಟಾಗಬಹುದು ಎಂದು ಹೇಳಲಾರೆ ಎಂದಿದ್ದಾರೆ. ಇಳಿಕೆ ಮುಖ್ಯವಾಗಿ ಸಂಭವಿಸಿರುವುದು ಉತ್ಪಾದನಾ ಚಟುವಟಿಕೆಗಳಲ್ಲಿ ಮತ್ತು ಗಣಿಗಾರಿಕೆಯಲ್ಲಿ.

ಇತ್ತೀಚಿನ ಜಾಗತಿಕ ಬೆಳವಣಿಗೆಗಳು ದೇಶೀಯ ಆರ್ಥಿಕದ ಮೇಲೆ ನಿರಂತರ ಪರಿಣಾಮ ಬೀರುತ್ತಿದ್ದು, ಇದರಿಂದ ಉದ್ದೇಶಿತ ಜಿಡಿಪಿ ಏರಿಕೆಯ ಗುರಿ ತಲುಪಲು ಆಗಲಿಕ್ಕಿಲ್ಲ ಎಂದು ಯೋಜನಾ ಆಯೋಗದ ಉಪಾಧ್ಯಕ್ಷ ಅಹ್ಲುವಾಲಿಯ ಹೇಳಿದ್ದಾರೆ. ಬೆಳವಣಿಗೆ ದರ ಎಷ್ಟಾಗುವುದು ಎಂಬುದಕ್ಕಿಂತ ಜಾಗತಿಕ ಹಿಂಜರಿತದ ಪರಿಣಾಮಗಳನ್ನು ಎದುರಿಸುವುದು ಹೇಗೆ ಎಂಬುದೇ ನಮ್ಮ ಮುಂದಿರುವ ದೊಡ್ಡ ಸವಾಲು ಎಂದು ಅವರು ಹೇಳುತ್ತಾರೆ. ಆದರೆ ಹಣಕಾಸು ಮಂತ್ರಿಗಳಿಗೆ ಇದರಲ್ಲಿಯೂ ಆಶಾಕಿರಣ ಕಾಣುತ್ತಿದೆ. ಜಾಗತಿಕ ಸನ್ನಿವೇಶ ಭಾರತಕ್ಕೆ ಹೊಸ ಅವಕಾಶಗಳನ್ನು ಕಲ್ಪಿಸಿ ಕೊಡಬಹುದು ಎಂಬ ನಿರೀಕ್ಷೆಯನ್ನು ಅವರು ಪುನರುಚ್ಚರಿಸಿದ್ದಾರೆ. ಏಕೆಂದರೆ ಆರ್ಥಿಕ ಅನಿಶ್ಚಿತತೆಯ ವಾತಾವರಣದಲ್ಲಿ ವಿದೇಶಿ ಬಂಡವಾಳಕ್ಕೆ ಭಾರತ ಸುಭದ್ರ ಹೂಡಿಕೆ ತಾಣವಾಗಿ ಕಾಣಬಹುದು ಎಂಬುದು ಅವರ ಲೆಕ್ಕಾಚಾರ.

★

ಕ್ರೀಡಾಭಿವೃದ್ಧಿ ಮಸೂದೆಗೆ ಸಂಪುಟದ ನಕಾರ!

ವಿವಿಧ ಕ್ರಿಡೆಗಳ ರಾಷ್ಟ್ರೀಯ ಒಕ್ಕೂಟಗಳ ನಿರ್ವಹಣೆಯ ಮೇಲೆ ನಿಯಂತ್ರಣ, ಅವುಗಳ ಅಧ್ಯಕ್ಷರಿಗೆ 70 ವರ್ಷಗಳ ವಯೋಮಿತಿ, ಆಡಳಿತಗಾರರ ಕಾರ್ಯಾವಧಿಯ ಮೇಲೆ ಮಿತಿ ಮತ್ತು ಅವನ್ನು ಮಾಹಿತಿ ಹಕ್ಕಿನ ಅಡಿಗೆ ತರುವುದು ಮುಂತಾದ ಕ್ರಮಗಳ ಪ್ರಸ್ತಾವವಿದ್ದ ಯುಪಿಎ-2 ಸರಕಾರದ ಕ್ರೀಡಾ ಇಲಾಖೆಯ ರಾಷ್ಟ್ರೀಯ ಕ್ರೀಡಾ ಅಭಿವೃದ್ಧಿ ಮಸೂದೆಗೆ ಯುಪಿಎ-2 ಸಂಪುಟ ಸಮಿತಿ ಮಂಜೂರಾತಿ ನೀಡಲು ನಿರಾಕರಿಸಿದೆ. ಅಂತರ್ರಾಷ್ಟ್ರೀಯ ಕ್ರಿಕೆಟ್ ಮಂಡಳಿಯ ಅಧ್ಯಕ್ಷ (ಹಿಂದೆ ಬಿಸಿಸಿಐ ಅಧ್ಯಕ್ಷರೂ ಆಗಿದ್ದ) ಶರದ್ ಪವಾರ್ ಅಲ್ಲದೆ ವಿವಿಧ ಕ್ರಿಕೆಟ್ ಅಸೋಸಿಯೇಷನ್ ಗಳ ಅಧ್ಯಕ್ಷರಾಗಿರುವ ವಿಲಾಸರಾವ್ ದೇಶಮುಖ್, ಸಿಪಿ ಜೋಷಿ, ಫರೂಕ್ ಅಬ್ದುಲ್ಲಾ ಮುಂತಾದ ಘಟಾನುಘಟಿಗಳಿರುವ ಸಂಪುಟ ಸಮಿತಿ ಇಂತಹ ಒಂದು ಮಸೂದೆಗೆ ಅಸ್ತು ಎನ್ನಬಹುದು ಎಂಬ ನಿರೀಕ್ಷೆಯೂ ಇರಲಿಲ್ಲ.

ಇದಕ್ಕೆ ಪ್ರಧಾನ ವಿರೋಧ ಬಂದಿರುವುದು ಭಾರೀ ಶ್ರೀಮಂತ ಕ್ರೀಡಾ ಒಕ್ಕೂಟವಾದ ಬಿಸಿಸಿಐ ಅಂದರೆ ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿಯಿಂದ ಎಂಬುದು ಗಮನಾರ್ಹ. ಸರಕಾರದಿಂದ ಚಿಕ್ಕಾಸೂ ಪಡೆಯದ ಬಿಸಿಸಿಐ ಮಾಹಿತಿ ಹಕ್ಕಿನ ಅಡಿಗೆ ಬರುವುದು ಹೇಗೆ ಸಾಧ್ಯ ಎಂಬುದು ಇವರ ಮುಖ್ಯ ಪ್ರಶ್ನೆ. ಸಂಪುಟದ ನಿರಾಕರಣೆಯಿಂದ ಕುಪಿತರಾಗಿರುವ

ಪುಟ 15ಕ್ಕೆ

5 ವರ್ಷಗಳಲ್ಲಿ 72% ಬೆಲೆಯೇರಿಕೆ!

ಇದು ಉದ್ಯಮಿಗಳ ಸಂಸ್ಥೆ ಅಸೋಚಾಮ್ ದೇಶದ ಮಹಾನಗರಗಳಲ್ಲಿ ನಡೆಸಿರುವ ಒಂದು ಸಮೀಕ್ಷೆಯಲ್ಲಿ ಕಂಡು ಬಂದಿರುವ ಸಂಗತಿ. 2005-2011ರ ಅವಧಿಯಲ್ಲಿ ಎಂಟು ಆವಶ್ಯಕ ವಸ್ತುಗಳ ಬೆಲೆಗಳಲ್ಲಿ 72% ಹೆಚ್ಚಳವಾಗಿದೆ, ಹಾಲು, ಹಣ್ಣು , ತರಕಾರಿ, ಮೀನು-ಮಾಂಸ ಮೊದಲಾದ ಆಹಾರ ವಸ್ತುಗಳ ಬೆಲೆಗಳಲ್ಲಂತೂ 158%ದಷ್ಟು ಹೆಚ್ಚಳವಾಗಿದೆ.

ಇದೇ ಅವಧಿಯಲ್ಲಿ ಈ ಮಹಾನಗರಗಳ ಜನಗಳ ಸರಾಸರಿ ಆದಾಯದಲ್ಲಿ ಆಗಿರುವ ಹೆಚ್ಚಳ ಕೇವಲ 38%. ಈ 38% ಹೆಚ್ಚಳದಲ್ಲೂ ಹಣದುಬ್ಬರದ ಪಾಲು ಮತ್ತು ಈ ಮಹಾನಗರಗಳ ಶ್ರೀಮಂತ, ಮೇಲ್ಮಧ್ಯಮ ವರ್ಗಗಳ ಪಾಲೇ ಹೆಚ್ಚು, ಕೆಳ ಮಧ್ಯಮ ಮತ್ತು ಬಡವರ್ಗಗಳ ಜನರ ಆದಾಯದಲ್ಲಿ ಇಷ್ಟೂ ಹೆಚ್ಚಳವಾಗಿರಲಿಕ್ಕಿಲ್ಲ ಎಂಬುದು ಸ್ಪಷ್ಟ. ಆದರೂ ಆಹಾರ ಪದಾರ್ಥಗಳ ವಿಪರೀತ ಬೆಲೆಯೇರಿಕೆಗಳಿಗೆ ಬದಲಾಗುತ್ತಿರುವ ಆಹಾರ ಸೇವನೆ ಮತ್ತು ಜೀವನ ಶೈಲಿ ಮುಖ್ಯ ಕಾರಣ ಎಂದು ಅಮೆರಿಕನ್ ಅಧ್ಯಕ್ಷರಂತೆ, ಕೆಲವು ಯುಪಿಎ ಮುಖಂಡರಂತೆ ಈ ಸಮೀಕ್ಷೆಯೂ ತೀರ್ಮಾನಿಸಿದೆ! ವರ್ಗ ಚಾರಿತ್ರ್ಯ ಎಂದರೆ ಇದೇ ಅಲ್ಲವೇ?


ಜಗದಗಲ

ಶರತ್‌ಚಂದ್ರ

ನೇಪಾಳದಲ್ಲಿ ಹೊಸ ಸರ್ಕಾರ

ನೇಪಾಳದಲ್ಲಿ ಬಾಬುರಾಮ್ ಭಟ್ಟಾರಾಯ್ ನಾಯಕತ್ವದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಮಾವೋವಾದಿ ಪಕ್ಷದ ಬಾಬುರಾಮ್ ಭಟ್ಟಾರಾಯ್ ಮಾದೇಸಿ ಪಕ್ಷಗಳ ಸಂಯುಕ್ತ ರಂಗದ ಬೆಂಬಲದಿಂದ ಪ್ರಧಾನಿ ಆಗಿ ಆಯ್ಕೆ ಆಗಿದ್ದಾರೆ. ಪಾರ್ಲಿಮೆಂಟಿನಲ್ಲಿ ನಡೆದ ಚುನಾವಣೆಯಲ್ಲಿ ನೇಪಾಳಿ ಕಾಂಗ್ರೆಸಿನ ಅಭ್ಯರ್ಥಿ ರಾಮಚಂದ್ರ ಪೌದೆಲ್ ಅವರನ್ನು ಸರಳ ಬಹುಮತದಿಂದ ಸೋಲಿಸಿದರು. ಹಿಂದಿನ ಸರ್ಕಾರದಲ್ಲಿ ಹಣಕಾಸು ಮಂತ್ರಿ ಆಗಿದ್ದ ಭಟ್ಟಾರಾಯ್ ದೆಹಲಿಯ ಪ್ರಸಿದ್ಧ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ.

ಪಾರ್ಲಿಮೆಂಟಿನಲ್ಲಿ ಸಂವಿಧಾನ ರಚನೆ ಗಡುವು ವಿಸ್ತರಿಸುವ ಬಗ್ಗೆ ಮತದಾನ ನಡೆದು ಗಡುವನ್ನು ಮೂರು ತಿಂಗಳ ವರೆಗೆ ವಿಸ್ತರಿಸಲಾಗಿದೆ. ಭಟ್ಟಾರಾಯ್ ಸರ್ಕಾರ ಆರು ತಿಂಗಳ ವಿಸ್ತರಣೆ ಕೇಳಿದ್ದು ಪಾರ್ಲಿಮೆಂಟು ಮೂರು ತಿಂಗಳ ವಿಸ್ತರಣೆ ಮಾತ್ರ ನೀಡಿದೆ. ಆದರೆ ಕಳೆದ ಎರಡು ಸರ್ಕಾರಗಳಿಗೆ ಹೋಲಿಸಿದರೆ ಆಶ್ಚರ್ಯಕರ ರೀತಿಯಲ್ಲಿ ಈ ಬಾರಿ ದೀರ್ಘ ಚೌಕಾಶಿ ಮತ್ತು ವಿಳಂಬ ಕಂಡು ಬರಲಿಲ್ಲ. ಕಳೆದ ಬಾರಿ ಯು.ಎಂ.ಎಲ್. ಕಮ್ಯುನಿಸ್ಟ್ ಪಕ್ಷದ ಖಲನಾಲ್ ಪ್ರಧಾನಿ ಆಯ್ಕೆಯ ಮೊದಲು 17 ಬಾರಿ ಪಾರ್ಲಿಮೆಂಟಿನಲ್ಲಿ ಚುನಾವಣೆ ನಡೆದಿತ್ತು.



ಭಟ್ಟಾರಾಯ್ ಮಾವೋವಾದಿಗಳಲ್ಲಿ ಉಳಿದ ಪಕ್ಷಗಳಿಗೆ ಸ್ವೀಕಾರಾರ್ಹವಾಗುವ ನಾಯಕರು. ಅವರು ಹಣಕಾಸು ಮಂತ್ರಿಯಾಗಿ ಅವರ ಕೆಲಸದ ಬಗ್ಗೆ ಮೆಚ್ಚುಗೆ ಗಳಿಸಿದ್ದಾರೆ. ಮಾದೇಸಿ ಪಕ್ಷಗಳ ಸಂಯುಕ್ತ ರಂಗದ ಜತೆ ಮಾವೋವಾದಿ ಪಕ್ಷ ಒಂದು ಲಿಖಿತ ಒಪ್ಪಂದಕ್ಕೆ ಸಹಿ ಹಾಕಿದೆ. ಇದರಿಂದ ನೇಪಾಳದ ಪ್ರಜಾಸತ್ತೆ ಮತ್ತು ಶಾಂತಿ ಸ್ಥಾಪನೆಯ ಪ್ರಕ್ರಿಯೆ ಮುನ್ನಡೆಯುವ ಆಶಾಭಾವನೆ ಕಂಡು ಬಂದಿದೆ. ಆದರೂ ನೇಪಾಳದ ರಾಜಕೀಯ ಬಿಕ್ಕಟ್ಟನ್ನು ಕಗ್ಗಂಟಾಗಿ ಮಾಡಿರುವ ಕೆಲವು ಪ್ರಮುಖ ವಿಷಯಗಳು ಹೊಸ ಸರ್ಕಾರ ಹೇಗೆ ಪರಿಹಾರ ಹುಡುಕುತ್ತದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಸಂವಿಧಾನ ಮತ್ತು ಸರ್ಕಾರದ ಸ್ವರೂಪದ ಬಗ್ಗೆ ಪ್ರಮುಖ ಪಕ್ಷಗಳ ನಡುವೆ ಸಹಮತದ ಅಭಾವ, ಈಗ ಕ್ಯಾಂಪುಗಳಲ್ಲಿ ಇರುವ 19 ಸಾವಿರ ಮಾವೋವಾದಿ ಗೆರಿಲ್ಲಾಗಳನ್ನು ನೇಪಾಳ ಸೈನ್ಯ ಅಥವಾ ಸಮಾಜದಲ್ಲಿ ಸಮಗ್ರೀಕರಿಸುವ ವಿಧಾನ – ಇವು ಪ್ರಮುಖ ವಿವಾದಾಸ್ಪದ ವಿಷಯಗಳು. ಯು.ಎಂ.ಎಲ್. ಕಮ್ಯುನಿಸ್ಟ್ ಪಕ್ಷ ಸರ್ಕಾರದ ಭಾಗವಾಗಿ ಇಲ್ಲದೆ ಇರುವುದು ಸಹ ಕಗ್ಗಂಟು ಬಿಡಿಸುವುದನ್ನು ಇನ್ನಷ್ಟು ಕಷ್ಟಕರಗೊಳಿಸಬಹುದು.

ಶ್ರೀಲಂಕಾದಲ್ಲಿ ತುರ್ತು ಪರಿಸ್ಥಿತಿ ತೆರವು

ಶ್ರೀಲಂಕಾದಲ್ಲಿ 1971ರಿಂದ ಜಾರಿಯಲ್ಲಿದ್ದ ತುರ್ತು ಪರಿಸ್ಥಿತಿಯನ್ನು ತೆರವುಗೊಳಿಸಿದೆ. 1971 ರಲ್ಲಿ ದಕ್ಷಿಣ ಶ್ರೀಲಂಕಾದ ಜನತಾ ವಿಮುಕ್ತಿ ಪೆರುಮಾನ (ಜೆವಿಪಿ – ನಮ್ಮ ದೇಶದ ನಕ್ಸಲೈಟ್ ಚಳುವಳಿಯಂತಹ ಉಗ್ರಗಾಮಿ ಚಳುವಳಿ) ಸಂಘಟನೆಯ ಸಶಸ್ತ್ರ ದಂಗೆಯ ಸಂದರ್ಭದಲ್ಲಿ ಮೊದಲ ಬಾರಿಗೆ ಜಾರಿಗೆ ಬಂದ ತುರ್ತು ಪರಿಸ್ಥಿತಿ ಈ ವರೆಗೂ ಇತ್ತು. ಜೆವಿಪಿ ದಂಗೆಯ ದಮನದ ನಂತರ ತಮಿಳು ಸಂಘಟನೆಗಳ ಗೆರಿಲ್ಲಾ ಹೋರಾಟಗಳ ನೆಪದಲ್ಲಿ 40 ವರ್ಷಗಳಷ್ಟು ದೀರ್ಘಕಾಲ ತುರ್ತು ಪರಿಸ್ಥಿತಿ ಜಾರಿಯಲ್ಲಿತ್ತು. 2009 ರಲ್ಲಿ ಎಲ್.ಟಿ.ಟಿ.ಇ.ಯ ಮಿಲಿಟರಿ ಸೋಲಿನ ನಂತರ ಅದನ್ನು ಮುಂದುವರೆಸುವುದಕ್ಕೆ ಯಾವುದೇ ಅರ್ಥ ಇರಲಿಲ್ಲ. ಆದ್ದರಿಂದ ಶ್ರೀಲಂಕಾ ಸರ್ಕಾರದ ಈ ಕ್ರಮಕ್ಕೆ ವಿಳಂಬವಿದ್ದರೂ ದೇಶದಲ್ಲೂ ಹೊರಗೂ ವ್ಯಾಪಕ ಸ್ವಾಗತ ದೊರಕಿದೆ.

ಶ್ರೀಲಂಕಾದ ತುರ್ತು ಪರಿಸ್ಥಿತಿಯ ನಿಯಮಗಳು ಪೋಲೀಸು ಮತ್ತು ಮಿಲಿಟರಿಗೆ ಯಾರನ್ನೇ ಆಗಲಿ ಬಂಧಿಸುವ, ಅನಿರ್ದಿಷ್ಟ ಕಾಲ ಜೈಲಿನಲ್ಲಿಡುವ, ಚಿತ್ರಹಿಂಸೆಗೆ ಗುರಿ ಮಾಡುವ, ಶಿಕ್ಷಿಸುವ ಅನಿರ್ಬಂಧಿತ ಅಧಿಕಾರ ಕೊಡುತ್ತದೆ.



ಎಲ್ಲೆಡೆ ಆಗುವಂತೆ ಅದರ ದುರುಪಯೋಗ ಆಗಿದ್ದೇ ಹೆಚ್ಚು. 1970 ರ ದಶಕದಲ್ಲಿ ದಕ್ಷಿಣ ಪ್ರದೇಶಗಳಲ್ಲಿ, 1980 ರ ನಂತರ ತಮಿಳು ಪ್ರದೇಶಗಳಲ್ಲಿ ಜನರ ಮೂಲಭೂತ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ತುರ್ತು ಪರಿಸ್ಥಿತಿ ಪೂರ್ಣವಾಗಿ ಅರ್ಥಹೀನಗೊಳಿಸಿತ್ತು. ಸಾಮಾನ್ಯ ಜನರನ್ನು ತೀವ್ರ ಸಂಕಷ್ಟಕ್ಕೆ ಈಡು ಮಾಡಿತ್ತು. ಇಡೀ ಶ್ರೀಲಂಕಾದ ಜನತೆಯ ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ತೀವ್ರವಾಗಿ ಮೊಟಕುಗೊಳಿಸಿತ್ತು. ಸಾಲದೆಂಬಂತೆ ಈ ದಶಕದಲ್ಲಿ 2005 ರಲ್ಲಿ ಪ್ರಧಾನಿ ಹತ್ಯೆ ಜತೆ ತಾರಕಕ್ಕೆ ಏರಿದ್ದ ಎಲ್.ಟಿ.ಟಿ.ಇ.ಯ ಭಯೋತ್ಪಾದಕ ಚಟುವಟಿಕೆಗಳನ್ನು ನಿಗ್ರಹಿಸಲು ಹೊಸ ಭಯೋತ್ಪಾದಕ–ವಿರೋಧಿ ಕಾನೂನುಗಳನ್ನು ತಂದಿತು. ಈ ಎರಡೂ ಕಾನೂನುಗಳಲ್ಲಿ ಭಯೋತ್ಪಾದನೆ ಅಥವಾ ದೇಶದ ಭದ್ರತೆಗೆ ಅಪಾಯಗಳ ವ್ಯಾಖ್ಯಾನಗಳು ತೀರಾ ಅಸ್ಪಷ್ಟ ಮತ್ತು ಬೇಕಾಬಿಟ್ಟಿಯಾಗಿದ್ದು ದುರ್ಬಳಕೆಗೆ ಆಹ್ವಾನ ಕೊಡುವಂತಿತ್ತು. ಎಲ್.ಟಿ.ಟಿ.ಇ.ಯ ವಿರುದ್ಧ ಸಮರದಲ್ಲಿ ವ್ಯಾಪಕವಾಗಿ ಮಾನವ ಹಕ್ಕುಗಳ ತೀವ್ರ ಉಲ್ಲಂಘನೆಗಳ ವಿಡಿಯೋ ಪುರಾವೆಗಳು ಇತ್ತೀಚೆಗೆ ಬಹಿರಂಗವಾಗಿದ್ದು, ಭಯೋತ್ಪಾದಕ–ವಿರೋಧಿ ಕಾನೂನನ್ನು ಸಹ ರದ್ದು ಮಾಡಬೇಕು ಎಂಬ ತೀವ್ರ ಒತ್ತಾಯ ಬಂದಿದೆ.

ಪುಟ 15ಕ್ಕೆ

ಗ್ವಾಟೆಮಾಲನ್ನರ ಮೇಲೆ ಅಮಾನವೀಯ ಅಮೆರಿಕನ್ ಪ್ರಯೋಗ

ಐದು ಸಾವಿರಕ್ಕೂ ಹೆಚ್ಚು ಗ್ವಾಟೆಮಾಲಾದ ನಾಗರಿಕರನ್ನು ಅಮೆರಿಕ ಅಮಾನವೀಯ ವೈದ್ಯಕೀಯ ಪ್ರಯೋಗಗಳಿಗೆ ಗುರಿ ಮಾಡಿದ ಭೀಕರ ಪ್ರಕರಣ ಬೆಳಕಿಗೆ ಬಂದಿದೆ. ಇದು ಆಕಸ್ಮಿಕವಾಗಿ ಬೆಳಕಿಗೆ ಬಂದಿದ್ದು ವೆಲ್ಲೆಸ್ಲಿ ಕಾಲೇಜಿನ ಪ್ರೊ. ಸೂಸಾನ್ ರೆವರ್ಬಿ ಆ ಅವಧಿಯ ಅಮೆರಿಕದ ಪತ್ರಾಗಾರದಲ್ಲಿ ಸಂಶೋಧನೆ ನಡೆಸಿದ್ದ ಒನ್ನೆಲೆಯಲ್ಲಿ. 1946–1948 ರ ಅವಧಿಯಲ್ಲಿ (ಸಿಫಿಲಿಸ್, ಗನೋರಿಯಾ ಮುಂತಾದ) ಲೈಂಗಿಕ ರೋಗಗಳಿಗೆ ಔಷಧಿ ಅಥವಾ ಲಸಿಕೆ ಸಂಶೋಧನೆಯ ಪ್ರಯೋಗಗಳಿಗೆ 'ಮಾನವ ಬಲಿಪಶು' ಗಳಾಗಿ ಗ್ವಾಟೆಮಾಲಾದ ಜೈಲುಗಳು ಮತ್ತು ಮಾನಸಿಕ ಆಸ್ಪತ್ರೆಗಳಲ್ಲಿದ್ದವರು ಮತ್ತು ಸೈನಿಕರನ್ನು ಬಳಸಿಕೊಳ್ಳಲಾಗಿತ್ತು.

ಅವರಲ್ಲಿ 1300 ಕ್ಕೂ ಹೆಚ್ಚು ಜನರಿಗೆ, ಲೈಂಗಿಕ ರೋಗಗಳು ಬರುವಂತೆ 'ಮಾನವ ಸಂಬಂಧ' ಅಥವಾ ಇಂಜೆಕ್ಷನುಗಳನ್ನು ಬಳಸಲಾಗಿತ್ತು. ಅವರಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಮಕ್ಕಳು ಇದ್ದರು. ಅವರಲ್ಲಿ 83 ಜನ ಈ ರೋಗಗಳಿಂದ ಸತ್ತರು. ಉಳಿದವರಲ್ಲಿ ಹಲವರು ಜೀವಾವಧಿ ಈ ರೋಗಗಳಿಂದ ನರಳುತ್ತಿದ್ದರು ಎಂಬುದು ಪತ್ರಾಗಾರದಲ್ಲಿರುವ ಮಾಹಿತಿಗಳಿಂದ ತಿಳಿದು ಬಂದಿದೆ. ಇದಕ್ಕೆ ಆ 'ಮಾನವ ಬಲಿಪಶು' ಗಳ ಸಮ್ಮತಿಯೂ ಇರಲಿಲ್ಲ. ಅವರಿಗೆ ಆ ಬಗ್ಗೆ ಮಾಹಿತಿ ಸಹ ಇರಲಿಲ್ಲ. ಈ ಪ್ರಯೋಗಕ್ಕೆ ಅಮೆರಿಕದ ವಿದೇಶ ವಿಭಾಗದ ಮತ್ತು ರಾಷ್ಟ್ರೀಯ ಆರೋಗ್ಯ ಸಂಸ್ಥೆಯ ಅಧಿಕೃತ ಮಂಜೂರಾತಿ ಸಿಕ್ಕಿತ್ತು.

ಈ ಭೀಕರ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಅಮೆರಿಕ ಮತ್ತು ಗ್ವಾಟೆಮಾಲ ಎರಡೂ ದೇಶಗಳಲ್ಲಿ ಮತ್ತು ಅಂತರ್‍ರಾಷ್ಟ್ರೀಯವಾಗಿಯೂ ಜನರನ್ನು ಬೆಚ್ಚಿ ಬೀಳಿಸಿದೆ. ಕೆರಳಿಸಿದೆ. ರೊಚ್ಚಿಗೆಬ್ಬಿಸಿದೆ. ಅಮೆರಿಕದ ಅಧ್ಯಕ್ಷ ಒಬಾಮಾ ಗ್ವಾಟೆಮಾಲ ಅಧ್ಯಕ್ಷರಿಗೆ ಅಧಿಕೃತ ಕ್ಷಮಾಪಣೆ ಕೋರಿದ್ದಾರೆ. ಅಲ್ಲದೆ ಜೈವಿಕ–ನೈತಿಕ ಕಮಿಶನ್ ಈ ಬಗ್ಗೆ ವಿವರವಾದ ತನಿಖೆ ಮಾಡುವಂತೆ ಆದೇಶಿಸಿದ್ದಾರೆ. ಜಗತ್ತಿನಾದ್ಯಂತ ಹಲವು ದಶಕಗಳಿಂದ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತಾ ಬಂದಿರುವ ಅಮೆರಿಕನ್ ಆಳುವವರು ಇತರರಿಗೆ ಮಾನವ ಹಕ್ಕುಗಳ ಪಾಠ ಹೇಳುವುದನ್ನು ಈಗಲೂ ಹಲವರು ಗಂಭೀರವಾಗಿ ಪರಿಗಣಿಸುತ್ತಾರೆ ಎಂಬುದು ಚೋದ್ಯದ ಸಂಗತಿ.

12ನೇ ಪಂಚವಾರ್ಷಿಕ ಯೋಜನೆಯ ಜನವಿರೋಧಿ ಮುಖ

ಪುಟ 7 ರಿಂದ

ಸಾಧ್ಯವೇ ? ಖಂಡಿತ ಇಲ್ಲ. ಹಾಗಾದರೇ 12ನೇ ಯೋಜನೆಯ ಅವಧಿಯಲ್ಲಿ ಖಾಸಗಿ ವಿಮಾ ಸಂಸ್ಥೆಗಳ ಮೂಲಕ ಹಾಗೂ ಶಿಕ್ಷಣ ಸಂಸ್ಥೆಗಳ ಮೂಲಕ ಈ ವ್ಯವಹಾರಗಳನ್ನು ಮಾಡುವ ತಂತ್ರ ರೂಪಿಸಲಾಗುತ್ತಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಒಟ್ಟು ಈ ಕ್ರಮಗಳ ಪರಿಣಾಮವೇನು? ಆರೋಗ್ಯ ಮತ್ತು ಶಿಕ್ಷಣ ರಂಗಗಳಲ್ಲಿ ಖಾಸಗಿ ದೇಶೀಯ ಮತ್ತು ವಿದೇಶಿ ಬಂಡವಾಳಗಾರರ ಲಾಭ ಗಳಿಸುವ ಅವಕಾಶಗಳನ್ನು ಹೆಚ್ಚು ಮಾಡುವುದಾಗಿದೆ. ಜನರಿಗೆ ಈ ಪ್ರಕ್ರಿಯೆಯಲ್ಲಿ ಅಲ್ಪ ಸ್ವಲ್ಪ ಅನುಕೂಲತೆಗಳು ಸಿಗಬಹುದು ಆದರೆ ಪ್ರಧಾನವಾದ ಪ್ರಯೋಜನ ದೊರೆಯುವುದಂತೂ ಬಂಡವಾಳಗಾರರಿಗೆ ಮಾತ್ರ. ಇದರಿಂದ ಯೋಜನೆ ಉದ್ದೇಶವಾಗಿರುವ ಹೆಚ್ಚು ಜನರು ಒಳಗೊಳ್ಳುವಿಕೆ ಬದಲಾಗಿ ಹೆಚ್ಚಿನ ಜನರು ಅಭಿವೃದ್ಧಿ ವ್ಯಾಪ್ತಿಯಿಂದ ಹೊರಗೆ ಎಸೆಯಲ್ಪಡುವುದೇ ಆಗುತ್ತದೆ.

ಇಂಧನ ಬೆಲೆ ಏರಿಕೆ ಇಂಗಿತ

ಮತ್ತೊಂದು ಪ್ರಮುಖ ರಂಗ ಇಂದನ ರಂಗ. ದೇಶದ ಆರ್ಥಿಕ ಅಭಿವೃದ್ಧಿ ಶೇ 9 ರಷ್ಟು ಹೆಚ್ಚಾದರೆ ಇಂಧನ ರಂಗದಲ್ಲಿ ಅಂದರೇ ವಿದ್ಯುತ್, ಪೆಟ್ರೋಲಿಯಂ ಉತ್ಪನ್ನಗಳು ಹಾಗೂ ಕಲ್ಲಿದ್ದಲು ರಂಗಗಳು. ಈ ರಂಗಗಳಲ್ಲಿ ಶೇ 7 ರಷ್ಟು ಬೇಡಿಕೆ ಹೆಚ್ಚಾಗುತ್ತದೆಂದು ಅಂದಾಜು ಮಾಡಲಾಗಿದೆ. ಈ ದಿಶೆಯಲ್ಲಿ ಪ್ರಮುಖ ಕ್ರಮಗಳಾಗಿ ಗುರುತಿಸಿರುವುದು.

ಇಂಧನ ಬೆಲೆ ನಿಗದಿ ವಿಧಾನ.

ಯೋಜನಾ ಆಯೋಗದ ಪ್ರಕಾರ ಪ್ರಪಂಚದ ಬೆಲೆಗಳಿಗೆ ಹೋಲಿಸಿದರೇ ಭಾರತದಲ್ಲಿ ಇಂದನ (ವಿದ್ಯುತ್, ಪೆಟ್ರೋಲಿಯಂ ಉತ್ಪನ್ನಗಳು ಹಾಗೂ ಕಲ್ಲಿದ್ದಲು) ಬಹಳ ಕಡಿಮೆ ಬೆಲೆ ಇವೆ. ಅಷ್ಟೇ ಅಲ್ಲ ವಿಶ್ವದಲ್ಲಿ ಇಂಧನ ಬೆಲೆಗಳು ಕಡಿಮೆ ಆಗುವ ಸಂಭವೂ ಇಲ್ಲ. ಆದ್ದರಿಂದ ಇಂಧನ ಬೆಲೆಗಳನ್ನು ಜಾಗತಿಕ ಮಟ್ಟಕ್ಕೆ ತಡವಿಲ್ಲದೇ ಹೆಚ್ಚಿಸಬೇಕು. ಇತರ ವಸ್ತುಗಳ ಬೆಲೆ ಏರಿಸಿದರೇ ಆಯಾ ವಸ್ತುಗಳ ಬೆಲೆಗಳು ಮಾತ್ರ ಹೆಚ್ಚಾಗುತ್ತವೆ. ಆದರೇ ಇಂಧನ ಬೆಲೆಗಳು ಹೆಚ್ಚಾದರೇ ಪ್ರತಿಯೊಂದು ವಸ್ತುವಿನ ಬೆಲೆಗಳು ಏರಿಕೆ ಆಗುತ್ತವೆ ಎನ್ನುವುದು ತಿಳಿಯಲು ಯಾವುದೇ ಅರ್ಥಶಾಸ್ತ್ರದ ಪರಿಣಿತಿ ಇಲ್ಲದೆಯೇ ಗೊತ್ತಾಗುತ್ತದೆ. ಆದರೇ ಯೋಜನಾ ಆಯೋಗದ ಅಧ್ಯಕ್ಷರಾದ ಮನಮೋಹನ ಸಿಂಗ್ ಹಾಗೂ ಉಪಾಧ್ಯಕ್ಷರಾಗಿರುವ ಮಾಂಟೆಕ್ ಸಿಂಗ್ ಅಹ್ಲುವಾಲಿಯಾ ರಂತಹ ಅರ್ಥಶಾಸ್ತ್ರಜ್ಞರಿಗೆ ಭಾರತದ ಜನತೆಗಿಂತಲೂ ಬಂಡವಾಳಗಾರರ ಸೇವೆಯೇ ಮುಖ್ಯವಾಗಿರುವ ಕಾರಣದಿಂದ ಸಾಮಾನ್ಯ ಜನರ ಬದುಕಿನ ಬವಣೆಗಳು ಅರ್ಥವಾಗುವುದು ಕಷ್ಟಸಾಧ್ಯ.

ಇಂಧನ ರಂಗದಲ್ಲಿ 11ನೇ ಯೋಜನೆಯ ಅವಧಿಯಲ್ಲಿ ಸುಮಾರು 50000 ಮೆ.ವಾ ವಿದ್ಯುತ್ ಸಾಧಿಸಲು ಸಾಧ್ಯವಾಗಿದೆ. 12ನೇ ಯೋಜನೆಯ ಅವಧಿಯಲ್ಲಿ 1 ಲಕ್ಷ ಮೆ.ವಾ ಹೆಚ್ಚಳ ಸಾಧಿಸುವ ಗುರಿಯನ್ನು ಹೊಂದಲಾಗಿದೆ. ಈ ಗುರಿ ಸಾಧಿಸಲು ಸರಕಾರಗಳಿಂದ ಹೆಚ್ಚಿನ ಹಣ ಹೂಡಿಕೆ ಮಾಡುವ ಬದಲಾಗಿ ಯೋಜನಾ ಆಯೋಗದ ಸೂತ್ರವು ಪಿಪಿಪಿ ಮಾದರಿಯನ್ನೇ ಪರಿಹಾರವಾಗಿ ಹೇಳಲಾಗಿದೆ. ಇಂತಹ ತಲೆಬುಡವಿಲ್ಲದ ಕ್ರಮಗಳ ಮೂಲಕ ನಿಜವಾದ ಅಭಿವೃದ್ಧಿ ಸಾಧ್ಯವೇ ?

ಸಂಪನ್ಮೂಲಗಳ ಹೆಚ್ಚಳ ಹಾಗೂ ವಿತರಣೆಯ ಕುರಿತು ಯೋಜನೆಯು ಸರಕಾರಿ ನೌಕರರ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡಲು ಸೂಚಿಸಿದೆ. ಅಲ್ಲದೇ ಸಬ್ಸಿಡಿಗಳನ್ನು (ಆಹಾರ, ಆರೋಗ್ಯ, ಶಿಕ್ಷಣ, ಗೊಬ್ಬರ, ಕೃಷಿ ಮುಂತಾದ) ಕಡಿತ ಮಾಡಲು ಇದರ ಬದಲಾಗಿ ಹಣ ವರ್ಗಾವಣೆಯಂತಹ ಕ್ರಮಗಳನ್ನು ಸಲಹೆ ಮಾಡಲಾಗಿದೆ. ಸಂಪನ್ಮೂಲ ಹೆಚ್ಚಿಸಲು ತೆರಿಗೆಗಳನ್ನು ಈಗಿರುವ ಶೇ 7.2 ಜಿಡಿಪಿ ಬದಲಾಗಿ ಶೇ.8 ರಷ್ಟು ಹೆಚ್ಚಿಸಲು ಸೂಚಿಸಲಾಗಿದೆ. ಯೋಜನಾ ಆಯೋಗದ ಅಭಿವೃದ್ಧಿ ಕಣ್ಣೋಟವೇ ಬದಲಾಗುವುದು ಅಗತ್ಯವಾಗಿದೆ. ಈ ದಿಶೆಯಲ್ಲಿ ದೇಶದ ಕಾರ್ಮಿಕರ, ಜನ ಸಾಮಾನ್ಯರ ಪ್ರಜ್ಞಾ ಶಕ್ತಿ ಬಲಗೊಳ್ಳುವುದೊಂದೆ ಮಾರ್ಗ.

□

ಯುಪಿಎ ದರ್ಬಾರ್

ಪುಟ 13 ರಿಂದ

ಯುಪಿಎ-2 ಕ್ರೀಡಾ ಮಂತ್ರಿ ಈ ಪ್ರಶ್ನೆಯನ್ನ ಬಲವಾಗಿ ಪ್ರಶ್ನಿಸಿದ್ದಾರೆ. ಬಿಸಿಸಿಐ ಸರಕಾರದ ಬೊಕ್ಕಸದಿಂದ ಅನುಭವಿಸುತ್ತಿರುವ ಹಣಕಾಸು ಪ್ರಯೋಜನಗಳ ಒಂದು ದೊಡ್ಡ ಪಟ್ಟಿಯನ್ನ ಅವರು ಪ್ರಕಟಿಸಿದ್ದಾರೆ. ಈ ಮೂಲಕ ಬಡವರ ಕಲ್ಯಾಣ ಕ್ರಮಗಳನ್ನು ಸಂಪನ್ಮೂಲಗಳ ಕೊರತೆಯ ನೆಪವೊಡ್ಡಿ ಕಡಿತ ಮಾಡುತ್ತಿರುವ ಯುಪಿಎ-2 ಸರಕಾರ ಅತಿ ಶ್ರೀಮಂತ ಕ್ರೀಡಾ ಮಂಡಳಿಗೆ ಎಷ್ಟೊಂದು ಸಂಪನ್ಮೂಲಗಳನ್ನು ವೆಚ್ಚ ಮಾಡುತ್ತಿದೆ ಎಂಬುದು ಬಯಲಿಗೆ ಬಂದಿದೆ.

ಅವರು ಪಟ್ಟಿ ಮಾಡಿರುವ ವಿನಾಯ್ತಿ/ರಿಯಾಯ್ತಿಗಳ ಪಟ್ಟಿ ನೋಡಿ- ಮನರಂಜನಾ ತೆರಿಗೆಯಿಂದ ವಿನಾಯ್ತಿ, ಸರಕಾರ ಮ್ಯಾಚುಗಳಿಗೆ ಒದಗಿಸುವ ಸುರಕ್ಷತಾ ಕ್ರಮಗಳ ವೆಚ್ಚದ ವಸೂಲಿಯಿಂದ ವಿನಾಯ್ತಿ, ಅವರು ಬಳಸುವ ಸ್ಟೇಡಿಯಂಗಳಿಗೂ ಹಣ ವಸೂಲಿ ಇಲ್ಲ, ಸ್ಟೇಡಿಯಂಗಳನ್ನು ಕಟ್ಟಲು ಕೊಟ್ಟಿರುವ ಭೂಮಿಗೂ ಅವರಿಂದ ಹಣ ಪಡೆದಿಲ್ಲ. ಇಷ್ಟೆಲ್ಲ ಸರಕಾರೀ ಖಜಾನೆಯಿಂದ, ಅಂದರೆ ತೆರಿಗೆದಾರರ ಹಣದಿಂದ ಗಿಟ್ಟಿಸುವವರ ಹಣಕಾಸು ವ್ಯವಹಾರಗಳನ್ನು ತಿಳಿಯುವ ಹಕ್ಕು ನಾಗರಿಕರಿಗೆ ಏಕಿರಬಾರದು ಎಂಬುದು ಕ್ರೀಡಾಮಂತ್ರಿಗಳ ಪ್ರಶ್ನೆ- ವಿಶೇಷವೆಂದರೆ ಇದು ಅವರು ತಮ್ಮದೇ ಸರಕಾರದ ಹಿರಿಯ ಮಂತ್ರಿಗಳ ಮುಂದಿಟ್ಟಿರುವ ಪ್ರಶ್ನೆ!

ಶ್ರೀಲಂಕಾದಲ್ಲಿ ತುರ್ತು ಪರಿಸ್ಥಿತಿ ತೆರವು

ಪುಟ 14 ರಿಂದ

ಕರಾಳ ಕಾನೂನುಗಳಿಂದ ಭಯೋತ್ಪಾದಕತೆ ಅಥವಾ ತಮಿಳು ಅಥವಾ ಯಾವುದೇ ಸಮಸ್ಯೆ ಪರಿಹರಿಸಲು ಸಾಧ್ಯವಿಲ್ಲ ಎಂದು ಶ್ರೀಲಂಕಾ ಸರ್ಕಾರಕ್ಕೆ ಅರಿವಾಗಬೇಕು. ಎಲ್.ಟಿ.ಟಿ.ಇ.ಯ ಮಿಲಿಟರಿ ಸೋಲು ಆಗಿ ಎರಡು ವರ್ಷ ಕಳೆದರೂ ತಮಿಳು ಜನರ ಆಕಾಂಕ್ಷೆಗಳಿಗೆ ಸ್ಪಂದಿಸುವ ಮತ್ತು ಸಮಸ್ಯೆಯನ್ನು ರಾಜಕೀಯವಾಗಿ ಶಾಶ್ವತವಾಗಿ ಪರಿಹರಿಸುವ ಕ್ರಮಗಳ ಬಗ್ಗೆ ಅದು ಯಾವುದೇ ಗಮನ ಹರಿಸಿಲ್ಲ. ಶ್ರೀಲಂಕಾದ ಸಂವಿಧಾನದ ಚೌಕಟ್ಟಿನಲ್ಲಿ ಪರಿಹಾರ ಕಂಡುಕೊಳ್ಳುವತ್ತ ಮೊದಲ ಹೆಜ್ಜೆ ಆಗಬಲ್ಲ ಮತ್ತು ಸಾಕಷ್ಟು ಸಹಮತ ಇರುವ 13 ನೇ ಸಂವಿಧಾನ ತಿದ್ದುಪಡಿಯನ್ನು ತರುವತ್ತ ಶ್ರೀಲಂಕಾ ಸರ್ಕಾರ ಗಮನ ಹರಿಸಬೇಕು.

▲

ವಸಾಹತುಶಾಹಿಗಳ ಏಜೆಂಟನಿಗೆ ದಿಲ್ಲಿ ಸನ್ಮಾನ!

ದೇಶದ ರಾಜಧಾನಿ ದಿಲ್ಲಿಗೆ ವರ್ಗಾವಣೆಗೊಂಡು ನೂರು ವರ್ಷಗಳಾಗುತ್ತಿರುವ ಸಂದರ್ಭದಲ್ಲಿ ದಿಲ್ಲಿಯ ವಿಂಡ್ಸರ್ ಪ್ಲೇಸ್ ಎಂಬ ಸ್ಥಳಕ್ಕೆ ಸರ್ ಶೋಭಾಸಿಂಗ್ ಹೆಸರಿಡಬೇಕೆಂಬ ಒಂದು ಖಾಸಗಿ ಸಂಘಟನೆಯ ಪ್ರಸ್ತಾಪವನ್ನು ದಿಲ್ಲಿ ಸರಕಾರ ಸ್ವೀಕರಿಸಿದೆ ಎಂದು ವರದಿಯಾಗಿದೆ.

ಈ ಸರ್ ಶೋಭಾಸಿಂಗ್ ಎಂಬಾತ ಯಾರು ಗೊತ್ತೇ? ಮಹಾನ್ ಕ್ರಾಂತಿಕಾರಿಗಳಾದ ಭಗತ್ ಸಿಂಗ್ ಮತ್ತು ಬಟುಕೇಶ್ವರ ದತ್ ವಿರುದ್ಧ ಬ್ರಿಟಿಶ್ ಕೋರ್ಟಿನಲ್ಲಿ ಅಸೆಂಬ್ಲಿ ಬಾಂಬ್ ಮೊಕದ್ದಮೆಯಲ್ಲಿ ಸಾಕ್ಷಿಯಾಗಿ ನಿಂತಿದ್ದಾತ. ಪ್ರಖ್ಯಾತ ಲೇಖಕ ಎ.ಜಿ.ನೂರಾಣಿಯವರು ತಮ್ಮ ಕೃತಿ 'ದಿ ಟ್ರಯಲ್ ಆಫ್ ಭಗತ್ ಸಿಂಗ್'(ಭಗತ್ ಸಿಂಗ್ ವಿಚಾರಣೆ)ನಲ್ಲಿ ಹೇಗೆ ಈ ವ್ಯಕ್ತಿ ಭಗತ್ ಸಿಂಗ್ ರವರನ್ನು ಬಂಧಿಸುವಲ್ಲಿ ಬ್ರಿಟಿಶ್ ಪೋಲೀಸರಿಗೆ ಸಕ್ರಿಯ ನೀಡಿದ, ನಂತರ ಕೋರ್ಟಿನಲ್ಲೂ ಸಾಕ್ಷಿ ಕೊಟ್ಟ ಎಂಬುದಕ್ಕೆ ಸಾಕಷ್ಟು ಪುರಾವೆ ಕೊಟ್ಟಿದ್ದಾರೆ.

ಇಂತಹ ದೇಶದ್ರೋಹದ ಕೆಲಸಕ್ಕೆ ಆತನಿಗೆ ಬ್ರಿಟಿಶ್ ವಸಾಹತುಶಾಹಿಗಳಿಂದ ಸಾಕಷ್ಟು ವರದಾನಗಳೂ ಸಿಕ್ಕವು. ದಿಲ್ಲಿಯಲ್ಲಿ ಹೀಗೆ ಅಗ್ಗಬೆಲೆಯಲ್ಲಿ ಸಿಕ್ಕ ನಿವೇಶನಗಳಲ್ಲಿಯೇ ಆತ ಕನಾಟ್ ಪ್ಲೇಸ್ ಮುಂತಾದ ಕಟ್ಟಡಗಳನ್ನು ಕಟ್ಟಿಸಿದ. ಇಂತಹವನಿಗೆ ಸನ್ಮಾನ ಸಾಮ್ರಾಜ್ಯಶಾಹಿಯ ಅಡಿಯಾಳು ಮಿತ್ರನಾಗಲು ಹಂಬಲಿಸುತ್ತಿರುವ ಹೊಸ ಆಳುವ ಮಂದಿಯ ಮನೋಭಾವದ ಪ್ರತೀಕ.

ಈಗ ವಿಂಡ್ಸರ್ ಪ್ಲೇಸ್‌ಗೆ ಆತನ ಹೆಸರಿಡುವುದು ಭಗತ್ ಸಿಂಗ್ ಮತ್ತು ಆತನ ಸಂಗಾತಿಗಳ ನೆನಪಿಗೆ ಮಾತ್ರವಲ್ಲ, ಶೋಭಾಸಿಂಗ್‌ನಂತೆ ಬ್ರಿಟಿಶರ ಏಜೆಂಟರಾಗಲು ಇಷ್ಟಪಡದೆ ಬ್ರಿಟಿಶ್ ವಸಾಹತುಶಾಹಿಗಳ ದಮನಕ್ಕೆ ಎದೆಯೊಡ್ಡಿದ ಲಕ್ಷಾಂತರ ದೇಶಪ್ರೇಮಿಗಳಿಗೆ ಮಾಡುವ ಮಹಾ ಅವಮಾನ ಎಂದು ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ದಿಲ್ಲಿಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದು ಈ ಪ್ರಸ್ತಾವವನ್ನು ಹಿಂತೆಗೆದುಕೊಳ್ಳುವಂತೆ ಆಗ್ರಹಿಸಿದೆ.

ರೇಷನ್ ಬದಲಿಗೆ ನಗದು-ನೋಟು!?

1997ರಲ್ಲಿ ರಾಷ್ಟ್ರದಲ್ಲಿದ್ದ 36% ಬಿ.ಪಿ.ಎಲ್. ಕಾರ್ಡುದಾರರ ಸಂಖ್ಯೆಯನ್ನು 2002 ರ ವೇಳೆಗೆ 17.7%ಗೆ ಇಳಿಸಿ, 2006-07ರ ವೇಳೆಗೆ 9.2%ಗೆ ಇಳಿಸಿ, 2011-12 ರ ವೇಳೆಗೆ 4.4%ಗೆ ಇಳಿಸುವ ಅಂದಾಜನ್ನು ಹೊಂದಿದ್ದ ರಾಷ್ಟ್ರೀಯ ಯೋಜನಾ ಆಯೋಗ ಹೊಸ ಆರ್ಥಿಕ ನೀತಿಗಳಿಗನುಗುಣವಾಗಿ ಬಡತನವೇ ಕಾಣೆಯಾಗಿದೆ ಎಂಬುದನ್ನು ಬಿಂಬಿಸಲು ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ಅವೈಜ್ಞಾನಿಕ ಮತ್ತು ಅಸಂಬದ್ಧ ಬಿ.ಪಿ.ಎಲ್. ಸಮೀಕ್ಷೆಗಳ ಮೂಲಕ ಬಡವರು ಕಾಣೆಯಾಗಿಸುತ್ತಾ ಬರುತ್ತಿದೆ. ಆದರ ಮುಂದುವರಿಕೆಯ ಭಾಗವೇ. ಇನ್ನೇನು ಸಧ್ಯದಲ್ಲಿ ಬರಲಿರುವ ಹೊಸ ಸಮೀಕ್ಷೆಗಳು - ಅಸಮೀಕ್ಷೆಗಳು ನಡೆದವೋ ಆದರೆ ರಾಷ್ಟ್ರದ 4% ಜನರಿಗೂ ರೇಷನ್ ಕಾರ್ಡುಖಾತ್ರಿ ಇರುವುದಿಲ್ಲ. ಸಾಲದೆಂದು ಆಹಾರ ಭದ್ರತಾ ಮಸೂದೆಯ ಮೂಲಕ ಪಡಿತರದ ಬದಲಿಗೆ ನಗದನ್ನು ನೀಡುವ ಪ್ರಸ್ತಾಪ ಮುಂದಿಡುತ್ತಿದೆ. ಇದು ಜಾರಿಯಾದರೆ ಆಹಾರದ ಭದ್ರತಾ ವ್ಯವಸ್ಥೆ ಏನಾಗಬಹುದು? ಕೃಷಿಯ ಮೇಲೆ ಯಾವ ಪರಿಣಾಮ ಬೀರಬಹುದು? ರಾಷ್ಟ್ರದ ಆರ್ಥಿಕತೆಯ ಬೆನ್ನಲುಬಾಗಿರುವ ಕೃಷಿ ಸ್ವಾವಲಂಬನೆಯ ಮೇಲಿನ ದಾಳಿಯಾಗಿದ್ದೂ, ಆಹಾರಕ್ಕಾಗಿ ಪರಿತಪಿಸುವ ನಾಳೆಗಳ ಕರಾಳ ಎಚ್ಚರಿಕೆಯಾಗಿವೆ.

○

ಉದಾರೀಕರಣ ನೀತಿಗಳು ಭ್ರಷ್ಟಾಚಾರದ ಚಿಲುಮೆ


ಜನ ಲೋಕಪಾಲ ಮಸೂದೆಯ ಅಂಶಗಳು ಹೇಗೆ ನೌಕರ ವಿರೋಧಿ? ಭ್ರಷ್ಟಾಚಾರ ನಿವಾರಣೆಯ ಪ್ರಶ್ನೆಯಲ್ಲಿ ಗಮನಿಸಬೇಕಾದ ಇನ್ನಷ್ಟು ಮಹತ್ವ ಸಂಗತಿಗಳೇನು? ಓದಿ ಸೀತಾರಾಮ ಯೆಚೂರಿಯವರ ರಾಜ್ಯಸಭೆಯ ಭಾಷಣ.

ಭಾಗ 2

ಈಗ, ಯಾವ ಅಪರಾಧಗಳು ಭ್ರಷ್ಟಾಚಾರ ಕೃತ್ಯದ ಅಡಿಯಲ್ಲಿ ಬರುತ್ತವೆ ಎಂಬ ವಿವರಣೆಯನ್ನು ಭ್ರಷ್ಟಾಚಾರ ತಡೆ ಕಾಯಿದೆಯಲ್ಲಿ ಹೇಳಲಾಗಿದೆ. ಖಾಸಗಿ ಲಾಭಕ್ಕಾಗಿ ಅಥವಾ ಸಂಪತ್ತು ಗಳಿಸಲು ಸಾರ್ವಜನಿಕ ಅಧಿಕಾರ ದುರುಪಯೋಗ ಮಾಡಿಕೊಳ್ಳುವುದನ್ನು ನಿರ್ಬಂಧಿಸಲಾಗಿದೆ. ಖಾಸಗಿ ಲಾಭ ಅಥವಾ ಸಂಫತ್ತ ಗಳಿಕೆ ಇಲ್ಲದಿದ್ದಾಗ್ಯೂ ರಿಯಾಯಿತಿ ನೀಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುವುದೂ ಕೂಡ ಭ್ರಷ್ಟಾಚಾರವಾಗುತ್ತದೆ. ಅಪರಾಧ ಮಾಡುವುದು ಮಾತ್ರ ಭ್ರಷ್ಟಾಚಾರವಾಗಿರದೆ ಕರ್ತವ್ಯ ಲೋಪ ಅಥವಾ ಕರ್ತವ್ಯ ಚ್ಯುತಿ ಕೂಡ ಭ್ರಷ್ಟಾಚಾರದ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ, ಪರೋಕ್ಷವಾಗಿ, ಇಡೀ 2ಜಿ ಸ್ಪೆಕ್ಟ್ರಂ ಪ್ರಕ್ರಿಯೆಯನ್ನು ನೋಡಿದಾಗ ಯಾರಿಗೂ ಒಂದು ಪೈಸೆಯನ್ನೂ ಕೊಟ್ಟಿದ್ದು ಕಾಣುವುದಿಲ್ಲ. ಆದರೆ ಹಗರಣ ಆಗಿದೆ. ಷೇರುಗಳನ್ನು ಕೊಳ್ಳಲಾಗಿದೆ. ಷೇರುಗಳನ್ನು ಮಾರಲಾಗಿದೆ. ಎಲ್ಲವೂ ಆಗಿದೆ, ಆದರೆ ನ್ಯಾಯಬದ್ಧವಾಗಿ. ಈಗ ನಮ್ಮ ಸಂಪರ್ಕ ಸಚಿವರು ಹೇಳ್ತಾ ಇದಾರೆ 'ತಮ್ಮ ಬಂಡವಾಳ ಹೆಚ್ಚಿಸಿಕೊಳ್ಳಲು ಕಂಪನಿಗಳು ತಮ್ಮ ಷೇರುಗಳನ್ನು ಮಾರಿದರೆ ಏನು ತಪ್ಪು?' ಹೌದು, ಏನೂ ತಪ್ಪಿಲ್ಲ. ಆದರೆ 2ಜಿ ಲೈಸೆನ್ಸ್ ಪಡೆಯುವುದಕ್ಕೂ ಮುಂಚೆ ಮಾರಾಟ ಮಾಡದೆ ಲೈಸೆನ್ಸ್ ಪಡೆದು ಷೇರುಗಳ ಮೌಲ್ಯ ಹೆಚ್ಚಾದ ಮೇಲೆ ಷೇರುಗಳನ್ನು ಮಾರಿದ್ದಾರೆ. ಆದ್ದರಿಂದ ಭ್ರಷ್ಟಾಚಾರ ತಡೆ ಕಾಯಿದೆಯಲ್ಲಿರುವ ಭ್ರಷ್ಟಾಚಾರದ ವ್ಯಾಖ್ಯಾನವನ್ನು ಬದಲಾಯಿಸಬೇಕು.

ಎರಡನೇ ಅಂಶವೇನೆಂದರೆ ಲೋಕಪಾಲ್ ಮಸೂದೆ ಪರಿಣಾಮಕಾರಿಯಾಗಿರಬೇಕು. ವಿರೋಧ ಪಕ್ಷದ ನಾಯಕರು ಹೇಳಿದಂತೆ ಜನ ಲೋಕಪಾಲ್ ಮಸೂದೆಯಲ್ಲಿ ಕೆಲವು ಸಂವಿಧಾನಬಾಹಿರ ಅಂಶಗಳಿವೆ. ಪ್ರಮುಖವಾಗಿ 105ನೇ ಪರಿಚ್ಛೇದ ಮತ್ತು ಸರ್ಕಾರಿ ನೌಕರರ ಕುರಿತ 311 ಪರಿಚ್ಛೇದ. ಸಂಸತ್ತು ಸಂವಿಧಾನ ಬಾಹಿರ ಕಾನೂನನ್ನು ಅಂಗೀಕರಿಸಲು ಸಾಧ್ಯವಿಲ್ಲ. ಅದಕ್ಕೂ ಮೊದಲು ಆ ವಿಷಯಗಳ ಕುರಿತು ಸಂವಿಧಾನ ತಿದ್ದುಪಡಿಯನ್ನು ಅಂಗೀಕರಿಸಿದ ಮೇಲೆ ಆ ಕಾನೂನನ್ನು ಅಂಗೀಕರಿಸಬಹುದು. ಆ ಹಕ್ಕುಗಳು ಬಹಳ ಪ್ರಮುಖವಾದದ್ದು. ಪರಿಚ್ಛೇದ 311 ಸರ್ಕಾರಿ ನೌಕರರ ಸಂವಿಧಾನ ಬದ್ಧ ಹಕ್ಕುಗಳ ಕುರಿತು ಇದೆ. ಲೋಕಪಾಲ್ ಕಾಯಿದೆಯಡಿಯಲ್ಲಿ ಬರುತ್ತೀರಾದ್ದರಿಂದ 311ನೇ ಪರಿಚ್ಛೇದದಡಿಯಲ್ಲಿನ ಹಕ್ಕುಗಳನ್ನು ನೀಡಲಾಗುವುದಿಲ್ಲ ಎಂದು ಹೇಳಲು ಸಾಧ್ಯವೆ? ಅವು ಗಂಭೀರ ವಿಚಾರಗಳು. ಅವುಗಳ ಬಗ್ಗೆ ವ್ಯಾಪಕ ಚರ್ಚೆಯಾಗಬೇಕು.

ನಾನೀಗಾಗಲೇ ಹೇಳಿದಂತೆ ಈ ಎಲ್ಲಾ ಮಸೂದೆಗಳಲ್ಲೂ ಧನಾತ್ಮಕ ಹಾಗೂ ಋಣಾತ್ಮಕ ಅಂಶಗಳಿವೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಒಂದು ಹೊಸ ಮಸೂದೆಯನ್ನು ತರಲು ನಮಗೆ ಸಾಧ್ಯವಾಗಬೇಕು. ಬಹಳ ದಿನಗಳಿಂದ ನಾವು



ಹೇಳುತ್ತಿರುವಂತೆ ಲೋಕಪಾಲ್ ಮಸೂದೆಯ ಜತೆಯಲ್ಲಿ ರಾಷ್ಟ್ರೀಯ ನ್ಯಾಯಾಧಿಕರಣ ಪ್ರಾಧಿಕಾರವೊಂದನ್ನು ಸ್ಥಾಪಿಸಬೇಕು. ಮೊಟ್ಟಮೊದಲ ಬಾರಿಗೆ ಒಬ್ಬ ಉಚ್ಚನ್ಯಾಯಾಲಯದ ನ್ಯಾಯಾಧೀಶರ ವಿರುದ್ಧ ಅತ್ಯಂತ ತೊಡಕಿನ ಪ್ರಕ್ರಿಯೆಯ ಮೂಲಕ ಖಂಡನಾ ನಿರ್ಣಯ ಅಂಗೀಕರಿಸಲು ಸಾಧ್ಯವಾಗಿದೆ. ಅದು ಲೋಕಸಭೆಗೆ ಹೋಗಬೇಕಿದೆ. ಆದರೆ ಆ ವಿಧಾನ ಬಹಳ ತೊಡಕಿನದ್ದು. ಆದ್ದರಿಂದ ರಾಷ್ಟ್ರೀಯ ನ್ಯಾಯಾಧಿಕರಣ ಪ್ರಾಧಿಕಾರ ಅಥವಾ ಉತ್ತರದಾಯಿತ್ವ ಮಸೂದೆಯೊಂದನ್ನು ತರಬೇಕು.

ಮೂರನೆಯದಾಗಿ, ಚುನಾವಣಾ ಸುಧಾರಣೆಗಳು ಬಹಳ ಮುಖ್ಯ. ಚುನಾವಣೆಗಳ ಮೇಲಿರುವ ಧನಬಲದ ಕಪಿಮುಷ್ಠಿಯನ್ನು ಹಿಮ್ಮೆಟ್ಟಿಸಲು ಚುನಾವಣಾ ಸುಧಾರಣೆಗಳಾಗಲೇಬೇಕು. ನಾನು ನನ್ನ ಹಿಂದಿನ ಅವಧಿಯಲ್ಲೂ ಹೇಳಿದ್ದೆ, ಈಗಲೂ ಹೇಳುತ್ತೇನೆ ನಮಗೆ ಬಹಳ ಜನರಿಗೆ ಅನಿಸುತ್ತಿದೆ, ಎಡಪಕ್ಷದವರು ಮತ್ತೆ ಆರಿಸಿಬರುವುದು ಕಷ್ಟ; ಏಕೆಂದರೆ ಜನ ನಮ್ಮನ್ನು ತಿರಸ್ಕರಿದ್ದಾರೆ ಎಂದಲ್ಲ, ನಮಗೆ ಚುನಾವಣಾ ವಚ್ಚ ಭರಿಸುವುದಕ್ಕಾಗುತ್ತಿಲ್ಲ. ಧನಬಲ ಮತ್ತು ಬಾಹುಬಲ ಕಡಿಮೆಯಾಗಬೇಕು; ಧನಬಲ ಕಡಿಮೆ ಮಾಡಲು ರಾಜಕೀಯ ಪಕ್ಷಗಳಿಗೆ ಖಾಸಗಿ ಉದ್ದಿಮೆಗಳ ವಂತಿಗೆಯನ್ನು ನಿಶೇಧಿಸಲು ಇಡೀ ಸಭೆ ಅತ್ಯಂತ ಶಾಂತ ಮನಸ್ಸಿನಿಂದ ಪರಿಗಣಿಸಲು ಮುಂದಾಗಬೇಕು. ಭಾರತದ ಪ್ರಜಾಪ್ರಭುತ್ವವನ್ನು ಬಲಪಡಿಸಲು ಖಾಸಗಿ ಉದ್ದಿಮೆಗಳು ಸಹಾಯ ಮಾಡಬೇಕು; ಚುನಾವಣಾ ಆಯೋಗಕ್ಕೋ ಅಥವಾ ಇನ್ನಾವುದಾದರೂ ಸಂಸ್ಥೆಗೆ ಅವರು ವಂತಿಗೆ ನೀಡಲಿ; ಸರ್ಕಾರವೇ ಆ ಹಣವನ್ನು ಚುನಾವಣಾ ವೆಚ್ಚ ಭರಿಸಲು ಪಕ್ಷಗಳಿಗೆ ನೀಡುವಂತಾಗಬೇಕು. ಒಂದು ಪಕ್ಷ ಹಾಗೂ ಒಂದು ಖಾಸಗಿ ಉದ್ದಿಮೆಯ ನಡುವೆ ಒಂದು ಖಾಸಗಿ ವ್ಯವಹಾರವಾಗಬಾರದು. ಅಲ್ಲೇ ಭ್ರಷ್ಟಾಚಾರ ಹುಟ್ಟುವುದು.

ನಾಲ್ಕನೆಯ ಮತ್ತು ಕೊನೆಯ ಅಂಶ: ಕಪ್ಪು ಹಣವನ್ನು ನಿಭಾಯಿಸುವುದು. ಕಪ್ಪುಹಣವನ್ನು ನಮ್ಮ ದೇಶಕ್ಕೆ ಹಿಂದಕ್ಕೆ ತರಬೇಕು ಅಂತ ಎಲ್ಲರೂ ಹೇಳುತ್ತಿದ್ದಾರೆ. ಅದರ ಬಗ್ಗೆ ಎರಡಭಿಪ್ರಾಯವಿಲ್ಲ. ಆದರೆ ಅದರ ಉಗಮ ಹೇಗಾಗುತ್ತದೆ? ಅದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ. ಹಣದ ಸಾಗಣೆ ಹೇಗಾಗುತ್ತದೆ? ಅದರ ಕುರಿತು ಸ್ವಲ್ಪ ಯೋಚನೆ ಮಾಡಿ. ಅನೇಕ ದೇಶಗಳ ಜತೆ ನಾವು ಹೊಂದಿರುವ ಎರಡು ಬಾರಿ ತೆರಿಗೆ ಹಾಕುವುದನ್ನು ನಿಲ್ಲಿಸುವ ಒಪ್ಪಂದ(ಡಬಲ್ ಟ್ಯಾಕ್ಸೇಷನ್ ಅವಾಯ್ಡೆನ್ಸ್ ಅಗ್ರಿಮೆಂಟ್)ಗಳನ್ನು ಪುನರ್ಪರಿಶೀಲಿಸಿ. ತೆರಿಗೆಯೇ ಇಲ್ಲದ ದೇಶದೊಂದಿಗೆ ಅಂತಹ ಒಪ್ಪಂದವನ್ನು ನೀವು ಹೊಂದಲು ಸಾಧ್ಯವಿಲ್ಲ. ಮಾರಿಷಸ್ ನಲ್ಲಿ ಬಂಡವಾಳ ಗಳಿಕೆ(ಕ್ಯಾಪಿಟಲ್ ಗೈನ್ಸ್) ತೆರಿಗೆ ಇಲ್ಲ. ಆದರೆ ಆ ದೇಶದೊಂದಿಗೆ ನಾವು ಈ ಒಪ್ಪಂದವನ್ನು ಮಾಡಿಕೊಂಡಿದ್ದೇವೆ. ಇದು ಹಣ ಸಾಗಣೆಗೆ ಕಳ್ಳದಾರಿ ಮಾಡಿಕೊಡುವುದಲ್ಲವೆ? ಸಟ್ಟಾ ವ್ಯಾಪಾರದ ಮೂಲಕ ಹಣ ಸಾಗಣೆ ಮಾಡುವ ಪ್ರಶ್ನೆ ಇದೆ. ಸಟ್ಟಾ ವ್ಯಾಪಾರಕ್ಕೆ ತಡೆಹಾಕಲು ಟೋಬಿನ್ ತೆರಿಗೆ ವಿಧಿಸಲು ಗಂಭೀರ ಆಲೋಚನೆ ಮಾಡಬೇಕು. ಏಕೆಂದರೆ ದೊಡ್ಡ ರೀತಿಯಲ್ಲಿ ಈ ಸಟ್ಟಾ ವ್ಯಾಪಾರ ನಡೆಯುತ್ತಿದ್ದು ಅಪಾರ ಹಣ ಸಾಗಣೆಗೆ ಅವಕಾಶ ಮಾಡಿಕೊಡುತ್ತಿದೆ. ಹಣಕಾಸಿನ ವ್ಯವಹಾರಗಳ ಮೇಲೆ ಕನಿಷ್ಠ ತೆರಿಗೆಯನ್ನು ವಿಧಿಸಬೇಕು.

ಅದು ವಿವಾದಾತ್ಮಕ ವಿಷಯ ಆದರೆ ಜಗತ್ತು ಇಂದು ಆ ದಿಕ್ಕಿನಲ್ಲಿ ಹೋಗುತ್ತಿದೆ. ಈಗ ಬಲಪಂಥೀಯ ಅರ್ಥಶಾಸ್ತ್ರಜ್ಞರು ಇದ್ದಾರೆ. ಅವರಲ್ಲೊಬ್ಬರಾಗಿರುವ ಚಾರ್ಲ್ಸ್ ಮೂರ್ ಡೈಲಿ ಟೆಲಿಗ್ರಾಫ್ ಮತ್ತು ದಿ ಅಬ್ಸರ್ವರ್ ಪತ್ರಿಕೆಗಳ ಸಂಪಾದಕರಾಗಿದ್ದರು ಮತ್ತು ಮಾರ್ಗರೆಟ್ ಥ್ಯಾಚರ್‌ಳ ಆತ್ಮಕತೆ ಬರೆದಿದ್ದಾರೆ ಕೂಡ. ಆತ ಈಗ ಹೇಳುತ್ತಿದ್ದಾನೆ "ಎಡಪಂಥೀಯರು ಸರಿ ಎಂಬ ತೀರ್ಮಾನಕ್ಕೆ ನಾನು ಬರುತ್ತಿದ್ದೇನೆ ಅಂತ ನನಗನಿಸುತ್ತಿದೆ". ಸಟ್ಟಾ ವ್ಯಾಪಾರವನ್ನು ನಿಯಂತ್ರಿಸಬೇಕೆಂದು ಆತ ಹೇಳುತ್ತಿದ್ದಾನೆ. ಇವರ್‍ಯಾರೂ ಸಾಲದು ಅಂತ ಈಗ ಆದರಣೀಯ ಪೋಪ್ ಕೂಡ "ಮಾರುಕಟ್ಟೆಗಳೇ ಜನರನ್ನು ರಕ್ಷಿಸಲು ಸಾಧ್ಯವಿಲ್ಲ, ಜನಕೇಂದ್ರಿತ ಆರ್ಥಿಕ ಸುಧಾರಣೆಗಳನ್ನು ನೀವು ತರಬೇಕು." ಎಂದು ಉಪದೇಶ ಮಾಡುತ್ತಿದ್ದಾರೆ. ಅದೂ ಅವರು ಈ ಭಾಷಣವನ್ನು ವ್ಯಾಟಿಕನ್‌ನಿಂದ ಮಾಡಿದ್ದಾರೆ. ಆದ್ದರಿಂದ ಈಗಿನ ಪ್ರಶ್ನೆ ಇರುವುದು ಈ ಹಣ ಸಾಗಣೆಯನ್ನು ತಡೆಯುವುದು ಹೇಗೆ ಎಂದು.

ಆದ್ದರಿಂದ, ಭ್ರಷ್ಟಾಚಾರವನ್ನು ತೊಡೆದುಹಾಕಬೇಕೆಂದರೆ ನೈಸರ್ಗಿಕ ಸಂಪನ್ಮೂಲಗಳನ್ನು ರಾಷ್ಟ್ರೀಕರಿಸಬೇಕು ಮತ್ತು ಗಣಿಗಾರಿಕೆಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು; ಭೂಮಿಯ ಪ್ರಶ್ನೆ ಮತ್ತು ಹೊಸ ಭೂಸ್ವಾಧೀನತಾ ಕಾಯಿದೆಗಳ ಅಗತ್ಯತೆಯನ್ನು ಸರ್ಕಾರ ಈ ಕೂಡಲೇ ಅರಿಯಬೇಕು.

ಅಂತಿಮವಾಗಿ, ಸರ್ಕಾರ ಸುಧಾರಣೆಗಳ ಬಗ್ಗೆ ಗಂಭೀರ ಪುನರ್ಪರಿಶೀಲನೆ ನಡೆಸಬೇಕು. ಉದಾರೀಕರಣ ನೀತಿಗಳಿಂದಾಗಿ ಉಂಟಾಗಿರುವ ತೊಂದರೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಬೇಕು. ಭ್ರಷ್ಟಾಚಾರ ತೊಡೆದುಹಾಕಲು ಒಂದು ಲೋಕಪಾಲ್ ಮಸೂದೆ ಸಾಲದು. ಎಲ್ಲಾ ಉತ್ತಮ ಅಂಶಗಳನ್ನು ಹೊಂದಿರುವ ಹೊಸ ಮಸೂದೆಯನ್ನು ಮಂಡಿಸಬೇಕು.

ಕನ್ನಡಕ್ಕೆ: ತಡಗಳಲೆ ಸುರೇಂದ್ರ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH